

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 1 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 224 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಸಿಬಿಐ ತನಿಖೆಗೆ

- ರಾಜ್ಯ ಸರ್ಕಾರ ಆದೇಶ
- ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಗೃಹ ಸಚಿವ ಡಾ.ಪರಮೇಶ್ವರ್‌ಗೆ ದೂರವಾಣಿ ಮೂಲಕ ಸೂಚನೆ

ಬೆಂಗಳೂರು, ನ.30(ಕೆಎಂಶಿ, ಪಿಎಂ)–ರಾಜ್ಯವನ್ನೇ ತಲ್ಲಣಗೊಳಿಸಿದ ಹೆಣ್ಣು ಭ್ರೂಣ ಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಒಳಪಡಿಸಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ರಾತ್ರಿ ದೂರವಾಣಿ ಮೂಲಕ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರನ್ನು ಸಂಪರ್ಕಿಸಿ ಸೂಚನೆ ನೀಡಿದ್ದಾರೆ ಎಂದು ಮುಖ್ಯಮಂತ್ರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿದ್ದರೂ, ಗರ್ಭಿಣಿ ಸ್ತ್ರೀಯರನ್ನು ಬೆಂಗಳೂರು ಮತ್ತು ಇತರೆಡೆಯಿಂದ ಕರೆತಂದು ಮಂಡ್ಯ ಜಿಲ್ಲೆಯಲ್ಲಿ ಭ್ರೂಣ ಲಿಂಗ ಪತ್ತೆ ಮಾಡಿ ನಂತರ ಮೈಸೂರಿನಲ್ಲಿ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿತ್ತು ಎಂಬುದು ಪ್ರಾಥಮಿಕ ಹಂತದ ತನಿಖೆಯಿಂದ ಗೊತ್ತಾಗಿದೆ. ಈ ಪ್ರಕರಣದ ವ್ಯಾಪ್ತಿ ಒಂದು ಠಾಣೆ ಅಥವಾ ಜಿಲ್ಲೆಗೆ ಸೀಮಿತವಾಗಿದ್ದಲ್ಲದೇ, ಹಲವಾರು ಜಿಲ್ಲೆಗಳಲ್ಲಿ ನಡೆದಿರುವ ಕೃತ್ಯವಾಗಿರುವುದರಿಂದ ಹಾಗೂ ರಾಜ್ಯದ ಬೇರೆಡೆಗಳಲ್ಲೂ ಈ ●9ನೇ ಪುಟಕ್ಕೆ

ಎರಡು ಸಾವಿರ ಬೆಳೆ ಪರಿಹಾರ

- ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ಕೇಂದ್ರದಿಂದ ಪರಿಹಾರ ಬರುವವರೆಗೆ ಕಾಯಲಾಗದು; ಸಂಕಷ್ಟದಲ್ಲಿರುವ ರೈತರ ನೆರವಿಗೆ ನಿರ್ಧಾರ



ಬೆಂಗಳೂರು, ನ.30 (ಕೆಎಂಶಿ)– ಕೇಂದ್ರ ಸರ್ಕಾರ ಬೆಳೆ ಪರಿಹಾರ ನೀಡಲು ಮೀನಾಮೇಷ ಎಣಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವೇ ಅರ್ಹ ರೈತರಿಗೆ ತಲಾ ಎರಡು ಸಾವಿರ ರೂ. ತುರ್ತು ಬೆಳೆ ಪರಿ ಹಾರ ಘೋಷಣೆ ಮಾಡಿದೆ.

ಗೃಹ ಕಚೇರಿ ಕೃಷ್ಣಾದಲ್ಲಿ ತುರ್ತು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದ ಮುಖ್ಯಮಂತ್ರಿ ಅವರು, ಕೇಂದ್ರದಿಂದ ಹಣ ಬರುವವರೆಗೂ ಕಾಯಲು ಸಾಧ್ಯವಿಲ್ಲ. ಹಾಗಾಗಿ ರಾಜ್ಯ ಸರ್ಕಾರವೇ ಮೊದಲ ಕಂತು ಬಿಡುಗಡೆ ಮಾಡಿದೆ.

ಇದನ್ನು ಹೆಕ್ಟೇರ್ ಲೆಕ್ಕದಲ್ಲಿ ನೀಡುತ್ತಿಲ್ಲ. ಬೆಳೆ ಕಳೆದುಕೊಂಡ ಎಲ್ಲಾ ಅರ್ಹ ರೈತರಿಗೆ ಪರಿಹಾರ ನೀಡಲಾಗುತ್ತಿದೆ ಎಂದು ಅವರು ಹೇಳಿದರು. ಕೇಂದ್ರ ಸರ್ಕಾರ ರಾಜ್ಯದ ರೈತರಿಗೆ ಪರಿಹಾರ ಕೊಡಲು ಇನ್ನೂ ಪ್ರಾಥಮಿಕ ಸಭೆಯನ್ನೇ ನಡೆಸದ ಹಿನ್ನೆಲೆಯಲ್ಲಿ ರಾಜ್ಯದಿಂದ ಈ ತುರ್ತು ಕ್ರಮ ಕೈಗೊಳ್ಳಲಾಗಿದೆ. ಕೇಂದ್ರಕ್ಕೆ ಬರೆದ ಪತ್ರಗಳಿಗೂ ಪ್ರತಿಕ್ರಿಯೆ ಇಲ್ಲ. ರಾಜ್ಯದಿಂದ ಮೂವರು ಸಚಿವರು ದೆಹಲಿಗೆ ಹೋದರೂ ಸಕಾರಾತ್ಮಕ ಪ್ರತಿಕ್ರಿಯೆ ಕೇಂದ್ರದಿಂದ ಸಿಕ್ಕಿಲ್ಲ



ಎಂದು ಮುಖ್ಯಮಂತ್ರಿ ಆರೋಪಿಸಿದರು.

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ 150 ಮಾನವ ದಿನಗಳ ಉದ್ಯೋಗ ಕೊಡಲು ಅನುಮತಿ ಕೋರಲಾಗಿತ್ತು. ಅದಕ್ಕೂ ಕೇಂದ್ರ ಇನ್ನೂ ಅನುಮತಿ ನೀಡಿಲ್ಲ. ರಾಜ್ಯದ 223 ತಾಲೂಕುಗಳನ್ನು ಬರಪೀಡಿತವೆಂದು ಮೂರು ಹಂತದಲ್ಲಿ ಘೋಷಿಸಿದ್ದೇವೆ. 48.19 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ನಷ್ಟ ಆಗಿದೆ ಎಂದರು. 18171.44 ಕೋಟಿ ರೂ. ಪರಿಹಾರದ ಆರ್ಥಿಕ ನೆರವು ನೀಡಲು ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಕೇಂದ್ರ ನಮ್ಮ ತೆರಿಗೆ ಹಣದ ಪಾಲನ್ನು ನಮಗೆ ವಾಪಸ್ ಕೊಟ್ಟರೂ ಸಾಕು. ಸೆ. 21ರಂದು ಕೇಂದ್ರಕ್ಕೆ ಮೊದಲ ಮನವಿ ಮಾಡಿದ್ದೆವು ಎಂದು ಅವರು ಹೇಳಿದರು. ಕೇಂದ್ರ ಸರ್ಕಾರದ ಅಧಿಕಾರಿಗಳ ನೇತೃತ್ವದ ಅಧ್ಯಯನ ತಂಡ ಅ.4 ರಿಂದ ಅ. 9ರವರೆಗೆ ರಾಜ್ಯ ಪ್ರವಾಸ ಮಾಡಿ ●9ನೇ ಪುಟಕ್ಕೆ

ಮೈಸೂರು–ನಂಜನಗೂಡು ಗಡಿಯಲ್ಲಿ ಹುಲಿರಾಯ ಪ್ರತ್ಯಕ್ಷ

- ದೊಡ್ಡಕಾನ್ಯ ಬಳಿ ಕ್ಯಾಮರಾ ಟ್ರ್ಯಾಪ್‌ನಲ್ಲಿ 'ಹುಲಿ' ಸಂಚಾರ ದೃಶ್ಯ ಸೆರೆ
- ಟಿವಿಎಸ್ ಫ್ಯಾಕ್ಟರಿ ಬಳಿಯೂ ಮುಂಜಾನೆ ಹಾದು ಹೋಗಿದೆ
- ಸರಹದ್ದು ಸ್ಥಾಪನೆಗಾಗಿ ಕಾಡಿಂದ ಬಂದಿರುವ ಒಂದೂವರೆ ವರ್ಷದ ಹುಲಿ
- ಹುಲಿ ಸೆರೆಗೆ ಮೈಸೂರು ವಿಭಾಗದ ಅರಣ್ಯಾಧಿಕಾರಿಗಳಿಂದ ಮುಂದುವರೆದ ಕಾರ್ಯಾಚರಣೆ





ಮೈಸೂರು,ನ.30(ಎಂಟಿವೈ)– ಮೈಸೂರು–ನಂಜನಗೂಡು ಗಡಿಯಲ್ಲಿ ಹುಲಿರಾಯ ಪ್ರತ್ಯಕ್ಷನಾಗಿ ಈ ಭಾಗದ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ್ದಾನೆ.


ಕಳೆದ ರಾತ್ರಿ ಹಾಗೂ ಮುಂಜಾನೆ ಮೈಸೂರು ತಾಲೂಕಿನ ದೊಡ್ಡಕಾನ್ಯ ಬಳಿ ಎರಡು ಪ್ರತ್ಯೇಕ ಸ್ಥಳದಲ್ಲಿ ಹುಲಿ ಸಂಚರಿಸುತ್ತಿರುವ ದೃಶ್ಯ ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆಯಾಗಿದ್ದು, ಬೋನ್‌ನಲ್ಲಿ ಕುಳಿತು ಪಶುವೈದ್ಯರು, ಹುಲಿ ಸೆರೆಗೆ ಮೈಸೂರು ವಿಭಾಗದ ಅರಣ್ಯ ಸಿಬ್ಬಂದಿ ಪ್ಲಾನ್ ಮಾಡಿದ್ದಾರೆ. ಕಳೆದ 5–6 ದಿನಗಳಿಂದ ಮೈಸೂರು–ನಂಜನಗೂಡು ಗಡಿ ಭಾಗದ ಚಿಕ್ಕಕಾನ್ಯ, ದೊಡ್ಡಕಾನ್ಯ, ●9ನೇ ಪುಟಕ್ಕೆ



ಮೈಸೂರಿನ ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ವಿಭಾಗದ ವತಿಯಿಂದ ಆಯೋಜಿಸಿರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳ ಪ್ರದರ್ಶನವನ್ನು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿ ಪ್ರಶಂಸಿಸಿದರು. ಗ್ರಂಥಾಲಯಕ್ಕೆ ಅಗತ್ಯ ಪೀಠೋಪಕರಣಗಳನ್ನು ಕಲ್ಪಿಸುವುದಾಗಿ ಭರವಸೆ ನೀಡಿದರು. ಈ ವೇಳೆ ಪ್ರಾಂಶುಪಾಲೆ ಪ್ರೊ.ಎಂ.ಎಸ್.ಅನಿತಾ, ಪ್ರೊ.ಸಿ.ಹೇಮಾವತಿ, ಕೆ.ಸಿ.ಭದ್ರಗಿರಿ, ವ್ಯವಸ್ಥಾಪಕರಾದ ಆರೀಫ್ ಸುಲ್ತಾನ, ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿದ್ದರು. ಒಂದು ವಾರ ಪುಸ್ತಕ ಪ್ರದರ್ಶನ ಇರಲಿದೆ ಎಂದು ಗ್ರಂಥಪಾಲಕಿ ಡಾ.ರೇಖಾ ತಿಳಿಸಿದ್ದಾರೆ.

ಇಂದು ನೆನಪಿನ ಅಲೆಗಳು ಲೋಕಾರ್ಪಣೆ

ಮೈಸೂರು,ನ.30–ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ ಸಂಯುಕ್ತವಾಗಿ ಡಿ.1ರಂದು ಬೆಳಗ್ಗೆ 10.45ಕ್ಕೆ ವಿಜಯನಗರದ ಮೊದಲ ಹಂತದಲ್ಲಿನ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಮಮತಾ ಶ್ರೀಧರ್ ಅವರ 'ನೆನಪಿನ ಅಲೆಗಳು' ಕವನ ಸಂಕಲನ ಲೋಕಾರ್ಪಣೆ ಸಮಾರಂಭವನ್ನು ಏರ್ಪಡಿಸಲಾಗಿದೆ.



ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸುವರು. ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ.ಸತೀಶ್‌ಕುಮಾರ್ ಎಸ್. ಹೊಸಮನೆ ಕೃತಿ ಲೋಕಾರ್ಪಣೆ ಮಾಡುವರು. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಕೃತಿ ಕುರಿತು ಮಾತನಾಡುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಅರಸು ಮಂಡಲಿ ಅಧ್ಯಕ್ಷ ಹೆಚ್‌ಎಂಟಿ. ಲಿಂಗರಾಜೇ ಅರಸ್, ವೈದ್ಯ ವಾರ್ತಾ ಪ್ರಕಾಶನ ನಿರ್ದೇಶಕ ಡಾ.ಎಂ.ಜಿ.ಆರ್. ಅರಸ್, ಕೃತಿ ಕರ್ತೃವೂ ಆದ ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ತಿನ ಅಧ್ಯಕ್ಷೆ ಮಮತಾ ಶ್ರೀಧರ್ ಉಪಸ್ಥಿತರಿರುವರು.



ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಯೋಗ ಮಂಟಪ ಆವರಣದಲ್ಲಿ 68ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಉದ್ಯಮಿ ಜಗನ್ನಾಥ್ ಶೆಣೈ ಅವರು ವಿಜ್ಞಾನಿಗಳಾದ ರಾಮಚಂದ್ರ, ರಾಮಕೃಷ್ಣ, ಅಂತಾರಾಷ್ಟ್ರೀಯ ಕ್ರೀಡಾಪಟು ರಿಯಾ ಅಚ್ಚಯ್ಯ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಕಾಳಿಂಗು, ಕಾರ್ಯದರ್ಶಿ ಉದಯಕುಮಾರ್, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಭಾರತೀಯ ಜೀವ ವಿಮಾ ನಿಗಮ ಮೈಸೂರಿನ ಶಾರದಾದೇವಿನಗರ ಶಾಖೆಯ ಉದ್ಯೋಗಿ ಎನ್.ಎಸ್.ಉಮಾ ಅವರು ವಯೋನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಶಾಖಾಧಿಕಾರಿ ಉಮಾಕಾಂತ್, ನಿವೃತ್ತ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಮತ್ತಿತರರು ಸನ್ಮಾನಿಸಿ, ಬೀಳ್ಕೊಡುಗೆ ನೀಡಿದರು.

ನಿಧನ

ಶಾರದಾ



ಮೈಸೂರು, ನ. 30–ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ದಿವಂಗತ ಹೆಚ್.ಪಿ.ಭಾಸ್ಕರ್ ಅವರ ಪತ್ನಿ ಶಾರದಾ (80) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರರಾದ ಹೆಚ್.ಬಿ.ಸತೀಶ್ (ಮೈಸೂರಿನ ನಿರ್ಮಿತಿ ಕೇಂದ್ರದ ಕಾರ್ಯ ನಿರ್ವಾಹಕ ನಿರ್ದೇಶಕರು), ಹೆಚ್.ಬಿ.ಸುರೇಶ್ ಮತ್ತು ಹೆಚ್.ಬಿ. ಪ್ರಕಾಶ್, ಪುತ್ರಿಯರಾದ ಆಶಾ ಮತ್ತು ಸುಜಾತ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಸಂಜೆ ಸ್ವಗ್ರಾಮ ಕೆ.ಆರ್.ನಗರ ತಾಲೂಕು ಸಿದ್ದಾಪುರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಎನ್.ಜಿ.ಕೆ. ಕಾರಂತ್



ಮೈಸೂರಿನ ಸಿಎಫ್‌ಟಿಆರ್‌ಐ ನಿವೃತ್ತ ಉಪನಿರ್ದೇಶಕರು ಹಾಗೂ ಜೆ.ಪಿ.ನಗರದ ನಿವಾಸಿ ಡಾ.ಎನ್.ಜಿ.ಕೆ.ಕಾರಂತ್ (80) ನ.26ರಂದು ಬೆಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನ. 28 ರಂದು ಬೆಂಗಳೂರಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಡಾ. ಎನ್.ಪಿ. ಸೂರ್ಯನಾರಾಯಣ



ಮೈಸೂರಿನ ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಇಂಜಿನಿಯರಿಂಗ್ ಕಾಲೇಜಿನ ಪಾಲಿಮರ್ ಸೈನ್ಸ್ ನಿವೃತ್ತ ಪ್ರಾಧ್ಯಾಪಕರು ಹಾಗೂ ವಿಕ್ರಾಂತ್ ಟೈರ್ಸ್‌ನ ನಿವೃತ್ತ ಮ್ಯಾನೇಜರ್ ಡಾ.ಎನ್.ಪಿ. ಸೂರ್ಯನಾರಾಯಣ (87) ನ.22ರಂದು ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರಿ, ಅಳಿಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನ.22ರಂದು ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿ.ವಿಠ್ಠಲ್



ಮೈಸೂರಿನ ಕುವೆಂಪುನಗರದ ಎಂ–ಬ್ಲಾಕ್ ನಿವಾಸಿ ಸಿ.ವಿಠ್ಠಲ್ (72) ಬುಧವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಸಿ.ವಿಠ್ಠಲ್ ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ ಅಸಿಸ್ಟೆಂಟ್ ಕಂಟ್ರೋಲ್ ಆಫ್ ಅಕೌಂಟ್ಸ್ ಕರ್ತವ್ಯ ನಿರ್ವಹಿಸಿ ನಿವೃತ್ತಿ ನಂತರ ಕುವೆಂಪುನಗರದ ಅವರ ನಿವಾಸದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದರು. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಹಿತ್ಯ ಕ್ಷೇತ್ರದಲ್ಲಿ ಬಂಡವಾಳಶಾಹಿಗಳ ಪ್ರಭಾವ

- ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ.ಹಿ.ಶಿ.ರಾಮಚಂದ್ರೇಗೌಡ ವಿಷಾದ
- ಒಟ್ಟು ಸಮಾಜವನ್ನು ಪ್ರತಿನಿಧಿಸಬೇಕಾದ ಸಾಹಿತ್ಯ ಬಿಡಿಬಿಡಿಯಾಗಿ ಮೌಲ್ಯ ಕಳೆದುಕೊಳ್ಳುತ್ತಿದೆ
- ಹತ್ತು ಕೃತಿಗಳ ಬಿಡುಗಡೆ; ಸಂವಹನ ಸಿರಿ ಪ್ರಶಸ್ತಿ ಪ್ರದಾನ ಸಮಾರಂಭ



ಕನ್ನಡ ರಾಜ್ಯೋತ್ಸವ ಅಂಗವಾಗಿ ಕವಿಯತ್ರಿ ಡಾ.ಲತಾರಾಜಶೇಖರ್ ಅವರಿಗೆ 'ಸಂವಹನ ಸಿರಿ', ಯುವ ಸಾಹಿತ್ಯ ಪ್ರಶಸ್ತಿಯನ್ನು ಎಂ.ಮಹೇಂದ್ರಮೂರ್ತಿ ದೇವನೂರು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜವರಪ್ಪ ಸೇರಿದಂತೆ ಇತರರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ಡಾ.ಹಿ.ಶಿ.ರಾಮಚಂದ್ರೇಗೌಡ, ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಂವಹನ ಟ್ರಸ್ಟ್ ಅಧ್ಯಕ್ಷ ಡಿ.ಎನ್.ಲೋಕಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಸಂವಹನ ಟ್ರಸ್ಟ್ ಅಧ್ಯಕ್ಷ ಡಿ.ಎನ್.ಲೋಕಪ್ಪ ಉಪಸ್ಥಿತರಿದ್ದಾರೆ.

ಮೈಸೂರು, ನ.30(ಎಸ್‌ಪಿಎನ್)– ಸಾಹಿತ್ಯ ಎಂಬುದು ಈ ಹಿಂದೆ ಒಟ್ಟು ಸಮಾಜವನ್ನು ಪ್ರತಿನಿಧಿಸುವ ವಿಷಯವಾಗಿತ್ತು. ಪ್ರಸ್ತುತ ಅದು ಬಿಡಿ ಬಿಡಿಯಾಗಿ ಕಾಣಿಸಿಕೊಳ್ಳುತ್ತಿರುವುದರಿಂದ ತನ್ನ ಮೌಲ್ಯ ಕಳೆದುಕೊಳ್ಳುತ್ತಿದೆ ಎಂದು ಕರ್ನಾಟಕ ಜಾನಪದ ಪರಿಷತ್ತು ರಾಜ್ಯಾಧ್ಯಕ್ಷ ಡಾ.ಹಿ.ಶಿ. ರಾಮಚಂದ್ರೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕಸಾಪ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸಂವಹನ ಟ್ರಸ್ಟ್, ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ ನಡೆದ ವಿವಿಧ ಲೇಖಕರ ಹತ್ತು ಕೃತಿಗಳ ಬಿಡುಗಡೆ, ಹಿರಿಯ ಸಾಹಿತಿಗಳಿಗೆ ಸನ್ಮಾನ, 'ಸಂವಹನ ಸಿರಿ' ಪ್ರಶಸ್ತಿ ಪ್ರದಾನ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಮುದಾಯದಲ್ಲಿ ಸಾಹಿತ್ಯ ಎಂಬುವುದು ಮಾರುಕಟ್ಟೆ ಸರಕಲ್ಲ. ಶ್ರದ್ಧೆ, ಶಿಸ್ತು ಹಾಗೂ ಮನಸ್ಸಿನ ಅನುಭವದಿಂದ ಉಂಟಾಗುವ ಮೌಲ್ಯಯುತ ಉತ್ಪನ್ನ. ಹಾಗಾಗಿ ಕುವೆಂಪು ಅವರ ಪದ್ಯದಲ್ಲಿ ಕವಿಗಳ ಬಗ್ಗೆ ಹೇಳಿದ್ದು, ರಾಜಕಾರಣಿಗಳ ಬಗ್ಗೆ ಹೇಳಿಲ್ಲ. ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಸಮ್ಮೇಳನಗಳು ಸಾಂಸ್ಕೃತಿಕ ಸಮ್ಮೇಳನಗಳಾಗಿ ಬದಲಾಗುತ್ತಿವೆ. ಇದು ಒಂದು ಉತ್ತಮ ಸಂಗತಿ. ಹಾಗಾಗಿ ಕವಿಗಳು ದೇಶದ ಸಾಂಸ್ಕೃತಿಕ ಪ್ರತಿನಿಧಿಗಳು. ಅವರು ಸಮಾಜದ ಮೌಲ್ಯಯುತ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಿ, ನಾಡಿನ ಹೊಸ ಸಾಹಿತ್ಯ, ಪರಂಪರೆ ಉಗಮಕ್ಕೆ ಕಾರಣರಾಗಬೇಕು. ಅಲ್ಲದೆ, ಇಂದು ಮತ್ತೆ ಅಂತಹ ಮೌಲ್ಯಗಳನ್ನು ಅನುಸರಿಸುವ ಅಗತ್ಯವಿದೆ ಎಂದರು.

ಸಾಹಿತ್ಯ ಎಲ್ಲರಿಗೂ ಅಭಿವ್ಯಕ್ತಿ ಸಿಗುವಂತೆ ಮಾಡುತ್ತದೆ. ಬಂಡವಾಳಶಾಹಿಗಳ ವಲಯದ ಹೆಚ್ಚಿನ ಪ್ರಭಾವದಿಂದಾಗಿ ಮೌಲ್ಯಯುತ ಸಾಹಿತ್ಯ ಜಗತ್ತು ಕುಗ್ಗುತ್ತಿದ್ದು, ಎಲ್ಲವೂ ಮಾರುಕಟ್ಟೆ ಕೇಂದ್ರಿತವಾಗುತ್ತಿದೆ. ಹಾಗಾಗಿಯೇ ರಾಜಕಾರಣ, ಶಿಕ್ಷಣ, ಧಾರ್ಮಿಕ ಕ್ಷೇತ್ರದಂತೆ ಸಾಹಿತ್ಯ ಕ್ಷೇತ್ರವೂ ಬಂಡವಾಳಶಾಹಿಗಳ ಕೇಂದ್ರಿತವಾಗುತ್ತಿದೆ. ಇಂದಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯ ಸಹಭಾಗಿತ್ವದ ನೆಪದಲ್ಲಿ ಬೇರೆಯದೇ ಹಾದಿ ಹಿಡಿಯುತ್ತಿದೆ. ಈ ಹಾದಿಯಲ್ಲಿ ಬರುವ ಕಸಾಪ ಸೇರಿದಂತೆ ಇತರೆ ಕನ್ನಡಪರ ಸಂಘಟನೆಗಳು ತಮ್ಮ ಮೌಲ್ಯದ ಹಾದಿ ಬಿಡಬಾರದು ಎಂದು ಕಿವಿಮಾತು ಹೇಳಿದ ಹಿಶಿರಾ, ಪ್ರಸ್ತುತ ಬರಹಗಾರರು ಮೌಲಿಕ ಹೋರಾಟಕ್ಕೆ ಸಜ್ಜಾಗಬೇಕಿದೆ ಎಂದರು.

ಸನ್ಮಾನ: ಇದೇ ವೇಳೆ ಕವಿಯತ್ರಿ ಡಾ.ಲತಾರಾಜಶೇಖರ್ ಅವರಿಗೆ 'ಸಂವಹನ ಸಿರಿ', ಯುವ ಸಾಹಿತ್ಯ ಪ್ರಶಸ್ತಿಯನ್ನು ಎಂ.ಮಹೇಂದ್ರ ಮೂರ್ತಿ ದೇವನೂರು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜವರಪ್ಪ ಅವರನ್ನು ಅಭಿನಂದಿಸಲಾಯಿತು.

'ಹತ್ತು ಕೃತಿಗಳ ಬಿಡುಗಡೆ:ಸಾಹಿತಿ ಸಿಪಿಕೆ ಅವರ 'ಪರಿಗ್ರಹಣ', ಚಂದ್ರಶೇಖರಯ್ಯ ಅವರ 'ಕಾರಮಕ್ಕೆ', ಡಾ.ಎ.ರಂಗಸ್ವಾಮಿ ಅವರ 'ಚಾವುಂಡರಾಯನ ಲೋಕೋಪಕಾರ: ಒಂದು ಅಧ್ಯಯನ', ವೈ.ಎಸ್. ಗೌರಮ್ಮ ಅವರ 'ದಾರ್ಶನಿಕ ಕುವೆಂಪು', ಎಚ್.ಆರ್.ಲೀಲಾವತಿ ಅವರ 'ವಚನ ಸಿರಿ', ಸ.ಚ.ಮಹದೇವ ನಾಯಕ್ ಅವರ 'ಮರಿತಿಮ್ಮ', ಜಿ.ಮುರಿಗೆಪ್ಪಗೌಡ ಅವರ 'ಕರ್ಣ ರಸಾಯನ', ಆರ್.ಸಿ.ಅನುರಾಧ ಅವರ 'ನರರಾಕ್ಷಸರು', ಪ್ರಸನ್ನಮೂರ್ತಿ ಗುರುವಿನಪುರ ಅವರ 'ತೆಂಕಣ ಸೀಮೆಯ ಕಥೆಗಳು' ಮತ್ತು ಕೆ.ಪಿ.ಕೆಂಡಗಣ್ಣಪ್ಪ ಅವರ 'ಸಂಸಾರ ಶೃಂಗಾರ ಜೀವನ ನುಡಿಹನಿಗಳು' ಕೃತಿಗಳು ಬಿಡುಗಡೆಯಾದವು. ಈ ವೇಳೆ ಒಟ್ಟು ಹತ್ತು ಲೇಖಕರ ಕೃತಿಗಳ ಕುರಿತು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ ಮಾತನಾಡಿದರು. ವೇದಿಕೆಯಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಜೆಎಸ್‌ಎಸ್ ಪದವಿ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕಿ ಡಾ.ಹೆಚ್.ಟಿ.ಶೈಲಜಾ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಂವಹನ ಟ್ರಸ್ಟ್ ಅಧ್ಯಕ್ಷ ಡಿ.ಎನ್. ಲೋಕಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಸೇರಿದಂತೆ ಇತರೆ ಮುಖಂಡರಿದ್ದರು.

ಡಿ.3, ಕಣಗಾಲ್ ಚಿತ್ರಗಳ ಗಾನಮೂಲಿಕೆ ಗೀತ ಸಂಜೆ



ಮೈಸೂರು, ನ.30(ಜಿಎ)–ಭೂಮಿಕಾ ಅಸೋಸಿಯೇಟ್ಸ್ ಹಾಗೂ ದಿವಂಗತ ಮೈಕ್ ಚಂದ್ರು ಗೆಳೆಯರ ಬಳಗದ ವತಿಯಿಂದ ಕನ್ನಡ ಚಲನಚಿತ್ರ ನಿರ್ದೇಶಕ ಚಿತ್ರಬ್ರಹ್ಮ ದಿ.ಪುಟ್ಟಣ್ಣ ಕಣಗಾಲ್ ಅವರ ಹುಟ್ಟುಹಬ್ಬದ ಸಂಸ್ಮರಣಾರ್ಥ ಡಿ.3ರಂದು ಸಂಜೆ 5 ಗಂಟೆಗೆ ಕಣಗಾಲ್ ಚಿತ್ರಗಳ ಗಾನಮಾಲಿಕೆ ಗೀತಸಂಜೆ ವಿಶೇಷ ಕಾರ್ಯಕ್ರಮವನ್ನು ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಆಕಾಶವಾಣಿ ಕಲಾವಿದ ಮಂಜುನಾಥ್ ತಿಳಿಸಿದರು.

ನಗರ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತ ಗಾಯಕರಾದ ಶ್ರೀಹರ್ಷ, ನಿತಿನ್ ರಾಜಾರಾಂ ಶಾಸ್ತ್ರಿ, ಮೈಸೂರು ಆನಂದ್, ದಿವ್ಯ ಸಚ್ಚಿದಾನಂದ, ಹಂಸಿನಿ ಎಸ್.ಕುಮಾರ್ ಹಾಡು ಹಾಡಲಿದ್ದಾರೆ. ವಿನಯ್ ರಂಗಧೋಳ್ ರಿದಮ್ ಪ್ಯಾಡ್, ಮೆಲ್ವಿನ್ ಲಿಮಾ ಮತ್ತು ಶರತ್ ಕೀ ಬೋರ್ಡ್, ಪ್ರದೀಪ್ ಕಿಗ್ಗಾಲ್ ಗಿಟಾರ್, ವರ್ಷ ಕೊಳಲು, ಆತ್ಮರಾಮ್ ತಬಲ, ರವಿಕಿರಣ್ ಡೋಲಕ್ ಮೂಲಕ ಸಾಥ್ ನೀಡಲಿದ್ದಾರೆ. ಕಾರ್ಯಕ್ರಮ ವೀಕ್ಷಣೆಗೆ ಉಚಿತ ಪ್ರವೇಶವಿದ್ದು, ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದರು. ಗೋಷ್ಠಿಯಲ್ಲಿ ಭೂಮಿಕಾ ಅಸೋಸಿಯೇಟ್ಸ್ ಸಂಸ್ಥಾಪಕ ಸುರೇಶ್, ಸದಸ್ಯರಾದ ಎಚ್.ಅಶ್ವಥ್ ನಾರಾಯಣ, ವಾಸು, ಮುರಳಿ ಉಪಸ್ಥಿತರಿದ್ದರು.

ಅಶೋಕ ಟೀಕೆಗೆ ನಜರ್‌ಬಾದ್ ನಟರಾಜ್ ಖಂಡನೆ

ಮೈಸೂರು, ನ. 30– ಜನಸ್ಪಂದನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಟಾಚಾರಕ್ಕೆ ಮಾಡುತ್ತಿದ್ದಾರೆ. ಇದೊಂದು ಬೋಗಸ್ ದರ್ಶನ ಎಂಬ ವಿಪಕ್ಷ ನಾಯಕ ಅಶೋಕ ಹೇಳಿಕೆಯನ್ನು ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದಂತೆ ನಡೆದು ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡಿದ್ದು, ಈಗ ಜನಸ್ಪಂದನಾ ಮೂಲಕ ಜನರ ಮನೆ ಬಾಗಿಲಿಗೆ ಸರಕಾರದ ಯೋಜನೆಗಳನ್ನು ತಲುಪಿಸುತ್ತಿದ್ದಾರೆ. ಇದನ್ನು ಸಹಿಸದೇ ಬಿಜೆಪಿಯವರು ಇಲ್ಲಸಲ್ಲದ ಟೀಕೆ ಮಾಡುತ್ತಿದ್ದಾರೆ. ಆಪರೇಷನ್ ಕಮಲದ ಮೂಲಕ ಹಿಂಬಾಗಿಲಿನಿಂದ ಅಧಿಕಾರ ಹಿಡಿದಿದ್ದ ಬಿಜೆಪಿ ದುರಾಡಳಿತ ಕಾರಣ ಕಳೆದ ಚುನಾವಣೆಯಲ್ಲಿ ಸೋಲು ಅನುಭವಿಸಿ, ಅಧಿಕಾರ ಕಳೆದುಕೊಂಡು, ಈಗ ಹತಾಶೆಯಿಂದ ಈ ರೀತಿ ಕೀಳುಮಟ್ಟದ ಟೀಕೆ ಮಾಡುತ್ತಿದ್ದು, ಇದೇ ರೀತಿ ವರ್ತನೆ ಮುಂದುವರೆದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿಯೂ ರಾಜ್ಯದ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ, ವಿಮಾನ ನಿಲ್ದಾಣ ವಿಸ್ತರಣೆಗೆ ರೈತ ಸಂಘ ವಿರೋಧ



ಮೈಸೂರು,ನ.30(ಜಿಎ)–ಮೈಸೂರಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮತ್ತು ವಿಮಾನ ನಿಲ್ದಾಣ ವಿಸ್ತರಣೆ ಮಾಡಲು ಹೊರಟಿರುವ ಸಂಸದ ಪ್ರತಾಪ್ ಸಿಂಹ ಅವರ ನಡೆಗೆ ನಮ್ಮ ತೀವ್ರ ವಿರೋಧ ಇದೆ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಭಿವೃದ್ಧಿಯ ಹೆಸರಿನಲ್ಲಿ ರೈತರ ಭೂಮಿ ಕಬಳಿಸುವ ಕೆಲಸ ನಡೆಯುತ್ತಿದೆ. ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರದ ಖಜಾನೆ ಲೂಟಿ ಮಾಡುತ್ತಾರೆ. ವಿಮಾನ ನಿಲ್ದಾಣ ಅಭಿವೃದ್ಧಿಯೂ ನಮಗೆ ಬೇಕಿರಲಿಲ್ಲ. ಇವುಗಳಿಂದ ನಮ್ಮ ರೈತರಿಗೆ, ಜನರಿಗೆ ಏನೂ ಪ್ರಯೋಜನ ಇಲ್ಲ. ಈಗಾಗಲೇ ಕ್ರಿಕೆಟ್ ಸ್ಟೇಡಿಯಂ ಕಟ್ಟುವುದಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. ಇದನ್ನು ಈ ಕೂಡಲೇ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಇಲವಾಲ ಹೋಬಳಿಯ ಹುಯಿಲಾಳು ಗ್ರಾಮದ ಸುತ್ತಮುತ್ತಲಿನ ಪ್ರದೇಶ ಸೂಕ್ಷ್ಮ ಪ್ರದೇಶವಾಗಿದೆ. ಅಲ್ಲಿ ಕಾಡು ಪ್ರಾಣಿಗಳು ವಾಸ ಮಾಡುತ್ತಿವೆ. ಜೊತೆಗೆ ಶ್ರೀರಂಗಪಟ್ಟಣದ ಪಕ್ಷಿಧಾಮವೂ ಕೂಡ ಸಮೀಪದಲ್ಲೇ ಇದೆ. ಹಾಗಾಗಿ ಅಲ್ಲಿ ಯಾವುದೇ ಕಾರಣಕ್ಕೂ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಕೂಡದು. ನಮ್ಮ ಮನವಿಗೆ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಸಂಸದರ ವಿರುದ್ಧ ಉಗ್ರ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ನ.26ರಿಂದ 28ರವರೆಗೂ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ವಿವಿಧ ಬೇಡಿಕೆಗಾಗಿ ಆಗ್ರಹಿಸಿ, ನಡೆಸಿದ ಪ್ರತಿಭಟನೆಗೆ ಸರ್ಕಾರ ಸ್ಪಂದಿಸಿದ್ದು, ಡಿ.19ರಂದು ಮುಖ್ಯಮಂತ್ರಿಗಳೊಂದಿಗೆ ವಿಶೇಷ ಸಭೆ ಆಯೋಜಿಸಲಾಗಿದೆ. ಈ ಸಭೆಯಲ್ಲಿ ಚುನಾವಣೆಗೂ ಮುನ್ನ ಕಾಂಗ್ರೆಸ್ ನೀಡಿದ ಭರವಸೆಗಳಾದ ಎಪಿಎಂಸಿ ಕಾಯ್ದೆ, ಭೂಸುಧಾರಣಾ ಮಸೂದೆ ಸೇರಿದಂತೆ 18 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸುತ್ತೇವೆ ಎಂದು ತಿಳಿಸಿದರು.

ಇತ್ತೀಚೆಗೆ ನಂಜನಗೂಡಿನ ರೈತರೊಬ್ಬರು ಕಾರ್ಖಾನೆಗೆ ಜಮೀನು ನೀಡಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಆದ್ದರಿಂದ ಮುಂದಿನ ದಿನಗಳಲ್ಲಿ ಯಾವುದೇ ಸಂಸ್ಥೆಯೂ ರೈತರಿಂದ ಜಮೀನು ಪಡೆದುಕೊಂಡ ತಕ್ಷಣ ಅವರಿಗೆ ಉದ್ಯೋಗ ಪತ್ರ ನೀಡಬೇಕು. ಪತ್ರ ನೀಡಿದ ನಂತರವೂ ಉದ್ಯೋಗ ನೀಡಲು ತಡವಾದರೆ, ಅವರ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಅಷ್ಟು ದಿನಗಳ ವೇತನವನ್ನು ನೀಡಬೇಕೆಂದು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ದೇಶದಲ್ಲಿ ರೈತರ ಚಳುವಳಿಗಳು ಆರಂಭವಾಗಿದ್ದು, 2024ರಲ್ಲಿ ಮತ್ತೆ ದೇಶದಲ್ಲಿ ಸಂಘ ಪರಿವಾರದ ನೇತೃತ್ವದಲ್ಲಿ ನಡೆಯುತ್ತಿರುವ ಬಿಜೆಪಿ ಅಧಿಕಾರಕ್ಕೆ ಬರದಂತೆ ರೈತರು, ಕಾರ್ಮಿಕರು ಸೇರಿದಂತೆ ಎಲ್ಲಾ ಸಂಘಟನೆಗಳು ನಿರ್ಧಾರ ಕೈಗೊಂಡಿವೆ ಎಂದು ತಿಳಿಸಿದರು.

ಡಿ.12, ವಧು–ವರರ ಸಮಾವೇಶ

ಮೈಸೂರು, ನ.30–ಮೈಸೂರು ಬಲಿಜ ಸೇವಾ ಸಮಿತಿ ವತಿಯಿಂದ ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಆವರಣದಲ್ಲಿ ಬಲಿಜ ಸಮುದಾಯದ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ. ಡಿ.12 ರಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಈ ಸಮಾವೇಶದಲ್ಲಿ ಮರು ವಿವಾಹಕ್ಕೂ ಅವಕಾಶ ಕಲ್ಪಿಸಲಾಗಿದ್ದು, ಆಸಕ್ತರು ಕೆ.ಲಿಂಗರಾಜು (90089 12444) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದಿನಿಂದ ಉಚಿತ ಡಯಾಲಿಸಿಸ್ ಶಿಬಿರ

ಮೈಸೂರು,ನ30–ಮೈಸೂರಿನ ಸಿಎಸ್‌ಐ ಹೋಲ್ಡ್ಸ್‌ವರ್ತ್ ಸ್ಮಾರಕ (ಮಿಷನ್) ಆಸ್ಪತ್ರೆಯಲ್ಲಿ ಡಿ.1ರಿಂದ 31ರವರೆಗೆ ಮಧ್ಯಮ ವರ್ಗ, ಹಿಂದುಳಿದ ವರ್ಗದವರಿಗೆ ಉಚಿತ ಡಯಾಲಿಸಿಸ್ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9141030289 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.12.2023 ಶುಕ್ರವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ,
ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಪ್ರಾಧ್ಯಾಪಕ ಡಾ. ಕೇಶವ್ ಅವರಿಂದ ಭಾರತದ ಸಂವಿಧಾನ ಮತ್ತು ಆರ್ಥಿಕತೆ ಕುರಿತು ಉಪನ್ಯಾಸ, ಅಧ್ಯಕ್ಷತೆ: ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಂ.ಮಹೇಶ್, ಸ್ಥಳ: ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್:** ಮಮತಾ ಶ್ರೀಧರ್ ಅವರ 'ನೆನಪಿನ ಅಲೆಗಳು' ಕವನ ಸಂಕಲನ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೃತಿ ಲೋಕಾರ್ಪಣೆ : ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ.ಸತೀಶ್‌ಕುಮಾರ್ ಹೊಸಮನೆ, ಕೃತಿ ಕುರಿತು ಮಾತನಾಡುವವರು: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಅರಸು ಮಂಡಲಿ ಅಧ್ಯಕ್ಷ ಹೆಚ್‌ಎಂಟಿ ಲಿಂಗರಾಜೇ ಅರಸ್, ವೈದ್ಯ ವಾರ್ತಾ ಪ್ರಕಾಶನದ ನಿರ್ದೇಶಕ ಡಾ.ಎಂ.ಜಿ.ಆರ್.ಅರಸ್, ಕೃತಿ ಕರ್ತೃ ಹಾಗೂ ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ತಿನ ಅಧ್ಯಕ್ಷೆ ಮಮತಾ ಶ್ರೀಧರ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಅಪೂರ್ವ ಸ್ನೇಹ ಬಳಗ:** ಚಿತ್ರರಂಗದ ಚಿತ್ರಬ್ರಹ್ಮ, ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರನಿರ್ದೇಶಕ ಎಸ್.ಆರ್ ಪುಟ್ಟಣ್ಣ ಕಣಗಾಲ್ ಅವರ 90ನೇ ಜನ್ಮದಿನದ ಅಂಗವಾಗಿ "ಪುಟ್ಟಣ್ಣ ನೆನಪಿನಂಗಳ" ಕಾರ್ಯಕ್ರಮ, ಮುಖ್ಯ ಅತಿಥಿಗಳು: ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ವೈ.ಡಿ. ರಾಜಣ್ಣ, ನಗರಪಾಲಿಕೆ ಸದಸ್ಯ ಮಾ.ವಿ.ರಾಮ್‌ಪ್ರಸಾದ್, ಉದ್ಯಮಿ ಜಯರಾಮ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್ ಸ್ಥಳ: ಚಾಮುಂಡಿಪುರಂನ ಅಪೂರ್ವ ಹೋಟೆಲ್ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ, ಕಾನೂನು ಘಟಕ :** ಸಂವಿಧಾನ ಸಮರ್ಪಣಾ ದಿನ, ಉದ್ಘಾಟನೆ : ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಉಪಸ್ಥಿತರು : ಕು. ಭವ್ಯ ನರಸಿಂಹಮೂರ್ತಿ, ಕಾನೂನು ಘಟಕದ ಅಧ್ಯಕ್ಷ ತಿಮ್ಮಯ್ಯ, ಸ್ಥಳ: ಕಾಂಗ್ರೆಸ್ ಕಚೇರಿ ಆವರಣ, ರೈಲ್ವೆ ನಿಲ್ದಾಣದ ಸಮೀಪ, ಮಧ್ಯಾಹ್ನ 1ಕ್ಕೆ.

■ **ಎನ್‌ಸಿಸಿ ಮತ್ತು ಎನ್‌ಸಿಸಿ ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಮೈಸೂರು ಗ್ರೂಪ್ :** 75ನೇ ಎನ್‌ಸಿಸಿ ರೈಸಿಂಗ್ ಡೇ, ಮುಖ್ಯ ಅತಿಥಿಗಳು : ಎನ್‌ಸಿಸಿ ಮೈಸೂರು ಗ್ರೂಪ್ ಕಮಾಂಡರ್ ರೋಹಿತ್ ಥಾಕೂರ್, ಇಂಡಿಯನ್ ಏರ್‌ಫೋರ್ಸ್ ಗ್ರೂಪ್ ಕ್ಯಾಪ್ಟನ್ ವಿನಯ್ ವಿಟ್ಠಲ್ (ನಿವೃತ್ತ), ಶಾರದಾ ವಿಲಾಸ ಕಾಲೇಜು ನಿವೃತ್ತ ಪ್ರಿನ್ಸಿಪಾಲ್ ಪ್ರೊ. ಎಂ. ನಟರಾಜ್, ಬಿ.ಎಂ. ಗೌತಮ್, ಎ.ವಿ. ವಿದ್ಯಾಶಂಕರ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ– ಜಿ.ಶಾಂತ ಕುಮಾರ್, 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ. ಸಂಗಮೇಶ ಸವದತ್ತಿಮಠ, 6.50 ರೈತರಿಗೆ ಸಲಹೆ, 7.15 ಬದುಕು ಅಕ್ಷಯವಾಗಲಿ–ಪ್ರಾಯೋಜಿತ ಕಾರ್ಯಕ್ರಮ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಡಾ. ಮೈಸೂರು ಎಂ. ಮಂಜುನಾಥ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಕದ್ರಿ ಗೋಪಾಲನಾಥ್– ಸ್ಯಾಕ್ಸೋಫೋನ್ ವಾದನ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, 8.00 ವಿಜ್ಞಾನ ಭಾರತಿ –ಪರಿಸರ ಮತ್ತು ಪ್ರಾಣಿ ಪ್ರಪಂಚದಿಂದ ಪ್ರೇರಿತವಾದ ಎಂಜಿನಿಯರಿಂಗ್ ಆವಿಷ್ಕಾರಗಳು– ಮಾತನಾಡುತ್ತಾರೆ ಶಶಿಧರ ಡೋಂಗ್ರೆ, ಭೂಮಿಯ ಅಂತರಾಳದಲ್ಲಿ ಏನಿದೆ–ಮಾತನಾಡಲಿದ್ದಾರೆ ಎನ್. ಶಂಕರ್, 9.30 ಕೆ.ವಿ. ನಾರಾಯಣಸ್ವಾಮಿ – ಹಾಡುಗಾರಿಕೆ, 10.00 ತತ್ವ ಸಂಚಾರ– ತತ್ವಪದ ಗಾಯಕರ ಹಾಡುಪಾಡು, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು

ಪಂಚರಾಜ್ಯಗಳ ಚುನಾವಣೋತ್ತರ ಸಮೀಕ್ಷಾ ವರದಿ

ರಾಜಸ್ಥಾನದಲ್ಲಿ ಈ ಬಾರಿ ಬಿಜೆಪಿಗೆ ಸ್ಪಷ್ಟ ಬಹುಮತ



ನವದೆಹಲಿ: ರಾಜಸ್ಥಾನ ಜನತೆ ಪ್ರತಿಬಾರಿಯಂತೆ ಈ ಬಾರಿಯೂ ಸರ್ಕಾರವನ್ನು ಬದಲಾಯಿಸುವುದು ನಿಶ್ಚಿತ. ಚುನಾವಣೋತ್ತರ ಸಮೀಕ್ಷೆಗಳು ಈ ಬಾರಿ ಕಾಂಗ್ರೆಸ್ ಸೋಲಲಿದೆ ಎಂದು ಹೇಳಿವೆ. ಸಿಎಂ ಗೆಹ್ಲೋಟ್ ಮತ್ತು ಸಚಿನ್ ಪೈಲಟ್ ಮಧ್ಯೆ ಸಂಘರ್ಷದಿಂದಾಗಿ ಈ ಬಾರಿ ಬಿಜೆಪಿ ಸ್ಪಷ್ಟ ಬಹುಮತ ಪಡೆಯಲಿದೆ ಎಂದು ಭವಿಷ್ಯ ನುಡಿದಿವೆ. ಒಟ್ಟು 199 ಸ್ಥಾನಗಳಿರುವ ರಾಜಸ್ಥಾನದಲ್ಲಿ ಸರಳ ಬಹುಮತಕ್ಕೆ 100 ಸ್ಥಾನಗಳ ಅಗತ್ಯವಿದೆ.

ವಿವಿಧ ಸಮೀಕ್ಷಾ ವರದಿ

ಜನ್‌ಕೀ ಬಾತ್:
ಬಿಜೆಪಿ 100–122, ಕಾಂಗ್ರೆಸ್ 62–85
ಟೈಮ್ಸ್ ನೌ:
ಬಿಜೆಪಿ 108–128, ಕಾಂಗ್ರೆಸ್ 56–72
ಪೋಲ್ ಸ್ಟ್ರಾಟಜಿ ಗ್ರೂಪ್:
ಬಿಜೆಪಿ 100–110, ಕಾಂಗ್ರೆಸ್ 90–100
ಇಂಡಿಯಾ ಟುಡೇ: ಬಿಜೆಪಿ 80–100, ಕಾಂಗ್ರೆಸ್ 86–106, ಬಿಎಸ್‌ಪಿ 1–2
ಟುಡೇಸ್ ಚಾಣಕ್ಯ:
ಕಾಂಗ್ರೆಸ್ 101, ಬಿಜೆಪಿ 89, ಇತರೆ 9

2018ರ ಚುನಾವಣೆಯಲ್ಲಿ ಕಾಂಗ್ರೆಸ್ 100, ಬಿಜೆಪಿ 73, ಬಿಎಸ್‌ಪಿ 6, ಆರ್‌ಎಲ್‌ಪಿ 3, ಪಕ್ಷೇತರ ಅಭ್ಯರ್ಥಿಗಳ ಪೈಕಿ 13 ಮಂದಿ ಜಯಗಳಿಸಿದ್ದರು. ಕಾಂಗ್ರೆಸ್ ಅಧಿಕಾರ ಹಿಡಿದ ಬಳಿಕ ಹಿರಿಯ ನಾಯಕ ಅಶೋಕ್ ಗೆಹ್ಲೋಟ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು.

ತೆಲಂಗಾಣದಲ್ಲಿ ಬಿಆರ್‌ಎಸ್–ಕಾಂಗ್ರೆಸ್ ಭಾರೀ ಪೈಪೋಟಿ




ನವದೆಹಲಿ: ತೆಲಂಗಾಣದಲ್ಲಿ ಅಚ್ಚರಿಯ ಫಲಿತಾಂಶದ ಸುಳಿವು ಸಿಕ್ಕಿದೆ. ಈ ಬಾರಿ ರಾಜ್ಯದಲ್ಲಿ ಆಡಳಿತಾರೂಢ ಬಿಆರ್‌ಎಸ್‌ಗೆ ಕಾಂಗ್ರೆಸ್ ತೀವ್ರ ಪೈಪೋಟಿ ನೀಡಿರುವುದು ಕಂಡುಬಂದಿದೆ. 199 ವಿಧಾನಸಭಾ ಕ್ಷೇತ್ರಗಳಲ್ಲಿರುವ 32.6 ದಶಲಕ್ಷ ಮತದಾರರು 2,290 ಅಭ್ಯರ್ಥಿಗಳ ಭವಿಷ್ಯ ಬರೆದಿದ್ದಾರೆ. ಈಗ ತೆಲಂಗಾಣ ಚುನಾವಣೋತ್ತರ ಸಮೀಕ್ಷೆಗಳು ಪ್ರಕಟವಾಗಿವೆ.

ಜನ್‌ಕೀಬಾತ್: ಕಾಂಗ್ರೆಸ್ 48–64, ಬಿಆರ್‌ಎಸ್ 40–55, ಬಿಜೆಪಿ 7–13
ಪೋಲ್ ಸ್ಟ್ರಾಟಜಿ ಗ್ರೂಪ್: ಕಾಂಗ್ರೆಸ್ 49–54, ಬಿಆರ್‌ಎಸ್ 53–58, ಬಿಜೆಪಿ 4–6
ರಿಪಬ್ಲಿಕ್ ಟಿವಿ–ಸಿ ವೋಟರ್: ಕಾಂಗ್ರೆಸ್ 47–59, ಬಿಆರ್‌ಎಸ್ 48–60, ಬಿಜೆಪಿ 5
ಟುಡೇಸ್ ಚಾಣಕ್ಯ : ಬಿಜೆಪಿ 7, ಕಾಂಗ್ರೆಸ್ 71, ಬಿಆರ್‌ಎಸ್ 33, ಇತರೆ 8

ತೆಲಂಗಾಣದಲ್ಲಿ 2018ರ ಚುನಾವಣೆಯಲ್ಲಿ ಬಿಆರ್‌ಎಸ್ 88 ಸೀಟ್‌ಗಳನ್ನು ಗೆದ್ದಿತ್ತು. ಕಾಂಗ್ರೆಸ್ 19, ಎಐಎಂಐಎಂ 7, ಟಿಡಿಪಿ 2 ಸ್ಥಾನಗಳನ್ನು ಗೆದ್ದಿದ್ದವು. ಬಿಜೆಪಿ ಒಂದು ಕ್ಷೇತ್ರದಲ್ಲಿ ಮಾತ್ರ ಜಯ ಸಾಧಿಸಿತ್ತು. ಆಂಧ್ರದಿಂದ ಬೇರ್ಪಟ್ಟು ಹೊಸ ರಾಜ್ಯವಾಗಿ ಉದಯವಾದ ನಂತರ ತೆಲಂಗಾಣದಲ್ಲಿ ಎರಡು ಬಾರಿ ಚುನಾವಣೆ ನಡೆದಿದೆ. ಎರಡು ಬಾರಿಯೂ ಕೆ.ಚಂದ್ರಶೇಖರ್ ರಾವ್ ನೇತೃತ್ವದ ಬಿಆರ್‌ಎಸ್ ಪಕ್ಷವು ಗೆಲುವು ಸಾಧಿಸಿ ಅಧಿಕಾರದ ಗದ್ದುಗೆ ಏರಿದೆ. ಈ ಬಾರಿ ಚುನಾವಣೆಯು ಕೆಸಿಆರ್‌ಗೆ ಸುಲಭದ ಹಾದಿಯಾಗಿ ಉಳಿದಿಲ್ಲವೆಂಬ ಸೂಚನೆಯನ್ನು ಸಮೀಕ್ಷೆಗಳು ಹೇಳುತ್ತಿವೆ.

ಛತ್ತೀಸ್‌ಗಢದಲ್ಲಿ ಕಾಂಗ್ರೆಸ್‌ಗೆ ಸರಳ ಬಹುಮತ ಸಾಧ್ಯತೆ



ಛತ್ತೀಸ್‌ಗಢ: ಈ ಬಾರಿ ಛತ್ತೀಸ್‌ಗಢದಲ್ಲಿ ಸಿಎಂ ಭೂಪೇಶ್ ಬಘೇಲ್ ನೇತೃತ್ವದ ಕಾಂಗ್ರೆಸ್ ಸರಳ ಬಹುಮತ ಪಡೆಯುವ ಸಾಧ್ಯತೆಯಿದೆ. ಸಮೀಕ್ಷೆಗಳು ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಬಿರುಸಿನ ಸ್ಪರ್ಧೆ ನಡೆಯಲಿದೆ ಎಂದು ಭವಿಷ್ಯ ನುಡಿದಿವೆ. ಒಟ್ಟು 90 ಕ್ಷೇತ್ರಗಳಿರುವ ಇಲ್ಲಿ ಸರಳ ಬಹುಮತಕ್ಕೆ 46 ಸ್ಥಾನಗಳ ಅಗತ್ಯವಿದೆ.

ಯಾವ ಸಮೀಕ್ಷೆಯಲ್ಲಿ ಎಷ್ಟು ಸ್ಥಾನ

ಎಬಿಪಿ ನ್ಯೂಸ್: ಬಿಜೆಪಿ 36–48, ಕಾಂಗ್ರೆಸ್ 41–53
ದೈನಿಕ್ ಭಾಸ್ಕರ್: ಬಿಜೆಪಿ 35–45, ಕಾಂಗ್ರೆಸ್ 46–55
ಇಂಡಿಯಾ ಟುಡೇ: ಬಿಜೆಪಿ 36–46, ಕಾಂಗ್ರೆಸ್ 40–50
ಇಂಡಿಯಾ ಟಿವಿ: ಬಿಜೆಪಿ 30–40, ಕಾಂಗ್ರೆಸ್ 46–56
ಟುಡೇಸ್ ಚಾಣಕ್ಯ : ಬಿಜೆಪಿ 33, ಕಾಂಗ್ರೆಸ್ 57, ಇತರೆ 0

2018ರ ಚುನಾವಣೆಯಲ್ಲಿ ಕಾಂಗ್ರೆಸ್ 68, ಬಿಜೆಪಿ 15, ಬಿಎಸ್‌ಪಿ 2, ಜೆಸಿಸಿ 5 ಸ್ಥಾನ ಪಡೆದಿತ್ತು. ಕಾಂಗ್ರೆಸ್ ಐತಿಹಾಸಿಕ ಗೆಲುವು ಸಾಧಿಸಿದ ಬಳಿಕ ಭೂಪೇಶ್ ಬಘೇಲ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಚುನಾವಣಾ ಸಮಯದಲ್ಲಿ ಮಹದೇವ್ ಬೆಟ್ಟಿಂಗ್ ಆ್ಯಪ್ ಭಾರೀ ಸದ್ದು ಮಾಡಿತ್ತು. ಈ ಹಗರಣದಿಂದ ಭೂಪೇಶ್ ಬಘೇಲ್ ಅವರಿಗೆ ಹಿನ್ನಡೆಯಾಗಬಹುದು ಎಂದು ವಿಶ್ಲೇಷಿಸಲಾಗಿತ್ತು. ಆದರೆ ಬಘೇಲ್ ಸರ್ಕಾರದ ಮೇಲೆ ಈ ಹಗರಣ ಪರಿಣಾಮ ಬೀರಿಲ್ಲ ಎಂದು ಸಮೀಕ್ಷೆಗಳು ಹೇಳುತ್ತಿವೆ.

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಮುನ್ನಡೆಗೆ ಬಿಜೆಪಿ ಪ್ರಬಲ ಫೈಟ್



ನವದೆಹಲಿ: ಪಂಚರಾಜ್ಯಗಳ ಚುನಾವಣೆ ಅಂತ್ಯಗೊಂಡ ಬೆನ್ನಲ್ಲೇ 'ಚುನಾವಣೋತ್ತರ' ಸಮೀಕ್ಷೆಗಳು ಪ್ರಕಟಗೊಳ್ಳುತ್ತಿದ್ದು, ಮಧ್ಯ ಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಏರುವ ಸಾಧ್ಯತೆಯಿದೆ.

ಯಾವ ಸಮೀಕ್ಷೆ ಏನು ಹೇಳಿದೆ

ಒಟ್ಟು 230 ಸ್ಥಾನಗಳಿರುವ ಮಧ್ಯಪ್ರದೇಶದಲ್ಲಿ ಬಹುಮತಕ್ಕೆ 116 ಸ್ಥಾನಗಳ ಅಗತ್ಯವಿದೆ. ಕಾಂಗ್ರೆಸ್ ಹೆಚ್ಚು ಸ್ಥಾನ ಪಡೆದರೂ ಬಿಜೆಪಿ ಟಫ್ ಸ್ಪರ್ಧೆ ನೀಡಲಿದೆ ಎಂದು ಸಮೀಕ್ಷೆಗಳು ತಿಳಿಸಿವೆ.

ಜನ್‌ಕೀಬಾತ್ : ಬಿಜೆಪಿ 100 –123, ಕಾಂಗ್ರೆಸ್ 102–125
ರಿಪಬ್ಲಿಕ್‌ಟಿವಿ : ಬಿಜೆಪಿ 118 –130, ಕಾಂಗ್ರೆಸ್ 97–107
ಪೋಲ್ ಸ್ಟ್ರಾಟಜಿ ಗ್ರೂಪ್ : ಬಿಜೆಪಿ 106–116, ಕಾಂಗ್ರೆಸ್ 111–121
ಟುಡೇಸ್ ಚಾಣಕ್ಯ : ಬಿಜೆಪಿ 151, ಕಾಂಗ್ರೆಸ್ 74, ಇತರೆ 5

2018ರ ಚುನಾವಣೆಯಲ್ಲಿ ಕಾಂಗ್ರೆಸ್ 114, ಬಿಜೆಪಿ 109, ಬಿಎಸ್‌ಪಿ 2, ಸಮಾಜವಾದಿ ಪಕ್ಷ 1 ಸ್ಥಾನ ಗೆದ್ದುಕೊಂಡರೆ 4 ಮಂದಿ ಪಕ್ಷೇತರ ಅಭ್ಯರ್ಥಿಗಳು ಗೆದ್ದಿದ್ದರು. ಬಿಎಸ್‌ಪಿ, ಎಸ್‌ಪಿ ಹಾಗೂ ಪಕ್ಷೇತರರ ಬೆಂಬಲದಿಂದ ಕಾಂಗ್ರೆಸ್ ಸರ್ಕಾರ ರಚಿಸಿತ್ತು. ಕಮಲ್‌ನಾಥ್ ಸಿಎಂ ಆಗಿದ್ದರು. ಲೋಕಸಭಾ ಚುನಾವಣೆ ಬಳಿಕ ಆಪರೇಷನ್ ಕಮಲದ ಮೂಲಕ ಬಿಜೆಪಿ ಅಧಿಕಾರ ಹಿಡಿದಿತ್ತು

ಮಿಜೋರಾಂನಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಆಟ



ನವದೆಹಲಿ: ಈಶಾನ್ಯ ರಾಜ್ಯ ಮಿಜೋರಾಂನಲ್ಲಿ ಮೊದಲ ಹಂತದಲ್ಲೇ ಎಂದರೆ ನವೆಂಬರ್ 7ರಂದೇ ಎಲ್ಲಾ 40 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. 80.66%ರಷ್ಟು ಮತದಾನವಾಗಿತ್ತು. ಇಲ್ಲಿ ಸದ್ಯ ಬಿಜೆಪಿ ಬೆಂಬಲಿತ ಮಿಜೋ ನ್ಯಾಷನಲ್ ಫ್ರಂಟ್ ಸರ್ಕಾರವಿದೆ. ಈ ಬಾರಿಯ ಚುನಾವಣೆಯಲ್ಲಿ ಅಧಿಕಾರ ಉಳಿಸಿಕೊಳ್ಳಲು ಎಂಎನ್‌ಎಫ್, ಅಧಿಕಾರ ಕೈಗೆಟುಕಿಸಿಕೊಳ್ಳಲು ಕಾಂಗ್ರೆಸ್ ಮತ್ತು ಹೊಸ ಪಕ್ಷವಾದ ಜೋರಂ ಪೀಪಲ್ಸ್ ಮೂವ್‌ಮೆಂಟ್ ಪ್ರತ್ಯೇಕವಾಗಿ ಕಸರತ್ತು ಮಾಡಿವೆ.

ಮಣಿಪುರ ಹಿಂಸಾಚಾರ ಇಲ್ಲಿನ ಚುನಾವಣೆಯಲ್ಲಿ ಪರಿಣಾಮ ಬೀರಿದಂತೆ ಕಂಡುಬರುತ್ತಿದೆ. ಮತ್ತೆ ಪ್ರಾದೇಶಿಕ ಪಕ್ಷಗಳೇ ಇಲ್ಲಿ ಮೇಲುಗೈ ಸಾಧಿಸಿದಂತೆ ಕಂಡು ಬಂದಿದೆ. ಯಾವುದೇ ಪಕ್ಷಕ್ಕೆ ಬಹುಮತ ಬರುವುದು ಅನುಮಾನವಾಗಿದ್ದರೂ ಹೊಸ ಪಕ್ಷವಾದ ಝಡ್‌ಪಿಎಂ ಜೊತೆ ಅಧಿಕಾರದಲ್ಲಿರುವ ಎಂಎನ್‌ಎಫ್‌ಗೆ ಟಫ್ ಸ್ಪರ್ಧೆಯಿದೆ.

ಯಾವ ಸಮೀಕ್ಷೆ ಏನು ಹೇಳಿದೆ

ಒಟ್ಟು 40 ಕ್ಷೇತ್ರಗಳಲ್ಲಿ ಸರಳ ಬಹುಮತಕ್ಕೆ 21 ಸ್ಥಾನಗಳ ಅಗತ್ಯವಿದೆ.
ಜನ್‌ಕಿ ಬಾತ್: ಎಂಎನ್‌ಎಫ್ 10–14, ಕಾಂಗ್ರೆಸ್ 05–09, ಬಿಜೆಪಿ 00–02, ಝಡ್‌ಪಿಎಂ 15–25
ಸಿ–ವೋಟರ್: ಎಂಎನ್‌ಎಫ್ 15–21, ಕಾಂಗ್ರೆಸ್ 02–08, ಬಿಜೆಪಿ 0–5, ಝಡ್‌ಪಿಎಂ 12–18
ಇಂಡಿಯಾ ಟಿವಿ: ಎಂಎನ್‌ಎಫ್ 14–18, ಕಾಂಗ್ರೆಸ್ 08–10, ಬಿಜೆಪಿ 0–2, ಝಡ್‌ಪಿಎಂ 12–16
ಪೀಪಲ್ಸ್ ಪಲ್ಸ್: ಎಂಎನ್‌ಎಫ್ 16–20, ಕಾಂಗ್ರೆಸ್ 08–10, ಬಿಜೆಪಿ 0–2, ಝಡ್‌ಪಿಎಂ 12–17
ಆಕ್ಸಿಸ್ ಮೈ ಇಂಡಿಯಾ: ಎಂಎನ್‌ಎಫ್ 3–7, ಕಾಂಗ್ರೆಸ್ 0–4, ಬಿಜೆಪಿ 0–2, ಝಡ್‌ಪಿಎಂ 28–35

ಮಿಜೋರಾಂನಲ್ಲಿ 2018ರ ಚುನಾವಣೆಯಲ್ಲಿ ಎಂಎನ್‌ಎಫ್ 26 ಸ್ಥಾನಗಳು(37.6% ಮತ), ಕಾಂಗ್ರೆಸ್ 5 ಸ್ಥಾನಗಳು (29.98% ಮತ) ಹಾಗೂ ಬಿಜೆಪಿ 1 ಸ್ಥಾನವನ್ನು (8.1% ಮತ) ಗೆದ್ದಿತ್ತು.

ಭ್ರೂಣ ಹತ್ಯೆ ಪ್ರಕರಣ: ಇಬ್ಬರು ವೈದ್ಯಾಧಿಕಾರಿಗಳ ಅಮಾನತು

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆದೇಶ

ಮೈಸೂರು, ನ.30(ಪಿಎಂ)–ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಇಬ್ಬರು ವೈದ್ಯಾಧಿಕಾರಿಗಳನ್ನು ಅಮಾನತುಪಡಿಸಲಾಗಿದೆ ಎಂದು ತಿಳಿಸಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಈ ಪ್ರಕರಣದಲ್ಲಿ ನಿರ್ಲಕ್ಷ್ಯತೆ ವಹಿಸಿರುವ ಹಾಗೂ ಕರ್ತವ್ಯಲೋಪ ಎಸಗಿರುವ ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲು ಆರಂಭಿಸಿದ್ದೇವೆ ಎಂದರು.

ಮೈಸೂರು ತಾಲೂಕು ಆರೋಗ್ಯಾಧಿಕಾರಿ ಡಾ.ರಾಜೇಶ್ವರಿ ಮತ್ತು ಈ ಹಿಂದಿನ ಕುಟುಂಬ ಕಲ್ಯಾಣಾಧಿಕಾರಿ ಡಾ.ರವಿ ಅವರನ್ನು ಅಮಾನತುಪಡಿಸಲಾಗಿದೆ. ಪ್ರಕರಣದಲ್ಲಿ ಡಾ.ರಾಜೇಶ್ವರಿ ಅವರ ಕರ್ತವ್ಯ ಲೋಪ ಎದ್ದು ಕಾಣುತ್ತಿದೆ. ಈ ಹಿಂದೆ ಇದ್ದಂತಹ ಕುಟುಂಬ ಕಲ್ಯಾಣಾಧಿಕಾರಿ ಡಾ.ರವಿ ಅವರ ಕರ್ತವ್ಯದಲ್ಲಿ ದೊಡ್ಡ ಮಟ್ಟದ ಲೋಪ ಕಾಣುತ್ತಿದೆ. ಹೀಗಾಗಿ ವಿಚಾರಣೆ ಬಾಕಿ ಇರಿಸಿ ಇಬ್ಬರನ್ನು ಅಮಾನತು ಮಾಡಲಾಗಿದೆ ಎಂದು ಹೇಳಿದರು.

ಭ್ರೂಣ ಹತ್ಯೆ ಪ್ರಕರಣದಲ್ಲಿ ಆರೋಗ್ಯ ಇಲಾಖೆಯ ಕೆಲವು ವೈದ್ಯರು ಹಾಗೂ ಸಿಬ್ಬಂದಿ ಭಾಗಿಯಾಗಿರುವ ಬಗ್ಗೆ ಮಾಹಿತಿಗಳು ಲಭ್ಯವಾಗಿವೆ. ಅದರ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಿ ಲಭ್ಯವಾಗುವ ಸಾಕ್ಷ್ಯಗಳನ್ನಾಧರಿಸಿ ಅಂತಹವರ ವಿರುದ್ಧವೂ ಕ್ರಮ ಕೈಗೊಳ್ಳಲು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಸಚಿವರಿಗೂ ತಪ್ಪು ಮಾಹಿತಿ ನೀಡಿ ತರಾಟೆಗೀಡಾದ ತಾಲೂಕು ವೈದ್ಯಾಧಿಕಾರಿ!


ಮೈಸೂರು, ನ.30(ಪಿಎಂ)–ಆರೋಗ್ಯ ಸಚಿವರಿಗೆ ತಪ್ಪು ಮಾಹಿತಿ ನೀಡಿ ಮೈಸೂರು ತಾಲೂಕು ಆರೋಗ್ಯಾಧಿಕಾರಿ ಡಾ. ರಾಜೇಶ್ವರಿ ಅವರು ಸಚಿವರಿಂದ ತೀವ್ರ ತರಾಟೆಗೊಳಗಾದರು. ಇಂದು ರಾತ್ರಿ ಮೈಸೂರಿನ ಉದಯಗಿರಿಯಲ್ಲಿ ಭ್ರೂಣ ಹತ್ಯೆ ನಡೆಯುತ್ತಿದ್ದ ಮಾತಾ ಆಸ್ಪತ್ರೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭೇಟಿ ನೀಡಿದ್ದರು. ಆಸ್ಪತ್ರೆ ಬಂದ್ ಮಾಡಲಾಗಿತ್ತಾದರೂ ಅದರ ಮುಂದೆ ನಿಂತು ಅವರು ವೀಕ್ಷಿಸಿದರಲ್ಲದೆ, ಸ್ಥಳೀಯರಿಂದಲೂ ಕೆಲವು ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ತಾಲೂಕು ಆರೋಗ್ಯಾಧಿಕಾರಿ ಡಾ. ರಾಜೇಶ್ವರಿ ಅವರನ್ನು 'ಎಷ್ಟು ವರ್ಷದಿಂದ ಆಸ್ಪತ್ರೆ ನಡೆಯುತ್ತಿದೆ, ಭ್ರೂಣ ಹತ್ಯೆ ನಡೆಯುತ್ತಿರುವುದು ನಿಮ್ಮ ಗಮನಕ್ಕೆ ಬಂದಿಲ್ಲವೇ?' ಎಂದು ಕೇಳಿದಾಗ ರಾಜೇಶ್ವರಿ, 'ಎರಡು ವರ್ಷದಿಂದ ಈ ಆಸ್ಪತ್ರೆ ಮುಚ್ಚಿತ್ತು ಸಾರ್' ಎಂದು ಹೇಳಿದಾಗ ಅದನ್ನು ಕೇಳಿ ಸುಮ್ಮನಾಗದ ಸಚಿವರು, ಸ್ಥಳೀಯರ ಬಳಿ ಇದರ ಬಗ್ಗೆ ಕೇಳಿದರು. ಕಳೆದ 3 ತಿಂಗಳಿಂದ ಮಾತ್ರ ಈ ಆಸ್ಪತ್ರೆ ಬಂದ್ ಆಗಿದೆ. ಅಲ್ಲಿಯವರೆಗೂ ಆಸ್ಪತ್ರೆ ನಡೆಯುತ್ತಿತ್ತು ಎಂದು ಸ್ಥಳೀಯರು ಹೇಳಿದ್ದಲ್ಲದೆ, 5 ತಿಂಗಳ ಹಿಂದಿನ ದಿನಾಂಕ ನಮೂದಿಸಿ ಇದೇ ವೈದ್ಯಾಧಿಕಾರಿ (ಡಾ. ರಾಜೇಶ್ವರಿ) ಆಸ್ಪತ್ರೆಯ ಗೋಡೆಗೆ ಎರಡು ದಿನದ ಹಿಂದೆ ನೋಟಿಸ್ ಅಂಟಿಸಿದ್ದಾರೆ ಎಂಬುದನ್ನೂ ಸಚಿವರ ಗಮನಕ್ಕೆ ತಂದರು. ಇದರಿಂದ ಕೆಂಡಾಮಂಡಲರಾದ ಸಚಿವರು ಡಾ. ರಾಜೇಶ್ವರಿ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಈ ವೇಳೆ ಆರೋಗ್ಯ ಇಲಾಖೆ ಆಯುಕ್ತ ಡಿ.ರಂದೀಪ್, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಇನ್ನಿತರರಿದ್ದರು.

ಈ ಪ್ರಕರಣದಲ್ಲಿ ಆರೋಗ್ಯ ಇಲಾಖೆ ಬೇಜವಾಬ್ದಾರಿತನ ಎದ್ದು ಕಾಣುತ್ತಿದೆ ಎಂಬುದರಲ್ಲಿ ಯಾವುದೇ ಮುಚ್ಚು ಮರೆಯಿಲ್ಲ. ಮೇಲುಕೋಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೊಳಪಟ್ಟ ಹಾಡ್ಯ ಗ್ರಾಮದಲ್ಲಿ ಭ್ರೂಣ ಲಿಂಗ ಪತ್ತೆ ನಡೆಯುತ್ತಿದ್ದುದು ಆತಂಕಕ್ಕೆ ಎಡೆ ಮಾಡಿದೆ. ಬೇರೆ ಬೇರೆ ಕಡೆಯೂ ಕೂಡ ನಡೆಯುತ್ತಿರಬಹುದು. ಆರೋಗ್ಯ ಇಲಾಖೆಯ ಅಧಿಕಾರಿಗಳು ನಾಲ್ಕೈದು ತಿಂಗಳ ಹಿಂದೆಯೇ ಈ ಆರೋಪಿಗಳನ್ನು ಹಿಡಿಯಲು ವ್ಯೂಹ ರಚಿಸಿದ್ದರು. ಆದರೆ ಅವರು ಸಿಕ್ಕಿರಲಿಲ್ಲ. ಈ ವಿಚಾರದಲ್ಲಿ ನಮ್ಮ ಇಲಾಖೆ ಅಧಿಕಾರಿಗಳು ಸರಿಯಾಗಿ ಫಾಲೋ–ಅಪ್ ಮಾಡಿಲ್ಲ ಎಂಬುದನ್ನು ತಳ್ಳಿಹಾಕಲಾಗದು ಎಂದು ಹೇಳಿದರು.

ಇಂದು, ನಾಳೆ ಮದ್ದು–ಗುಂಡು ತರಬೇತಿ; ದೊಡ್ಡ ಬ್ಯಾಡರಹಳ್ಳಿ ಫೈರಿಂಗ್ ರೇಂಜ್‌ನಲ್ಲಿ ಜನ ಸಂಚಾರಕ್ಕೆ ನಿರ್ಬಂಧ

ಮೈಸೂರು,ನ.30(ಪಿಎಂ)– ರೈಲ್ವೆ ರಕ್ಷಣಾದಳ (ಆರ್‌ಪಿಎಫ್) ಮೈಸೂರು ವಿಭಾಗದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದ ಎರಡನೇ ಹಂತದ ಮದ್ದು–ಗುಂಡುಗಳ ವಾರ್ಷಿಕ ತರಬೇತಿಯು ಡಿ.1 ಮತ್ತು 2ರಂದು ಮಂಡ್ಯ ಜಿಲ್ಲೆಯ ದೊಡ್ಡ ಬ್ಯಾಡರಹಳ್ಳಿ ಫೈರಿಂಗ್ ರೇಂಜ್‌ನಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರದೇಶದ ವ್ಯಾಪ್ತಿಯಲ್ಲಿ ಸಾಕು ಪ್ರಾಣಿಗಳ ಹಾಗೂ ಜನ ಸಂಚಾರವನ್ನು ಈ ಎರಡೂ ದಿನಗಳು ಬೆಳಗ್ಗೆ 5 ಗಂಟೆಯಿಂದ ನಿಷೇಧಿಸಲಾಗಿದೆ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಸಾರ್ವಜನಿಕ ಸಂಪರ್ಕಾಧಿಕಾರಿ ಜೆ.ಲೋಹಿತೇಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೂಳಿ ದಾಳಿ; ತುಂಡಾದ ವೃದ್ಧನ ಕಾಲು ಬೆರಳು



ವೃದ್ಧರೊಬ್ಬರ ಕಾಲು ತುಳಿದು ಗಾಯಗೊಳಿಸಿದ ಗೂಳಿ(ಸ್ಥಳೀಯರು ಕಳುಹಿಸಿದ್ದು)

ಮೈಸೂರು,ನ.30(ಎಸ್‌ಬಿಡಿ)– ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಗೂಳಿ ತುಳಿದು ವೃದ್ಧರೊಬ್ಬರ ಕಾಲು ಬೆರಳು ತುಂಡಾಗಿರುವ ಘಟನೆ ಗುರುವಾರ ನಡೆದಿದೆ.

ಗುರುವಾರ ಬೆಳಗ್ಗೆ ದೇವಸ್ಥಾನದ ಮುಂಭಾಗ ನಿಂತಿದ್ದಾಗ ಜನರ ನಡುವೆ ನುಗ್ಗಿದ ಗೂಳಿ ಸುಮಾರು 65 ವರ್ಷದ ವೃದ್ಧರೊಬ್ಬರ ಕಾಲು ತುಳಿದಿದೆ. ಗೂಳಿ ಕಾಲ್ತುಳಿತಕ್ಕೆ ಅವರ ಹೆಬ್ಬೆರಳು ಕ್ಷಣಾರ್ಧದಲ್ಲಿ ತುಂಡಾಗಿ ತೀವ್ರ ರಕ್ತಸ್ರಾವವಾಗಿದೆ. ಘಟನೆಯಿಂದ ಭಯಭೀತರಾಗಿ ಅವರು ಸ್ಥಳದಲ್ಲೇ ಕುಸಿದಿದ್ದಾರೆ. ಕೂಡಲೇ ಅವರನ್ನು ಜೊತೆಯಲ್ಲಿ ಬಂದಿದ್ದವರು ವಾಹನದಲ್ಲಿ ಮೈಸೂರಿನ ಆಸ್ಪತ್ರೆಗೆ ಕರೆದೊಯ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ವ್ಯವಸ್ಥೆ ನಿರ್ಲಕ್ಷ: ಚಾಮುಂಡಿಬೆಟ್ಟದಲ್ಲಿ ರಾಸುಗಳಿಂದ ಭಕ್ತರಿಗೆ ತೊಂದರೆಯಾಗಿರುವುದು ಇದು ಮೊದಲೇನಲ್ಲ. ಈ ಹಿಂದೆಯೂ ರಾಸುಗಳು ಗುದ್ದಿ ಬೀಳಿಸಿರುವುದು ಹಾಗೂ ತುಳಿದು ಗಾಯಗೊಳಿಸಿರುವ ಘಟನೆಗಳು ನಡೆದಿವೆ. ಈ ಬಗ್ಗೆ ಸಾಕಷ್ಟು ಬಾರೀ ದೇವಸ್ಥಾನ ಆಡಳಿತ ಮಂಡಳಿಯವರ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮ ವಹಿಸದೆ ನಿರ್ಲಕ್ಷ ವಹಿಸಿದ್ದಾರೆ. ಇದರ ಪರಿಣಾಮವಾಗಿ ಇಂದು ವೃದ್ಧರೊಬ್ಬರ ಕಾಲಿನ ಹೆಬ್ಬೆರಳು ತುಂಡಾಗಿದೆ. ಮುಂದೆ ಪ್ರಾಣ ಹಾನಿಯಾದರೂ ಆಗಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಸಂಕಲ್ಪ ಮಾಡಿಕೊಂಡಿದ್ದ ಭಕ್ತರು ಹೀಗೆ ಕರುಗಳನ್ನು ಬೆಟ್ಟಕ್ಕೆ ತಂದು ಬಿಡುತ್ತಾರೆ. ಇಂತಹ ರಾಸುಗಳ ಸಂಖ್ಯೆ ಹೆಚ್ಚಾಗಿ, ಭಕ್ತರಿಗೆ ತೊಂದರೆಯಾದಾಗ ಒಮ್ಮೆ ಅವುಗಳನ್ನು ಹಿಡಿದು ಪಿಂಜರಾಪೋಲ್‌ಗೆ ಬಿಡಲಾಗಿತ್ತು. ಇದೀಗ ರಾಸುಗಳ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಚಿರತೆಗಳ ಹಾವಳಿ ಹೆಚ್ಚಾಗುವ ಆತಂಕವೂ ಜನರಲ್ಲಿದೆ. ಹರಕೆ ತೀರಿಸಲು ಭಕ್ತರು ತಂದು ಬಿಡುವ ರಾಸುಗಳನ್ನು ಸಲಹುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು. ಅಂತಹ ಭಕ್ತರಿಂದಲೇ ನಿಗದಿತ ಕಾಣಿಕೆ ಸಂಗ್ರಹಿಸಬೇಕು. ದೇವಸ್ಥಾನದವರು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ 275 ಹೆಣ್ಣು ಭ್ರೂಣ ಹತ್ಯೆ

- ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ
- ಈ ಸಂಖ್ಯೆ ಇನ್ನು ಹೆಚ್ಚಾಗುವ ಸಾಧ್ಯತೆ



ಮೈಸೂರು, ನ.30(ಪಿಎಂ)–ಪ್ರಾಥಮಿಕ ತನಿಖೆಯಲ್ಲಿ ಪೊಲೀಸರಿಗೆ ದೊರೆತಿರುವ ದಾಖಲೆ ಪ್ರಕಾರ 275 ಹೆಣ್ಣು ಭ್ರೂಣ ಹತ್ಯೆ ನಡೆದಿದೆ ಎಂದು ತಿಳಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಇದರ ಪ್ರಮಾಣ ಹಲವಾರು ಪಟ್ಟು ಹೆಚ್ಚಾಗಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು ಎಂದರು.

ಮೈಸೂರಿನಲ್ಲಿ ಅಧಿಕಾರಿಗಳ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಎಷ್ಟು ವರ್ಷಗಳಿಂದ ನಡೆಯುತ್ತಿದೆ ಎಂಬುದನ್ನು ಹೇಳಲು ಸಾಧ್ಯವಾಗುತ್ತಿಲ್ಲ. ಆದರೆ ಈ ಅನಿಷ್ಟ ಕೃತ್ಯಗಳು ವ್ಯಾಪಕವಾಗಿಯಂತೂ ನಡೆಯುತ್ತಿದೆ ಎಂಬುದರ ಬಗ್ಗೆ ಅನುಮಾನಪಡಬೇಕಾಗಿಲ್ಲ ಎಂದರು.

ಹೆಣ್ಣು ಭ್ರೂಣ ಹತ್ಯೆಯಿಂದಾಗಿ ಲಿಂಗಾನುಪಾತದಲ್ಲಿ ವ್ಯತ್ಯಾಸವಾಗುತ್ತಿದೆ. ಇಂದಿನ ದಿನಗಳಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿದ್ದು, ಇದಕ್ಕೆ ಹೆಣ್ಣು ಭ್ರೂಣ ಹತ್ಯೆಯೇ ಕಾರಣವಾಗಿದ್ದು, ಈ ಸಾಮಾಜಿಕ ಪಿಡುಗನ್ನು ತೊಡೆದು ಹಾಕಲೇಬೇಕಾಗಿದೆ. ಹೀಗಾಗಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ.

ಹೆಣ್ಣು ಭ್ರೂಣ ಹತ್ಯೆ ಮಾಡುವವರು ಮಾತ್ರವಲ್ಲದೆ, ಭ್ರೂಣ ಹತ್ಯೆ ಮಾಡಿಸಿಕೊಂಡ ಗರ್ಭಿಣಿಯರಿಗೂ ಶಿಕ್ಷೆಯಾಗುತ್ತದೆ ಎಂದ ಅವರು, ಈ ವಿಚಾರದಲ್ಲಿ ಕಾನೂನನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗುತ್ತಿದೆ. ಅಲ್ಲದೇ ಕೇವಲ ಕಾನೂನಿಂದ ಮಾತ್ರ ಈ ಪಿಡುಗನ್ನು ತಡೆಯಲು ಸಾಧ್ಯವಿಲ್ಲ. ಹೀಗಾಗಿ ಹೆಣ್ಣು ಭ್ರೂಣ ಹತ್ಯೆ ಸಂಬಂಧ ಜಾಗೃತಿ ಮೂಡಿಸುವ ಕೆಲಸವನ್ನೂ ಕೂಡ ಮಾಡಲಾಗುತ್ತದೆ. ಈಗ ಬಂಧಿಸಲ್ಪಟ್ಟಿರುವವರು ನಕಲಿ ವೈದ್ಯರಾಗಿದ್ದಾರೆ. ಚಂದನ್ ಬಲ್ಲಾಳ್ ಕೂಡ ಎಂಬಿಬಿಎಸ್ ಡಾಕ್ಟರ್ ಅಲ್ಲ. ಈ ಪ್ರಕರಣದಲ್ಲಿ ಬೇರೆ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂಬುದರ ಬಗ್ಗೆಯೂ ತನಿಖೆ ನಡೆಸಲಾಗುತ್ತಿದ್ದು, ತಪ್ಪಿತಸ್ಥರೆಲ್ಲರಿಗೂ ಶಿಕ್ಷೆಯಾಗುವಂತೆ ಕಾನೂನಾತ್ಮಕವಾಗಿ ನ್ಯಾಯಾಲಯದಲ್ಲಿ ಹೋರಾಟ ನಡೆಸುವುದರ ಬಗ್ಗೆ ಚರ್ಚೆಗಳು ನಡೆದಿವೆ ಎಂದರು.

ವಿವಿಧ ನಿಗಮ-ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಪ್ರಕ್ರಿಯೆ

25 ಶಾಸಕರ ಪಟ್ಟಿ ಸಿದ್ಧ; ಶೀಘ್ರವೇ ಪ್ರಕಟ

ಶಾಸಕ ಅನಿಲ್ ಚಿಕ್ಕಮಾದು ಮುಡಾಗೆ, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಲಿಡ್ಕರ್ ಅಧ್ಯಕ್ಷ ಗಾದಿ?

ಮೈಸೂರು, ನ.30(ಆರ್‌ಕೆ)–ರಾಜ್ಯದ 30 ನಿಗಮ–ಮಂಡಳಿ ಹಾಗೂ ಪ್ರಾಧಿಕಾರಗಳಿಗೆ ಮುಖ್ಯಸ್ಥರನ್ನು ನೇಮಿಸುವ ಪ್ರಕ್ರಿಯೆ ಆರಂಭಗೊಂಡಿದ್ದು, ಡಿಸೆಂಬರ್ 4 ರಿಂದ 15ರವರೆಗೆ ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನ ಆರಂಭಕ್ಕೂ ಮುನ್ನ ಆದೇಶ ಹೊರಡಿಸಲು ಸರ್ಕಾರ ಮುಂದಾಗಿದೆ.

ಮೊದಲ ಹಂತದಲ್ಲಿ 25 ಶಾಸಕರ ಹೆಸರಿನ ಪಟ್ಟಿ ಸಿದ್ಧಗೊಂಡಿದ್ದು, ಅತೀ ಶೀಘ್ರ ನೇಮಕಾತಿ ಆದೇಶ ಹೊರಬೀಳಲಿದೆ. ಮೊದಲ ಪಟ್ಟಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷರಾಗಿ ಹೆಚ್.ಡಿ.ಕೋಟೆ ಕ್ಷೇತ್ರದಿಂದ ಎರಡನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರನ್ನು ಲಿಡ್ಕರ್ ಅಧ್ಯಕ್ಷರಾಗಿ ನೇಮಕ ಮಾಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಚಾಮರಾಜನಗರ ಜಿಲ್ಲೆಯಿಂದ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ, ಬೆಂಗಳೂರಿನ ಎಂಎಲ್‌ಸಿ ಯು.ಬಿ.ವೆಂಕಟೇಶ ಹೆಸರುಗಳು ಅಂತಿಮವಾಗಿವೆ ಎಂದು ತಿಳಿದು ಬಂದಿದೆ. ಮೊದಲ ಹಂತದಲ್ಲಿ 4 ರಿಂದ 5 ಬಾರಿ ಶಾಸಕರಾಗಿರುವ ಹಿರಿಯ ಶಾಸಕರು ಸಚಿವ ಸ್ಥಾನಗಳಿಗೆ ಲಾಬಿ ಮಾಡುತ್ತಿದ್ದು, ಅಂತಹವರಿಗೆ ನಿಗಮ–ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡಿ ಸಮಾಧಾನಪಡಿಸಲು ಸರ್ಕಾರ ನಿರ್ಧರಿಸಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ ಅವರು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದ ವೇಳೆ ಕೆಪಿಸಿಸಿ ಕಚೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಹಿರಿಯ ಸದಸ್ಯರೊಂದಿಗೆ



ಅನಿಲ್ ಚಿಕ್ಕಮಾದು



ಡಾ. ಡಿ.ತಿಮ್ಮಯ್ಯ

ಚರ್ಚಿಸಿ ಶಾಸಕರ ಹೆಸರನ್ನು ನಿಗಮ–ಮಂಡಳಿ, ಪ್ರಾಧಿಕಾರಗಳಿಗೆ ಅಂತಿಮಗೊಳಿಸಿದ್ದಾರೆ ಎನ್ನಲಾಗಿದೆ.

30 ನಿಗಮ ಮಂಡಳಿಗಳಿಗೆ 25 ಮಂದಿ ಶಾಸಕರ ಪಟ್ಟಿ ಸಿದ್ಧಗೊಂಡಿದ್ದು, ಶೀಘ್ರ ಆದೇಶ ಹೊರಬೀಳಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಈಗ ನೇಮಕ ಮಾಡಿದರೆ ಆಕಾಂಕ್ಷಿಗಳಾಗಿದ್ದು, ಸ್ಥಾನ ವಂಚಿತ ಶಾಸಕರು, ವಿಧಾನಪರಿಷತ್ ಸದಸ್ಯರು ಬೆಳಗಾವಿ ಅಧಿವೇಶನದಲ್ಲಿ ಅಸಮಾಧಾನ ವ್ಯಕ್ತಪಡಿಸಿ, ಅಸಹಕಾರ ತೋರುವ ಸಾಧ್ಯತೆ ಇರುವುದರಿಂದ ಅಧಿವೇಶನ ಮುಗಿದ ಬಳಿಕ ಪಟ್ಟಿ ಬಿಡುಗಡೆ ಮಾಡುವುದು ಒಳಿತು ಎಂದು ಕೆಲವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಆದರೆ, 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆ ದೃಷ್ಟಿಯಿಂದ ಅಧಿವೇಶನ ಆರಂಭವಾಗುವ ಮುನ್ನವೇ ನಿಗಮ–ಮಂಡಳಿಗಳಿಗೆ ನೇಮಕ ಮಾಡುವುದು ಒಳಿತು. ಈಗಾಗಲೇ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳು ಕಳೆದರೂ ನಿಗಮ–ಮಂಡಳಿ ಅಧ್ಯಕ್ಷರ ನೇಮಕ ಮಾಡದಿರುವುದರಿಂದ ಹಲವು ಹಿರಿಯ ಶಾಸಕರು ಹಾಗೂ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ನಿರಾಸೆಯಾಗಿದೆ ಎಂದು ಹಲವರು ಪಕ್ಷದ ವರಿಷ್ಠರಿಗೆ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈವರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಟ್ಟಾ ಬೆಂಬಲಿಗರಾದ ಮೈಸೂರು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ ಅವರ ಹೆಸರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಅಧ್ಯಕ್ಷಗಾದಿಗೆ ಕೇಳಿಬರುತ್ತಿತ್ತು. ಸುರ್ಜೇವಾಲ ಅವರು ಬೆಂಗಳೂರಿಗೆ ಬಂದು–ಹೋದ ಮೇಲೆ ಶಾಸಕ ಅನಿಲ್ ಚಿಕ್ಕಮಾದು ಅವರ ಹೆಸರು ಅಂತಿಮವಾಗಿದೆ ಎಂದು ಹೇಳಲಾಗುತ್ತಿದೆ.

ಪ್ರಮುಖ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಆಪ್ತ ವಲಯದಲ್ಲಿ ಗುರ್ತಿಸಿಕೊಂಡಿರುವ ನಾಯಕರು, ನಿಗಮ–ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷ ಸ್ಥಾನಕ್ಕಾಗಿ ಬೆಂಗಳೂರಿನ ವಿಧಾನಸೌಧ, ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ಲಾಬಿ ಮಾಡತೊಡಗಿದ್ದಾರೆ ಎಂದು ಹೇಳಲಾಗುತ್ತಿದೆ. ಎರಡನೇ ಹಂತದಲ್ಲಿ ಉಳಿದ ನಿಗಮ–ಮಂಡಳಿಗಳಿಗೆ ರಾಜ್ಯ ಚಳಿಗಾಲ ಅಧಿವೇಶನದ ಬಳಿಕ ಲೋಕಸಭಾ ಚುನಾವಣೆ ವೇಳಾಪಟ್ಟಿ ಪ್ರಕಟವಾಗುವುದರೊಳಗಾಗಿ ಅಧ್ಯಕ್ಷರ ನೇಮಕ ಮಾಡಲು ಸರ್ಕಾರ ಮುಂದಾಗಿದ್ದು, ಆ ವೇಳೆ ಹಾಲಿ ಶಾಸಕರನ್ನು ಹೊರತುಪಡಿಸಿ ಮಾಜಿ ಶಾಸಕರು, ಮಾಜಿ ಸಚಿವರು ಹಾಗೂ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರನ್ನು ಪರಿಗಣಿಸಲು ಸರ್ಕಾರ ಮುಂದಾಗಿದೆ ಎಂಬ ಮಾತು ವ್ಯಾಪಕವಾಗಿ ಕೇಳಿಬರುತ್ತಿದೆ.

ನಕ್ಕರೆ ಅದೇ ಸ್ವರ್ಗ

ಆತ : "ಸ್ಕೂಟರ್ ತಗೋತೀನಿ ಅಂತಿದ್ದ ನೀನು ಸೈಕಲ್ ಯಾಕೆ ತಗೊಂಡೆ?"
ಈತ : "ಪೆಟ್ರೋಲ್ ಬೆಲೆ ಮತ್ತೆ ಹೆಚ್ಚುತ್ತಂತೆ. ಸೈಕಲ್ಲೇ ಸುಲಭ. ಒಂದು ಲೋಟ ಕಾಫಿ ಹಾಕಿಕೊಂಡರೆ 10 ಕಿ.ಮೀ. ಓಡುತ್ತೆ."

ಮೈಸೂರು ಮಿತ್ರ

ಶುಕ್ರವಾರ, 1 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ವಿಪತ್ತು ಬರುವ ಮುನ್ನವೇ ಅದನ್ನು ನೀಗಿಸಿಕೊಳ್ಳುವುದು ಜಾಣತನ

–ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ { ದೇಶ ತಿರುಗಬೇಕು,
ಗಾದೆ ಸುಳ್ಳಾಗದು { ಭಾಷೆ ಕಲಿಯಬೇಕು

ನಿಮ್ಮ ಪತ್ರಗಳು

ಡಿಸಿ ಆದೇಶ ಜಾರಿ ವಿವೇಚನಾರಹಿತ

ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಳೆದ ವಾರ ಕೈಗೊಂಡ ದಿಢೀರ್ ನಿರ್ಧಾರ ಸಾರ್ವಜನಿಕ ಹಿತದೃಷ್ಟಿಯ ಅರಿವಿಲ್ಲದವರು ಕೈಗೊಂಡ ಕ್ರಮ ಎನ್ನದೇ ವಿಧಿಯಿಲ್ಲ. ಇನ್ನು ಮುಂದೆ ಮುಡಾದಲ್ಲಿ ನಿವೇಶನಗಳ ಖಾತೆ ಮಾಡುವಂತಿಲ್ಲ ಎಂದು ಆದೇಶಿಸಿರುವ ಮುಡಾ ಅಧ್ಯಕ್ಷರು ಆದ ಜಿಲ್ಲಾಧಿಕಾರಿಗಳು ಒಂದೇ ದಿನದಲ್ಲಿ ಈ ಆದೇಶ ಜಾರಿ ಮಾಡಿರುವುದು ವಿವೇಚನಾ ರಹಿತ ಹಾಗೂ ಆಡಳಿತಾತ್ಮಕ ಅನುಭವದ ಕೊರತೆಯ ಆದೇಶವಲ್ಲದೆ ಬೇರೇನಲ್ಲ.

ಮೊದಲು ಮುಡಾ ಈವರೆಗೆ ನಕ್ಷೆ ಅನುಮೋದಿಸಿ ಖಾತೆ ಮಾಡಿರುವ ಬಡಾವಣೆಗಳನ್ನು ದಾಖಲೆ ಸಹಿತ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಬೇಕು. ನೀರು ಸರಬರಾಜು, ಟ್ಯಾಂಕ್ ನಿರ್ಮಾಣ ಸೇರಿದಂತೆ ಬಡಾವಣೆದಾರರಿಂದ ಪಾವತಿಸಿಕೊಂಡಿರುವ ಲಕ್ಷಾಂತರ ರೂ. ಮೊತ್ತವನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಬೇಕು. ಅಲ್ಲದೇ ಈ ಹಣದಲ್ಲಿ ತಾನು ಮಾಡಬೇಕಾದ ಕೆಲಸಗಳನ್ನು ಪೂರ್ತಿಗೊಳಿಸಬೇಕು. ತನ್ನ ಜವಾಬ್ದಾರಿಯನ್ನು ನಿರ್ವಹಿಸುವ ಮುನ್ನ ಬಡಾವಣೆ ವಹಿಸಿಕೊಡಲು ಮುಂದಾದರೆ ಯಾವ ಸ್ಥಳೀಯ ಸಂಸ್ಥೆ ಇದನ್ನು ಒಪ್ಪಿಕೊಳ್ಳಲು ಸಾಧ್ಯ?

ಇಂದು ನಿತ್ಯ ನೂರಾರು ನಿವೇಶನದಾರರು ಖಾತೆ ಮಾಡಿಸಿಕೊಳ್ಳಲು, ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ಮುಡಾಗೆ ಅಲೆದಾಡುತ್ತಿದ್ದಾರೆ. ಅವರಿಗೆ ಸಿಗುತ್ತಿರುವ ಉತ್ತರ ಡಿಸಿ ಆದೇಶಿಸಿದ್ದಾರೆ ಮುಡಾದಲ್ಲಿ ಖಾತೆ ಮಾಡುವುದಿಲ್ಲ ಎಂದು. ಆದರೆ ಎಲ್ಲಿ ಖಾತೆ ಮಾಡಿಸಿಕೊಳ್ಳಬೇಕೆಂಬ ಮಾಹಿತಿಯೂ ದೊರೆಯುತ್ತಿಲ್ಲ. ಇನ್ನು ಸ್ಥಳೀಯ ಸಂಸ್ಥೆಗಳಿಗೆ ಹೋದರೆ, ನಮಗೆ ದಾಖಲೆಯೇ ಹಸ್ತಾಂತರವಾಗಿಲ್ಲ ಎಂಬ ಉತ್ತರ ಸಿಗುತ್ತದೆ. ಲಕ್ಷಾಂತರ ರೂ. ತೆತ್ತು ನಿವೇಶನ ಖರೀದಿಸಿದವರು ಅಲ್ಲೂ ಇಲ್ಲ, ಇಲ್ಲೂ ಇಲ್ಲ ಎಂದು ತಲೆ ಮೇಲೆ ಕೈಹೊತ್ತು ಕೂರುವ ಸ್ಥಿತಿ.

ದಾಖಲೆಗಳನ್ನು ಮೊದಲು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕು. ಅಲ್ಲಿ ಖಾತೆ ಮಾಡಿಕೊಡಲು ಅಗತ್ಯ ಸೌಲಭ್ಯ ಕಲ್ಪಿಸಿ ಅಲ್ಲಿನ ಆಡಳಿತವನ್ನು ಬಲಪಡಿಸಬೇಕು. ಒಟ್ಟಾರೆ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಯಾವುದೇ ಹೊಸ ವ್ಯವಸ್ಥೆ ಜಾರಿಯಾಗಬೇಕು. ಇದ್ಯಾವುದನ್ನು ಮಾಡದೇ, ಕನಿಷ್ಠ ಸಾರ್ವಜನಿಕ ಪ್ರಕಟಣೆ ಮೂಲಕ ಮಾಹಿತಿಯನ್ನು ನೀಡದೇ ಏಕಾಏಕಿ ಆದೇಶ ಜಾರಿ ಮಾಡಿರುವುದು ಸಮರ್ಥನೀಯವಲ್ಲ.

ಯಾವುದೇ ಆದೇಶ ಜಾರಿ ಮಾಡುವ ಮುನ್ನ ಇದರಿಂದ ಸಾರ್ವಜನಿಕರ ಮೇಲಾಗುವ ಪರಿಣಾಮದ ಅರಿವು ಇರಬೇಕು. ಅಲ್ಲದೇ ಸಾವಿರಾರು ಖಾತೆ ಮಾಡುವ ವ್ಯವಸ್ಥೆ ಬದಲಾವಣೆಗೆ ಸಾಕಷ್ಟು ಕಾಲಾವಕಾಶ ನೀಡಿ, ಮೊದಲು ಸಾರ್ವಜನಿಕರಿಗೆ ಮಾಹಿತಿ ನೀಡಿ ನಂತರ ಅನುಷ್ಠಾನಗೊಳಿಸುವುದು ಸೂಕ್ತ.

ಮುಡಾ ಇಂದು ಭ್ರಷ್ಟಾಚಾರದ ಕೂಪವಾಗಿದೆ. ಪ್ರತಿ ಟೇಬಲ್ ಸಹ ಪ್ರತಿ ನಿವೇಶನಕ್ಕೆ ಇಷ್ಟು ಎಂದು ನಿಗದಿಪಡಿಸಿಕೊಂಡು ಬಡಾವಣೆದಾರರಿಂದ ಹಣ ದೋಚಲಾಗುತ್ತಿದೆ. ಲಂಚ ತೆರದೇ ಒಂದು ಕಾಗದವೂ ಅಲ್ಲಾಡುವುದಿಲ್ಲ ಎಂಬುದು ಬಹಿರಂಗ ಸತ್ಯ. ದಲ್ಲಾಳಿಗಳ ಹಾವಳಿ ಮಿತಿ ಮೀರಿದೆ. ಇಂಥ ಭ್ರಷ್ಟ ವ್ಯವಸ್ಥೆಯನ್ನು ಸರಿಪಡಿಸಲಾಗದ ಜಿಲ್ಲಾಧಿಕಾರಿಗಳು, ನಿವೇಶನದಾರರನ್ನು ಆಘಾತಕ್ಕೀಡು ಮಾಡುವಂತಾಗಿದೆ. ದಿಢೀರ್ ಆದೇಶ ನೀಡಿರುವುದು ವಿಪರ್ಯಾಸ. ಈಗಲಾದರೂ ಇಂತಹ ನಿರ್ಧಾರ ಕೈಬಿಟ್ಟು ಸಮಯಾವಕಾಶ ನೀಡಿ ದಾಖಲೆ ಹಸ್ತಾಂತರಿಸಿದ ನಂತರ ಇಂತಹ ಆದೇಶ ಜಾರಿಗೆ ಮುಂದಾಗುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ.

– ಗಿರೀಶ್, ಮೈಸೂರು

ಸುರಂಗದಲ್ಲಿ ಸಿಲುಕಿದವರ ರಕ್ಷಣೆಗೆ ಅಭಿನಂದನೆಗಳು

ಮಾನ್ಯರೆ,

ನವೆಂಬರ್ 12 ರಂದು ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ ಕ್ಯಾರಾ ಬಳಿ ನಿರ್ಮಾಣ ಹಂತದಲ್ಲಿದ್ದ ಸುರಂಗ ಕುಸಿದು ಅದರೊಳಗೆ ಸಿಲುಕಿದ್ದ 41 ಕಾರ್ಮಿಕರ ಹೊರ ಬರುವಿಕೆಗಾಗಿ ಭಾರತ ಸೇರಿದಂತೆ ಇಡಿ ಜಗತ್ತೆ ಎದುರು ನೋಡುತ್ತಿತ್ತು. ಈ ಅಪಘಾತ ದೇಶವನ್ನು ಶೋಕದಲ್ಲಿ ಮುಳುಗುವಂತೆ ಮಾಡಿತ್ತು.ಆದರೆ ಸುದೀರ್ಘ 423 ಗಂಟೆಯ ಕಾರ್ಯಾಚರಣೆಯ ನಂತರ ಎಲ್ಲಾ 41 ಕಾರ್ಮಿಕರನ್ನು ಹೊರಗೆ ತಂದಿರುವುದು ಸಂತಸದ ವಿಷಯವಾಗಿದೆ.

ಕಾರ್ಯಾಚರಣೆಯ ತಂಡ ನಿರಂತರ ಅಮ್ಲಜನಕ ಪೂರೈಕೆ, 6 ಇಂಚಿನ ಪೈಪಿನ ಮೂಲಕ ಸುರಂಗದಲ್ಲಿ ಸಿಲುಕಿದವರಿಗೆ ಅಹಾರ ಪೂರೈಕೆ ಹೀಗೆ ಅವರ ಅವಿರತ ಪ್ರಯತ್ನದ ಫಲವಾಗಿ ಕಾರ್ಮಿಕರ ಜೀವ ಉಳಿಸಿರುವುದು ರಕ್ಷಣಾ ತಂಡದ ಸಾಹಸಕ್ಕೆ ಹಿಡಿದ ಕನ್ನಡಿಯಾಗಿದೆ.

ಸುರಂಗದಲ್ಲಿ ಸಿಲುಕಿದವರ ರಕ್ಷಣೆಗಾಗಿ ಅಮೆರಿಕಾದಿಂದ 25 ಟನ್ ತೂಕದ ಮಣ್ಣು ಬಗೆಯುವ ಯಂತ್ರವನ್ನು ಸಹ ತರಿಸಿರುವುದು ಸರ್ಕಾರದ ಮಾನವೀಯತೆಗೆ ಸಾಕ್ಷಿಯಾಗಿದೆ.ಕೊನೆಯ ಗಳಿಗೆಯಲ್ಲಿ ಅವೈಜ್ಞಾನಿಕ ಹಾಗೂ ಅಪಾಯಕಾರಿಯಾದ ರ್‍ಯಾಟ್ ಹೋಲ್ ವಿಧಾನವನ್ನು ಬಳಸುವ ಮೂಲಕ ಸಣ್ಣ ಪ್ರದೇಶದಲ್ಲಿ ಸಲಾಕೆ, ಗುದ್ದಲಿ ಮುಂತಾದ ಕೈಯಲ್ಲಿ ಬಳಸುವ ಉಪಕರಣಗಳನ್ನು ಬಳಸಿ ಸುರಂಗವನ್ನು ಪೂರ್ತಿಗೊಳಿಸಿ ಎಲ್ಲಾ ಕಾರ್ಮಿಕರ ಜೀವವನ್ನು ರಕ್ಷಿಸಿದ್ದು ಸಾಧನೆಯಾಗಿದೆ.

ಇವರ ಜೊತೆಗೆ ವೈದ್ಯಕೀಯ ಸಿಬ್ಬಂದಿಗಳು ಸುರಂಗದ ಒಳಗೆ ತಾತ್ಕಾಲಿಕ ಕ್ಲಿನಿಲ್ ಮತ್ತು 8 ಹಾಸಿಗೆಗಳ ವ್ಯವಸ್ಥೆ ಹಾಗೂ ಸುರಂಗದ ಹೊರಗೆ ನಿಂತಿದ್ದ 41 ಅಂಬ್ಯುಲೆನ್ಸ್‌ಗಳು.. ಹೀಗೆ ಕಾರ್ಮಿಕರ ಜೀವ ರಕ್ಷಣೆಗೆ ಎಲ್ಲಾ ಏರ್ಪಾಡು ಮಾಡಿದ್ದ ಜಿಲ್ಲಾಡಳಿತಕ್ಕೆ ದೇಶದ ಜನರ ಪರವಾಗಿ ಧನ್ಯವಾದಗಳು.

ಸುರಂಗದ ರಕ್ಷಣಾ ಕಾರ್ಯದಲ್ಲಿ ಸಹಕರಿಸಿದ ಎಲ್ಲಾ ರಕ್ಷಣಾ ಸಿಬ್ಬಂದಿ, ವೈದ್ಯಕೀಯ ಸಿಬ್ಬಂದಿ, ಪೊಲೀಸರು ಹಾಗೂ ಪ್ರತಿಯೊಬ್ಬರಿಗೂ ಸೂಕ್ತವಾದ ಬಹುಮಾನದೊಂದಿಗೆ ಸರ್ಕಾರ ಗೌರವಿಸಲಿ ಎಂದೂ ಮತ್ತು ಈ ಎಲ್ಲಾ ಸಿಬ್ಬಂದಿಗೆ ಸರ್ಕಾರದಿಂದ ಶೌರ್ಯ ಪ್ರಶಸ್ತಿ ನೀಡಬೇಕೆಂದು ದೇಶದ ಜನತೆಯ ಪರವಾಗಿ ಅಗ್ರಹಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಮೈಸೂರಿನ ಸಾರ್ವಜನಿಕ ಉದ್ಯಾನವನದಲ್ಲಿ ವ್ಯಾಯಾಮ ಮಾಡುವ ಯಂತ್ರಗಳನ್ನು ಸರಿಪಡಿಸಿ

ಮಾನ್ಯರೆ,

ಮೈಸೂರಿನ ಸಾರ್ವಜನಿಕ ಉದ್ಯಾನವನದಲ್ಲಿ ವ್ಯಾಯಾಮ ಮಾಡುವ ಯಂತ್ರಗಳು ಹದಗೆಟ್ಟಿವೆ. ಖಾಸಗಿ ವ್ಯಾಯಾಮ ಶಾಲೆಗಳಲ್ಲಿ ಅಂದರೆ ಜಿಮ್ ನಲ್ಲಿ ಸಿಗುವಂತಹ ಸೌಲಭ್ಯಗಳು ಸಾರ್ವಜನಿಕ ಉದ್ಯಾನವನದಲ್ಲಿ ದೊರೆಯುತ್ತದೆ. ಹಾಗೆ ಮೈಸೂರು ಸಿಟಿಯ ಸಾರ್ವಜನಿಕ ಉದ್ಯಾನವನದಲ್ಲಿ ವ್ಯಾಯಾಮ ಯಂತ್ರಗಳನ್ನು ಅಳವಡಿಸಿದ್ದಾರೆ. ಇದು ಒಳ್ಳೆಯ ವಿಷಯ. ಆದರೆ ಯಂತ್ರಗಳು ಅಳವಡಿಸಿದರೆ ಸಾಕಾಗುವುದಿಲ್ಲ. ಅದನ್ನು ಎರಡು ಅಥವಾ ಮೂರು ತಿಂಗಳಿಗೊಮ್ಮೆ ಸರಿಪಡಿಸಬೇಕು ಅಥವಾ ಎಲ್ಲಾ ವ್ಯಾಯಾಮ ಯಂತ್ರಗಳು ಸರಿ ಇದೆಯೇ ಎಂದು ನೋಡಿಕೊಳ್ಳುವುದು ಬಹಳ ಮುಖ್ಯವಾಗಿದೆ. ಶ್ರೀಮಂತರು ಆಧುನಿಕ ಖಾಸಗಿ ವ್ಯಾಯಾಮ ಶಾಲೆಗೆ ಸೇರಿಕೊಳ್ಳುತ್ತಾರೆ. ಆದರೆ ಮಧ್ಯಮ ವರ್ಗದ ಜನರು ಸಾರ್ವಜನಿಕ ಉದ್ಯಾನದಲ್ಲಿರುವ ವ್ಯಾಯಾಮ ಯಂತ್ರಗಳನ್ನು ಬಳಸುತ್ತಾರೆ. ಆದರೆ ಉದ್ಯಾನವನಗಳಲ್ಲಿ ಅಳವಡಿಸಿರುವ ವ್ಯಾಯಾಮ ಯಂತ್ರಗಳು ಕೆಟ್ಟು ನಿಂತಿದ್ದು, ವಾಯುವಿಹಾರಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಮೈಸೂರಿನ ಸಾರ್ವಜನಿಕ ಉದ್ಯಾನವನಗಳಲ್ಲಿ ಯಂತ್ರಗಳು ಸರಿಯಿಲ್ಲದ ಕಾರಣ ಆಯಾ ಸಿಬ್ಬಂದಿಗಳು ಇದನ್ನು ಗಮನಿಸಿ ಸರಿಪಡಿಸಬೇಕೆಂದು ಮನವಿ.

–ಕೀರ್ತನ ಎಂ ಕೆ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್



ಡಿಸೆಂಬರ್ 1, ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಎಪ್ಪತ್ತು–ಎಂಭತ್ತರ ದಶಕದಲ್ಲಿ ಅವರು ಸಿನಿಮಾ ನಿರ್ದೇಶಿಸುತ್ತಾರೆಂದರೆ ಸಾಕು ಭಾರತೀಯ ಚಿತ್ರರಂಗದ ಚಿತ್ತವೆಲ್ಲಾ ಅವರತ್ತಲೇ ನೆಟ್ಟಿರುತ್ತಿತ್ತು. ಆ ಸಿನಿಮಾ ಮುಹೂರ್ತವಾಗಿ ಅದು ಮುಗಿಯುವವರೆಗೂ ಅದರ ಕಥಾವಸ್ತು, ಸಾಹಿತ್ಯ, ಹಾಡು, ಸಂಭಾಷಣೆ, ಕಲಾವಿದರು, ಗಾಯಕರು, ಸಂಗೀತಗಾರರು, ತಂತ್ರಜ್ಞರಾದಿಯಾಗಿ ಆ ಸಿನಿಮಾದ ಎಲ್ಲಾ ಮಾಹಿತಿಗಳನ್ನೂ ಕುತೂಹಲದಿಂದ ಎಲ್ಲರೂ ಗಮನಿಸುತ್ತಿದ್ದರು. ಅವರ ನಿರ್ದೇಶನದ ಸಿನಿಮಾ ಬಿಡುಗಡೆಯಾಗುತ್ತಿದೆ ಎಂಬ ಸುದ್ದಿ ಕೇಳಿದರೆ ಸಾಕು ಅದರ ವೀಕ್ಷಣೆಗೆ ಸಾಮಾನ್ಯ ಜನರ ನೂಕು ನುಗ್ಗಲು ಒಂದೆಡೆಯಾದರೆ ಮತ್ತೊಂದೆಡೆ ಭಾರತೀಯ ಚಿತ್ರ ರಂಗದ ವಿವಿಧ ಭಾಷೆಗಳ ಪ್ರಮುಖರೇ ಆ ಸಿನಿಮಾ ವೀಕ್ಷಣೆಗೆ ತುದಿಗಾಲಲ್ಲಿ ನಿಂತಿರುತ್ತಿದ್ದರು. ಅವರ ಸಿನಿಮಾಗಳೇ ಹಾಗೆ ಅದ್ಭುತ. ವೀಕ್ಷಿಸಿ ಆಸ್ವಾದಿಸುವ ಚಿತ್ರರಸಿಕರಿಗೆ ಮನರಂಜನೆ, ನೋಡಿ ಕಲಿಯ ಬೇಕೆನ್ನುವ ಚಿತ್ರೋದ್ಯಮಿಗಳಿಗೆ ಮಾರ್ಗಸೂಚಿ, ಅದಕ್ಕೇನೆ ಅವರ ಚಿತ್ರ ತೆರೆಕಂಡ ದಿನ ಕಾಲೇಜಿನಲ್ಲಿ ಪಾಠ ಕಲಿಯುವ ವಿದ್ಯಾರ್ಥಿಗಳಂತೆ ಬೆಂಗಳೂರಿನ ಚಿತ್ರಮಂದಿರಗಳಲ್ಲಿ ಚಿತ್ರೋದ್ಯಮಿಗಳೂ ಜಮಾಯಿಸುತ್ತಿದ್ದರು. ಅವರ ಚಿತ್ರ ನಿರ್ದೇಶನದ ಪ್ರತಿಯೊಂದು ಎಳೆ ಎಳೆಯನ್ನೂ ಅರಿತು ದಿಗ್ದರ್ಶನವೇನೆಂಬುದರ ವಿಶ್ವರೂಪ ದರ್ಶನವಾದಂತೆ ಬೆರಗುಗೊಂಡು "ವ್ಹಾಹ್, ಚಿತ್ರ ನಿರ್ದೇಶಕ ಅಂದ್ರೆ ಇವ್ರೇನೆ. ಇವರ ಸಮಕ್ಕೆ ಭಾರತೀಯ ಚಿತ್ರರಂಗದಲ್ಲೇ, ಅಷ್ಟೇ ಏಕೆ ಜಗತ್ತಿನ ಚಿತ್ರರಂಗದಲ್ಲೇ ಯಾರೂ ಇಲ್ಲ!" ಎಂಬ ಉದ್ಗಾರದೊಡನೆ ಅತಿರಥ–ಮಹಾರಥರೆನಿಸಿಕೊಂಡ ನಿರ್ದೇಶಕರೇ ಶಹಭಾಶ್‌ಗಿರಿ ಕೊಡುತ್ತಿದ್ದರು.

ಎಲ್ಲರಿಂದಲೂ ಇಂಥ ಹೊಗಳಿಕೆಯ ಹೊನ್ನ ಕಿರೀಟ ತೊಡಿಸಿಕೊಳ್ಳುತ್ತಿದ್ದ ಆ ಚಿತ್ರ ನಿರ್ದೇಶಕರು ಬೇರ್‍ಯಾರೂ ಅಲ್ಲ. ನಮ್ಮ ಕನ್ನಡ ಚಿತ್ರರಂಗದ ರಸಋಷಿ ಎಸ್.ಆರ್.ಪುಟ್ಟಣ್ಣ ಕಣಗಾಲ್. ಒಂದು ರೀತಿ ಕನ್ನಡ ಸಿನಿಮಾ ಲೋಕದಲ್ಲಿ ಮಹಾನ್ ಕಲಾವಿದರಾಗಿ ಅಜರಾಮರರಾಗಿರುವ ವರನಟ ಡಾ.ರಾಜ್‌ಕುಮಾರ್ ಅವರು ಹೇಗೋ, ಕನ್ನಡ ಸಾಹಿತ್ಯ ಲೋಕದಲ್ಲಿ ಮಹಾಕವಿಯಾಗಿ ಚಿರಸ್ಥಾಯಿಯಾಗಿರುವ ರಸಋಷಿ ಕುವೆಂಪು ಅವರು ಹೇಗೋ ಅದೇ ರೀತಿ ಕನ್ನಡ ಚಿತ್ರ ಲೋಕದಲ್ಲಿ ಅಪ್ರತಿಮ ಮಹಾ ಚಿತ್ರ ನಿರ್ದೇಶಕರಾಗಿ ಪುಟ್ಟಣ್ಣ ಕಣಗಾಲರು ಚಿರಸ್ಮರಣೀಯರು.

'ಪುಟ್ಟಣ್ಣ' ಎಂಬುದು ಕೇವಲ ಒಂದು ಹೆಸರಲ್ಲ. ಸಿನಿಮಾ ಲೋಕದ ಸೀಮಾಪುರುಷ, ಸಿಂಹ ಪುರುಷರೂ ಹೌದು. ಬೆಳ್ಳಿ ತೆರೆಯ ತೇರನ್ನೆಳೆದು ಏಕತಾನತೆಯಿಂದ ಅದೇ ರಾಗ ಅದೇ ಹಾಡು ಎಂಬಂತಿದ್ದ ಕನ್ನಡ ಚಿತ್ರರಂಗದ ದಿಕ್ಕು–ದೆಸೆಗಳನ್ನೆಲ್ಲಾ ಬದಲಾಯಿಸಿ ಪ್ರಯೋಗಾತ್ಮಕ ಸ್ಪರ್ಶ ನೀಡಿದ ಚಿತ್ರಬ್ರಹ್ಮ. ತಮ್ಮದೇ ಆದ ಚಿತ್ರ ಪರಂಪರೆ ಸೃಷ್ಟಿಸಿ ನೆಟ್ಟಗೆ ಏನೇನೂ ಇರದಿದ್ದ ಕಾಲದಲ್ಲೇ ಸೃಜನಾತ್ಮಕತೆಯನ್ನು ನೆಟ್ಟಿ, ತಾಂತ್ರಿಕವಾಗಿ ಭವ್ಯತೆಯನ್ನು ಭಿತ್ತಿದ ಭವ್ಯಕಲ್ಪ. ಚಲನಚಿತ್ರಗಳನ್ನು ಹೀಗೂ ತೆಗೆಯಬಹುದೆಂಬ ಪರಿಕಲ್ಪನೆ ನೀಡಿ ಇತರೇ ಭಾಷಿಕರಿಗೂ ದಿಕ್ಸೂಚಿಯಾದ ದಿವ್ಯದಿಗ್ದರ್ಶಕ, ಕಲಾವಿದ–ಕಲಾವಿದೆಯರೆಂದರೆ ಹೀಗಿರಬೇಕೆಂದು ಕೆತ್ತಿ ತೋರಿಸಿದ ಕಲಾಶಿಲ್ಪಿ. ಚಿತ್ರ ತೆಗೆಯುತ್ತಾ ತೆಗೆಯುತ್ತಾ ಅದರೊಳಗೇ ತಲ್ಲೀನರಾಗಿ ಚಿತ್ರರಸಿಕರ ಮನೋ ಭೂಮಿಕೆಯನ್ನೇ ವಶಪಡಿಸಿಕೊಳ್ಳುತ್ತಿದ್ದ ಭಾವಶಿಲ್ಪಿ. ಕ್ಯಾಮರಾ ಜೊತೆ ನಿಂತರೆ ಸಾಕು ಫ್ರೇಮ್ ಟು ಫ್ರೇಮ್ ದೃಶ್ಯ ಕಾವ್ಯ ಸೃಷ್ಟಿಸಿ, ಚಿತ್ರಕಾವ್ಯ ಕಟ್ಟುತ್ತಿದ್ದ ಕಾವ್ಯ ಶಿಲ್ಪಿ. ಕಥೆ, ಚಿತ್ರಕಥೆ, ಗೀತೆ, ಅಭಿನಯ, ಛಾಯಾಗ್ರಹಣ, ಶಬ್ದಗ್ರಹಣ, ಸಂಗೀತ, ಹಿನ್ನೆಲೆ, ಮುನ್ನೆಲೆ ಹೀಗೆ ಎಲ್ಲದರಲ್ಲೂ ತಮ್ಮದೇ ಆದ ಸಿನಿಮಾ ಪ್ರಜ್ಞೆಯಿಂದ ಮಹತ್ತರ ಬದಲಾವಣೆ ತಂದು ಕನ್ನಡ ಚಿತ್ರರಂಗವನ್ನು ಕಟ್ಟುವಲ್ಲಿ ಹಗಲಿರುಳು ಶ್ರಮಿಸಿದ ಅದ್ಭುತ ನಿರ್ದೇಶಕ. ಹಾಗೆ ನೋಡಿದರೆ ಇಂದಿನ ಹೊಸತಲೆಮಾರಿನ ಬಹಳಷ್ಟು ಪ್ರಯೋಗಶೀಲ ಮನಸ್ಸುಗಳ ನಿರ್ದೇಶಕರ ಸೃಷ್ಟಿಗೆ ಪುಟ್ಟಣ್ಣನವರೇ ಮೂಲಧಾತು.

ಅದಾವ 'ಅಮೃತ ಘಳಿಗೆ'ಯಲ್ಲಿ ಪುಟ್ಟಣ್ಣ 'ಬೆಳ್ಳಿಮೋಡ'ವಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ್ದರೋ ಏನೋ ಅವತ್ತು ಶುರುವಾದದ್ದು ಕನ್ನಡ ಚಿತ್ರರಂಗಕ್ಕೆ 'ಶುಭಮಂಗಳ'ಕಾಲ. ಅದು ಇವತ್ತಿಗೂ ಭದ್ರತಳಪಾಯವಾಗಿದ್ದು ಅದರ ಮೇಲೆಯೇ ಭವ್ಯಾತಿಭವ್ಯ ಚಿತ್ರಗಳು ಸೃಷ್ಟಿಗೊಳ್ಳುತ್ತಿದ್ದು ರಾಜ್ಯ ಮಾತ್ರವಲ್ಲದೆ ರಾಷ್ಟ್ರ–ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಚಿತ್ರಗಳು ಬೆಳಗುವಂತಾಗಿವೆ. ಅಂದು ಕನ್ನಡ ಚಿತ್ರರಂಗಕ್ಕೆ ಪುಟ್ಟಣ್ಣ ತೋರುಬೆರಳಾಗಿದ್ದರು. ಇಂದು ಅವರು ತೋರಿಸಿದ ಮಾರ್ಗದಲ್ಲಿ ಅಷ್ಟಲ್ಲದಿದ್ದರೂ ಒಂದಿಷ್ಟಾದರೂ ಕನ್ನಡ ಚಿತ್ರರಂಗ ನಡೆದು ಬೆಳೆದಿದೆ, ಬೆಳೆಯುತ್ತಿದೆ. ಪುಟ್ಟಣ್ಣ ಅಂಥ ಅದ್ಭುತ ನಿರ್ದೇಶಕ. ಅವರು ದಿಗ್ದರ್ಶಿಸಿದ ಚಿತ್ರಗಳೂ ಅಷ್ಟೇ ಒಂದೊಂದು ಚಿತ್ರಗಳೂ ಒಂದೊಂದು ಅತ್ಯದ್ಭುತ ಮಹಾಗ್ರಂಥಗಳಿದ್ದ ಹಾಗೆ.

"ಕನಸಿನಲ್ಲೂ ನನಗೆ ಕ್ಯಾಮರಾನೇ ಕಾಣುತ್ತದೆ" ಎನ್ನುತ್ತಿದ್ದ ಪುಟ್ಟಣ್ಣ ಸಿನಿಮಾ ಬದುಕಿನಲ್ಲಿ ಅಷ್ಟೊಂದು ಮಗ್ನರಾಗಿದ್ದವರು. ಒಂದು ರೀತಿ ಸಿನಿಮಾದಲ್ಲಿ ಅವರದ್ದು ಧ್ಯಾನಸ್ಥ ಮನಸ್ಸು ಅದೇ ಅವರ ತಪಸ್ಸು. ಇಂಥ ಚಿತ್ರತಪಸ್ವಿಯಿಂದ ಬೆಳ್ಳಿತೆರೆಯಲ್ಲಿ ಮೂಡಿಬಂದ ಪ್ರತಿಯೊಂದು ಚಿತ್ರಗಳೂ ಕನ್ನಡ ಚಿತ್ರ ಚರಿತ್ರೆಯಲ್ಲಿ ಸುವರ್ಣ ಪುಟಗಳಲ್ಲಿ ದಾಖಲಾಗುವಂಥ ಅಮೂಲ್ಯ ರತ್ನಗಳು.

"ಬೆಳ್ಳಿ ಮೋಡದ ಅಂಚಿನಿಂದ ಮೂಡಿಬಂದ ಮಿನುಗು ತಾರೆ..." ಎನ್ನುತ್ತಲೇ 1967ರಲ್ಲಿ ಪುಟ್ಟಣ್ಣನ ಮೂಸೆಯಲ್ಲಿ ಮೊಟ್ಟಮೊದಲಿಗೆ ಬೆಳ್ಳಿತೆರೆಗೆ ಬಂದು ಇಡೀ ಕನ್ನಡ ನಾಡಿನ ಜನರ ಮನಗೆದ್ದ 'ಮಿನುಗುತಾರೆ'ಯನ್ನು ಬಳುವಳಿಯಾಗಿ ನೀಡಿದ 'ಬೆಳ್ಳಿ ಮೋಡ' ಚಿತ್ರ "ಕನ್ನಡ ನಾಡಿನ ವೀರರಮಣಿಯ ಗಂಡು ಭೂಮಿಯ ವೀರನಾರಿಯ ಚರಿತೆಯ ನಾನು ಹಾಡುವೆ..." ಹೀಗೆ ನಾಡಾಭಿಮಾನದ ದ್ಯೋತಕದ ಕಹಳೆಯನ್ನು ಮೊಳಗಿಸುತ್ತಾ "ಹಾವಿನ ದ್ವೇಷ ಹನ್ನೆರಡು ವರುಷ, ನನ್ನ ರೋಷ ನೂರು ವರುಷ..." ಎಂದು ಕೆಚ್ಚನ್ನು ಪ್ರದರ್ಶಿಸುತ್ತಾ ಎಂಟೆದೆಯ ಯುವಕನ ಸಾರ್ಥಕ ಪ್ರೇಮ ಕಥಾನಕವನ್ನು ನಿರೂಪಿಸುತ್ತಾ ಸಾಹಸಸಿಂಹ ವಿಷ್ಣುವರ್ಧನ್, ರೆಬಲ್ ಸ್ಟಾರ್ ಅಂಬರೀಶ್‌ರಂಥ ಅಭಿಜಾತ ಕಲಾವಿದರನ್ನು ನಾಡಿಗೆ ನೀಡಿದ 'ನಾಗರಹಾವು' ಚಿತ್ರ.

ಅಬಲೆಯ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಂಡು ಅವಳನ್ನು ವೇಶ್ಯೆಯನ್ನಾಗಿ ಮಾಡಿದ್ದೂ ಅಲ್ಲದೆ ಆಕೆಯ ಕರುಳಕುಡಿಯನ್ನೂ ಉರಿದು ಮುಕ್ಕುವ ಕರುಣಾಜನಕ ಕಥೆ ಹೇಳುತ್ತಾ ಹೆಣ್ಣಿನ ಅಂತರಂಗದ ಭಾವೋತ್ಕರ್ಷ, ಸಂಕಟ, ಒಡಲುರಿಯನ್ನು ಅಭಿವ್ಯಕ್ತಿಸುವ 'ಗೆಜ್ಜೆ ಪೂಜೆ' ಚಿತ್ರ, ಸಂಗೀತವನ್ನು ದ್ವೇಷಿಸುವ ಗಂಡ, ಸಂಗೀತವನ್ನು ಉಸಿರಾಗಿಸಿಕೊಂಡ ಹೆಂಡತಿ, ಸಂಗೀತ ಅಥವಾ ಗಂಡನನ್ನು ಆಯ್ಕೆ ಮಾಡಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಗಂಡನಿಗೆ ತನ್ನ ತಂಗಿಯನ್ನೇ ಕೊಟ್ಟು ಮದುವೆಮಾಡಿ, ತಾನು ಸಂಗೀತಕ್ಕೇ ಮುಡಿಪಾಗುವ ಸಂಗೀತ ಸಾಧಕಿಯೊಬ್ಬಳ ಒಳ–ಹೊರಗಿನ ಬದುಕಿನ ಅನಾವರಣದ 'ಉಪಾಸನೆ' ಚಿತ್ರ. ಕರುಳಿನ ಸಂಬಂಧವನ್ನು ಹೃದಯಂಗಮವಾಗಿ ಚಿತ್ರಿಸಿರುವ 'ಕರುಳಿನ ಕರೆ' ಚಿತ್ರ.

ಯುದ್ಧದಲ್ಲಿ ತನ್ನ ಪುರುಷತ್ವ ಕಳೆದುಕೊಂಡು ಮರಳಿ ಮನೆಗೆ ಬಂದ ಸೈನಿಕನ ದುರ್ಗತಿ ಒಂದೆಡೆ, ಅವನ ತುಂಬು ಹರೆಯದ ಮಡದಿ ಮತ್ತೋರ್ವ ಯುವಕನಲ್ಲಿ ತನ್ನ ಬಿಸಿಕಾಮವನ್ನು ತಣಿಸಿಕೊಳ್ಳುವ ಪರಿ ಮತ್ತೊಂದೆಡೆ, ಇಂಥ ಪಾತ್ರಗಳನ್ನು ಕೇಂದ್ರೀಕೃತಗೊಂಡ ವಿಭಿನ್ನ ನಿರೂಪಣೆಯ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರ. "ಈ ಶತಮಾನದ ಮಾದರಿ ಹೆಣ್ಣು, ಸ್ವಾಭಿಮಾನದ ಸಾಹಸಿ ಹೆಣ್ಣು, ಗುಲಾಮಳಿವಳಲ್ಲ ಸಲಾಮು ಹೊಡೆಯಲ್ಲ..." ಎನ್ನುವ ಮಹಾಸ್ವಾಭಿಮಾನಿ ಹೆಣ್ಣೊಬ್ಬಳ ಮೇಲೆ ಪ್ರೇಮದ ಎರಕ ಹೊಯ್ದು ಪ್ರೀತಿಯ ಬೆಳೆ ತೆಗೆವ 'ಶುಭಮಂಗಳ' ಚಿತ್ರ.

ಗಿರಿಡ್ಡಿ ಗೋವಿಂದರಾಜು ಅವರ 'ಹಂಗು', ಈಶ್ವರ ಚಂದ್ರರ 'ಮುನಿತಾಯಿ', ವೀಣಾಯಲಬುರ್ಗಿಯವರ 'ಅತಿಥಿ', ಹೀಗೆ ಮೂವರು ಕಥೆಗಾರರ ಮೂರೂ ಕಥೆಗಳನ್ನು ಆಧರಿಸಿ ಒಂದು ವಿಭಿನ್ನ ಚಿತ್ರವಾಗಿಸಿರುವ 'ಕಥಾಸಂಗಮ' ಚಿತ್ರ. ಸಾಹುಕಾರನ ದಬ್ಬಾಳಿಕೆ ಮತ್ತು ಅತ್ಯಾಚಾರದ ವಿರುದ್ಧ ಐವರು ಯುವಕರು ಸಿಡಿದೇಳುವ ಕಥಾಹಂದರದ 'ಪಡುವಾರಹಳ್ಳಿ ಪಾಂಡವರು' ಚಿತ್ರ. ಮೌಢ್ಯಕ್ಕೆ ಬಲಿಯಾಗುವ ಮೂಗಿಯೊಬ್ಬಳ ಮೂಕವೇದನೆಯನ್ನು ಕರುಳು ಕತ್ತರಿಸುವಂತೆ ಸಾರುವ 'ಧರ್ಮಸೆರೆ' ಚಿತ್ರ. ಪವಿತ್ರ ಸ್ನೇಹ ಮತ್ತು ಪವಿತ್ರ ಪ್ರೇಮಕ್ಕೊಂದು ಹೊಸಭಾಷ್ಯ ಬರೆವ ಪ್ರೀತಿ, ಪ್ರೇಮ, ತ್ಯಾಗಗಳ ಎತ್ತರವನ್ನು ಅಳೆದು ಹೇಳುವ 'ಅಮೃತಘಳಿಗೆ' ಚಿತ್ರ.

ಒಲವಿನ ನಿರೀಕ್ಷೆಯಲ್ಲೇ ಪ್ರೀತಿಸಿದವನ ಪಾದದಲ್ಲಿ ಪ್ರಾಣಬಿಡುವ ನಾಯಕಿಯ ಸಮಾಧಿಯಲ್ಲೇ ನಾಯಕ ಧ್ಯಾನಸ್ಥನಾಗಿ ಒಲವನ್ನು ಸಾಕ್ಷಾತ್ಕರಿಸಿಕೊಳ್ಳುವ ಕಥಾನಕದ, ಕನ್ನಡದ ಮೇರುಗಿರಿ ಡಾ.ರಾಜ್‌ಕುಮಾರ್, ಹಿಂದಿಯ ಮೇರು ಪರ್ವ ಪೃಥ್ವಿರಾಜ್‌ಕಪೂರ್, ಅಭಿಜಾತ ಅಭಿನೇತ್ರಿ ಜಮುನ, ಇಂಥ ಮಹಾ ಪ್ರತಿಭೆಗಳ ಜುಗಲ್ ಬಂಧಿಯ 'ಸಾಕ್ಷಾತ್ಕಾರ' ಚಿತ್ರ. ತ್ಯಾಗಮಯಿ ಹೆಣ್ಣೊಬ್ಬಳ ಸುಸಂಸ್ಕೃತ ಬದುಕಿನ ಮೇಲೆ ಬೆಳಕು ಬೀರುವ ತಾರೆ ಭಾರತಿ ಪ್ರಧಾನ ಭೂಮಿಕೆಯ 'ಋಣಮುಕ್ತಳು' ಚಿತ್ರ. ನಾಟಕ ಕಂಪನಿಯಲ್ಲಿ ಬೆಳೆದು ರಂಗನಟಿಯಾಗಿ ಖ್ಯಾತಿ ಗಳಿಸಿ ನಂತರ ಸಿನಿಮಾ ತಾರೆಯಾಗುವ ಕಲಾವಿದೆಯೊಬ್ಬಳ ಪ್ರೇಮ, ವಿವಾಹ, ವಿಯೋಗ, ಸಾವು ನೋವುಗಳ ದುರಂತವನ್ನು ಸಾಂಕೇತಿಕವಾಗಿಟ್ಟುಕೊಂಡು ರಂಗಭೂಮಿ ಕಲಾವಿದರ ನೋವು–ನಲಿವು, ಬದುಕು–ಬವಣೆಗಳನ್ನು ತೆರೆದಿಡುವ 'ರಂಗನಾಯಕಿ' ಚಿತ್ರ.

ಮಾನಸಿಕವಾಗಿ ಅಸ್ವಸ್ಥಳಾಗಿದ್ದ ಯುವತಿಯೊಬ್ಬಳನ್ನು ಗುಣಪಡಿಸಿದ ಮಾನಸಿಕ ತಜ್ಞ ವೈದ್ಯನೊಬ್ಬ ಅವಳಲ್ಲೇ ಅನುರಕ್ತನಾಗುತ್ತಾನೆ. ಆದರೆ ಅವಳು ಬೇರೊಬ್ಬ ಯುವಕನನ್ನು ಪ್ರೀತಿಸತೊಡಗಿದಾಗ ತಾನೇ ಬುದ್ಧಿ ಸ್ಥಿಮಿತ ಕಳೆದುಕೊಂಡು ಹುಚ್ಚನಾಗುವ ಸೂಕ್ಷ್ಮ ಮನಸ್ಸಿನ ಸಂವೇದನೆಯ 'ಮಾನಸ ಸರೋವರ' ಚಿತ್ರ. ಸಮಾಜದ ನಾನಾ ಬಗೆಯ ವಿಷಬಾಣಗಳ ಬಂಧನಕ್ಕೊಳಗಾಗಿ ಮತಿಭ್ರಮಣೆಗೊಳಗಾಗುವ ಹೆಣ್ಣೊಬ್ಬಳ ಬದುಕಿನ ತಾಕಲಾಟ, ತೊಳಲಾಟವನ್ನು ಅಣು ಅಣುವಾಗಿ ತೆರೆದಿಡುವ 'ಶರಪಂಜರ' ಚಿತ್ರ.

ಕೆಂಪುದೀಪದ ಬೆಳಕಿನೊಳಗೆ ಧಗಧಗನೆ ಹೊತ್ತಿ ಉರಿಯುವ ಬೆಂಕಿಯಲ್ಲಿ ಸುಟ್ಟು ಕರಕಲಾಗುವವರ ದುರಂತವನ್ನು ಕಡೆದಿಡುವ ವೇಶ್ಯಾ ಸಮಸ್ಯೆ ಮೇಲೆ ಕ್ಷ–ಕಿರಣ ಬೀರುವ 'ಮಸಣದ ಹೂವು' ಚಿತ್ರ......

ಕನ್ನಡದ ಕೀರ್ತಿಯನ್ನು ಬೆಳ್ಳಿ ತೆರೆಯ ಮೂಲಕ ಹಿಮಾಲಯದೆತ್ತರ ಎತ್ತಿ ಹಿಡಿದ ಇಂಥ ನಿರ್ದೇಶಕ ಸಾರ್ವಭೌಮ ಪುಟ್ಟಣ್ಣ ಕಣಗಾಲರು ಜನಿಸಿದ್ದು 1933 ಡಿಸೆಂಬರ್ 1ರಂದು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಮದಲ್ಲಿ. ತಂದೆ ಎಸ್.ಡಿ.ರಾಮಸ್ವಾಮಯ್ಯ, ತಾಯಿ ಸುಬ್ಬಮ್ಮ. ಸಾಮಾನ್ಯವಾಗಿ ಬಹುಪಾಲು ಮಹಾನ್ ವ್ಯಕ್ತಿಗಳಂತೆಯೇ ಇವರೂ ಸಹ ಬಡತನದ ಬೆಂಕಿಯಲ್ಲಿ ಉರಿದವರು. ಆದರೆ ಬೂದಿಯಾಗದೆ ಆ ಬೆಂಕಿಯನ್ನೇ ಬೆಳಕು ಮಾಡಿಕೊಂಡು ಅರಳಿದವರು. 'ಬೆಂಕಿಯಲ್ಲಿ ಅರಳಿದ ಹೂವು' ಎಂಬ ಮಾತಿಗೆ ಅನ್ವರ್ಥವಾದವರು ಪುಟ್ಟಣ್ಣ.

ಬಾಲ್ಯದಲ್ಲೇ ನಾಟಕ–ಸಿನಿಮಾಗಳಲ್ಲಿ ತೀವ್ರ ಆಸಕ್ತಿ ಹೊಂದಿದ್ದ ಇವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಣಗಾಲಿನಲ್ಲೇ ಕಲಿತು ಮುಂದಿನ ಕಲಿಕೆಗೆ ಮೈಸೂರಿಗೆ ಬಂದಾಗ ಸಿನಿಮಾ ಗೀಳಿಗೆ ಬಿದ್ದರು. ಓದುವ ಹುಡುಗನೆಂಬ ಕಾರಣಕ್ಕೆ ವರದಾಚಾರ್ ಎಂಬ ಫೋಟೋಗ್ರಾಫರ್ ಮನೆಯಲ್ಲಿ ಉಳಿದುಕೊಳ್ಳುವ ಅವಕಾಶ. ಹಾಗಾಗಿ ಬಿಡುವಿನಲ್ಲಿ ಫೋಟೋಗ್ರಫಿ ಕಲೆಯ ಬಗ್ಗೆ ತಿಳಿದುಕೊಳ್ಳುತ್ತಿದ್ದರು.

ಆದ್ದರಿಂದಲೇ ದೃಶ್ಯಕಲೆ ಪುಟ್ಟಣ್ಣನವರಿಗೆ ಎಳವೆಯಿಂದಲೇ ಕರತಲಾಮಲಕ. ಓದಿಗೆ ವಿದಾಯ ಹೇಳಿ ನಟ ಭಯಂಕರ ಗಂಗಾಧರರಾಯರ ಕಂಪನಿಯಲ್ಲಿ ಕೆಲಸಕ್ಕೆ ಸೇರ್ಪಡೆ. ಆಗ ಇವರ ಮೈಮೇಲೆ ಹರಕಲು ಬಟ್ಟೆ ಬಿಟ್ಟರೆ ಬೇರೇನೂ ಇರಲಿಲ್ಲ. ಹೊಟ್ಟೆ–ಬಟ್ಟೆಗಾಗಿ ಒಂದು ರೀತಿ ಭಿಕ್ಷಾಟನೆಯ ಜೀವನ. ಆದರೆ ಎದೆಯಲ್ಲಿ ಏನನ್ನೋ ಸಾಧಿಸುವ ಅದಮ್ಯ ಚೇತನ. ಕಾರ್ ಗ್ಯಾರೇಜಿನಲ್ಲಿ ಕ್ಲೀನರ್, ಲಾರಿಡ್ರೈವರ್, ಪೆಟ್ರೋಲ್ ಬಂಕ್‌ನಲ್ಲಿ ವಾಚ್ ಮ್ಯಾನ್, ನಾಟಕ ಕಂಪನಿಯ ಪ್ರಚಾರಕ್ಕಾಗಿ ಡಂಗೂರ ಬಾರಿಸುವವ, ಅವಕಾಶ ಸಿಕ್ಕಾಗ ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರ ನಿರ್ವಹಣೆ, ಹೀಗೆ ಹೊಟ್ಟೆಪಾಡಿಗಾಗಿ ಸಿಕ್ಕ ಸಿಕ್ಕ ಕೆಲಸಗಳನ್ನು ಮಾಡುತ್ತಾ ಮೈಸೂರು–ಬೆಂಗಳೂರೆನ್ನದೆ ಅಲೆದಾಟ.

ಕೊನೆಗೆ ಅಣ್ಣ ಕಣಗಾಲ್ ಪ್ರಭಾಕರ ಶಾಸ್ತ್ರಿ ಅವರ ಮಾರ್ಗದರ್ಶನದಲ್ಲಿ 1954ರಲ್ಲಿ ಅಂದಿನ ಖ್ಯಾತ ಚಲನಚಿತ್ರ ನಿರ್ಮಾಣ ಸಂಸ್ಥೆಯಾದ 'ಪದ್ಮಿನಿ ಪಿಕ್ಚರ್ಸ್'ನಲ್ಲಿ ಎಂತದೋ ಒಂದು ಕೆಲಸ. ಪುಟ್ಟಣ್ಣನವರಿಗೂ ಅದೇ ಬೇಕಾಗಿದ್ದದ್ದು, ಆಗ ಅವರಿಗೆ 21ವರ್ಷ. ಇವರ ಚುರುಕುತನ ಮತ್ತು ಕ್ರಿಯಾಶೀಲತೆಯನ್ನು ಕಂಡ ಪದ್ಮಿನಿ ಪಿಕ್ಚರ್ಸ್ ಮಾಲೀಕರೂ ಆದ ಅಂದಿನ ಖ್ಯಾತ ಚಿತ್ರ ನಿರ್ದೇಶಕ ಬಿ.ಆರ್.ಪಂತುಲು ಇವರನ್ನು ತಮ್ಮ ಸಹಾಯಕ ನಿರ್ದೇಶಕರನ್ನಾಗಿ ಮಾಡಿಕೊಂಡರು. 1957ರಲ್ಲಿ 'ರತ್ನಗಿರಿ ರಹಸ್ಯ' ಚಿತ್ರದ ಮೂಲಕ ಸಹಾಯಕ ನಿರ್ದೇಶಕರಾಗಿ ಸಿನಿಮಾ ವೃತ್ತಿಯನ್ನು ಆರಂಭಿಸಿದ ಪುಟ್ಟಣ್ಣ 9ವರ್ಷಗಳ ಕಾಲ ಪಂತುಲು ಅವರಲ್ಲಿ ಸಹಾಯಕ ನಿರ್ದೇಶಕರಾಗಿ ಹಲವಾರು ಚಿತ್ರಗಳ ಮೂಲಕ ಅನುಭವದ ಕುಲುಮೆಯಲ್ಲಿ ಅಪರಂಜಿಯಾದರು. ಪಂತುಲು ಅವರ ಗರಡಿಯಲ್ಲಿ ತಯಾರಾದವರೆಂದರೆ ಕೇಳಬೇಕೆ? ಸಿನಿಮಾ ನಿರ್ದೇಶನವೆಂಬುದು ಉಸಿರಿನಷ್ಟೆ ಅವರಿಗೆ ಸರಾಗವಾಗಿತ್ತು. 1960ರಲ್ಲಿ ನಾಗಲಕ್ಷ್ಮಿ ಅವರನ್ನು ನಂಜನಗೂಡಿನಲ್ಲಿ ವಿವಾಹವಾಗಿ ದಾಂಪತ್ಯ ಜೀವನಕ್ಕೂ ಪುಟ್ಟಣ್ಣ ಕಾಲಿರಿಸಿದ್ದರು.



> "ಕನ್ನಡಕ್ಕಾಗಿ ಕೆಲಸ ಮಾಡಿದ್ದು ಸಾರ್ಥಕವೆನಿಸಿದೆ. ನನ್ನ ಲೈಫ್ ಒಂದು ಸ್ಕ್ರೀನ್ ಪ್ಲೇ ಇದ್ದಂತೆ. ಅದರ ಹೀರೋ ಎಂದಿಗೂ ಹೀರೋ. ಹೀರೋ ಎನ್ನುವುದನ್ನು ಆತ ರೂಪಿಸಿ ತೋರಿಸುತ್ತಾನೆ. ತೆರೆಯ ಮೇಲೆ ಯುದ್ಧದ ದೃಶ್ಯ ತೋರಿಸುತ್ತಾರೆ. ಪ್ರವಾಹ ತೋರಿಸುತ್ತಾರೆ. ಕಷ್ಟ, ಸುಖ, ಸಾವು, ನೋವು..... ಹೀಗೆ ನೂರಾರು ಚಿತ್ರ ತೋರಿಸುತ್ತಾರೆ. ಇಷ್ಟೆಲ್ಲ ಮುಗಿದ ಮೇಲೆ ಆ ಬೆಳ್ಳಿತೆರೆ ತೆರೆಯಾಗಿಯೇ ಉಳಿಯುತ್ತದೆ. ಪ್ರವಾಹ ಬಂದಾಗ ಒದ್ದೆಯಾಗುವುದಿಲ್ಲ. ಬೆಂಕಿ ಬಂದಾಗ ಉರಿದು ಹೋಗುವುದಿಲ್ಲ. ಏನೇ ಮಾಡಿದರೂ ಕೊನೆಗೆ ಅದು ಯಾವ ಸೋಂಕೂ ಇಲ್ಲದೆ ಬೆಳ್ಳನೆಯ ತೆರೆಯಾಗಿಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ. ನಾನೂ ಆ ನಿರ್ಧಾರಕ್ಕೆ ಬಂದಿದ್ದೇನೆ. ನಾನು ತೆರೆಯಾಗಿಯೇ ಉಳಿಯುತ್ತೇನೆ."
>
> – ಇದು ಬೆಳ್ಳಿತೆರೆಯ ಭಾವಜೀವಿ ಪುಟ್ಟಣ್ಣ ಕಣಗಾಲರು 1982ರಲ್ಲಿ ಕರ್ನಾಟಕ ಸರ್ಕಾರದಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಿ ಆಡಿದ ಮಾತುಗಳು.

ಸಹ ನಿರ್ದೇಶಕರಾಗಿ ಮಾಗಿದ್ದ ಪುಟ್ಟಣ್ಣ 1967ರಲ್ಲಿ 'ಬೆಳ್ಳಿಮೋಡ' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾದಾಗ ಅವರ ಪ್ರಚಂಡ ಪ್ರತಿಭೆಗೆ ತಲೆದೂಗಿದ ಇಡೀ ಕನ್ನಡ ಚಿತ್ರರಂಗ ರತ್ನಗಂಬಳಿ ಹಾಸಿ ಪುಟ್ಟಣ್ಣನವರನ್ನು ಬರಮಾಡಿಕೊಂಡಿತ್ತು. ಅದುವರೆಗೆ ಚಿತ್ರ ನಿರ್ದೇಶಕರಿಗೆ ಇರದಿದ್ದ ಸ್ಟಾರ್‌ಗಿರಿ ಪುಟ್ಟಣ್ಣನವರಿಗೆ ಲಭ್ಯವಾಗಿತ್ತು. ಚಿತ್ರದಿಂದ ಚಿತ್ರಕ್ಕೆ ತಮ್ಮ ಸಶಕ್ತ ಪ್ರತಿಭೆಯಿಂದ ಬೆಳೆಯುತ್ತಾ ಹೋದ ಅವರು ನಿರ್ದೇಶಕರ ಹೆಸರಿನಲ್ಲೇ ಚಿತ್ರ ಓಡುವಂತೆ ಮಾಡಿದ ಮೊದಲ ನಿರ್ದೇಶಕರೆಂಬ ಹೆಗ್ಗಳಿಕೆಗೆ ಪಾತ್ರರಾದರು. ಸಿನಿಮಾ ನಿರ್ದೇಶಕನ ಮಾಧ್ಯಮವೆಂಬುದನ್ನು ರುಜುಗೊಳಿಸಿದರು.

ಚಿತ್ರರಂಗವಿರುವ ತನಕವೂ ಚಿರಕಾಲ ಉಳಿಯುವಂತಹ 24ಅಮೂಲ್ಯ ಚಿತ್ರಗಳನ್ನು ನೀಡಿರುವ ಪುಟ್ಟಣ್ಣನವರು ಕನ್ನಡ ಮಾತ್ರವಷ್ಟೇ ಅಲ್ಲದೆ ತಮಿಳಿನಲ್ಲಿ ಮೂರು, ತೆಲುಗಿನಲ್ಲಿ ಮೂರು, ಮಲೆಯಾಳಂನಲ್ಲಿ ಆರು, ಹಿಂದಿಯಲ್ಲಿ ಒಂದು ಒಟ್ಟು ಇತರೇ ಭಾಷೆಗಳಲ್ಲಿ ಹದಿಮೂರು ಚಿತ್ರಗಳನ್ನು ನಿರ್ದೇಶಿಸಿ ಪಂಚಭಾಷೆ ನಿರ್ದೇಶಕರೆಂಬ ಕೀರ್ತಿಗೂ ಭಾಜನರಾಗಿದ್ದಾರೆ.

ಗೆಜ್ಜೆಪೂಜೆ (1969–70) ಮತ್ತು ಶರಪಂಜರ (1971–72), ಚಿತ್ರಗಳು ಭಾರತಸರ್ಕಾರದಿಂದ ರಾಷ್ಟ್ರ ಪ್ರಶಸ್ತಿ ಪಡೆದರೆ, ಬೆಳ್ಳಿಮೋಡ (1967–68), ಗೆಜ್ಜೆ ಪೂಜೆ(1969–70), ಶರಪಂಜರ (1970–71), ನಾಗರಹಾವು (1972–73), ಉಪಾಸನೆ (1974–75), ಕಥಾಸಂಗಮ (1975–76), ರಂಗನಾಯಕಿ (1980–81) ಚಿತ್ರಗಳು ಕರ್ನಾಟಕ ಸರ್ಕಾರದಿಂದ ರಾಜ್ಯ ಪ್ರಶಸ್ತಿಗಳಿಸಿದ್ದವು. ಹಾಗೆಯೇ ಬೆಳ್ಳಿಮೋಡ, ಗೆಜ್ಜೆಪೂಜೆ, ಶರಪಂಜರ, ನಾಗರಹಾವು, ಉಪಾಸನೆ ಚಿತ್ರಗಳಿಗೆ ನಿರ್ದೇಶನದ ಜೊತೆ ಚಿತ್ರಕಥೆ ಬರೆದಿದ್ದ ಪುಟ್ಟಣ್ಣ ಅವರು ವೈಯಕ್ತಿಕವಾಗಿ ಅತ್ಯುತ್ತಮ ಚಿತ್ರಕಥಾ ಕರ್ತೃ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದರು. 80ರ ದಶಕದಲ್ಲೇ ಇವರ ಸಾಧನೆಯ ಗೌರವಾರ್ಥ ದೆಹಲಿಯಲ್ಲಿ ಪುಟ್ಟಣ್ಣ ಚಿತ್ರಗಳ ಚಿತ್ರೋತ್ಸವ ನಡೆದು ದೇಶದ ಗಮನ ಸೆಳೆದಿತ್ತು. ಇದೊಂದು ದಾಖಲೆ ಕೂಡ. 1982ರಲ್ಲಿ ಕರ್ನಾಟಕ ಸರ್ಕಾರದಿಂದ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಸ್ಥಾಪಕ ಅಧ್ಯಕ್ಷರೆಂಬ ಗೌರವ ಸಹ ಇವರದ್ದೇ ಆಗಿದೆ. 1979ರಲ್ಲಿ ರಷ್ಯಾದಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪುಟ್ಟಣ್ಣನವರು ಭಾರತವನ್ನು ಪ್ರತಿನಿಧಿಸಿದ್ದರು. ಕರ್ನಾಟಕ ರಾಜ್ಯ ಸರ್ಕಾರ ಇವರ ಹೆಸರಿನಲ್ಲಿ ಒಂದು ಲಕ್ಷ ರೂ. ಮೌಲ್ಯದ ಪ್ರಶಸ್ತಿಯನ್ನು ಸ್ಥಾಪಿಸಿದೆ. ಹಾಗೆಯೇ ಕರ್ನಾಟಕ ರಾಜ್ಯ ಚಲನಚಿತ್ರ ಅಭಿವೃದ್ಧಿ ನಿಗಮವು ಬೆಂಗಳೂರಿನ ಚಿತ್ರಮಂದಿರವೊಂದಕ್ಕೆ 'ಪುಟ್ಟಣ್ಣ ಕಣಗಾಲ್ ಚಿತ್ರಮಂದಿರ' ಎಂದೇ ಹೆಸರಿಟ್ಟು ಗೌರವಿಸಿದೆ.

ಕನ್ನಡ ಚಿತ್ರರಂಗಕ್ಕಷ್ಟೇ ಅಲ್ಲದೆ ಭಾರತೀಯ ಚಿತ್ರರಂಗಕ್ಕೂ ಮಹತ್ತರ ಕೊಡುಗೆ ನೀಡಿದ ಇಂಥ ಮಹಾನ್ ಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲರು 1985 ಜೂನ್ 5ರಂದು ಹೃದಯಾಘಾತದಿಂದ ತಮ್ಮ ಇಹಲೋಕಯಾತ್ರೆ ಮುಗಿಸಿದರು.

ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಭಾರತ ತಂಡ ಪ್ರಕಟ

ಹೈದರಾಬಾದ್: ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಲಿರುವ ಮೂರು ಮಾದರಿಯ ಸರಣಿಗಾಗಿ ಭಾರತ ತಂಡ ಪ್ರಕಟವಾಗಿದೆ. ಬಿಸಿಸಿಐ ಮುಖ್ಯ ಆಯ್ಕೆಗಾರ ಅಜಿತ್ ಅಗರ್ಕರ್ ಇಂದು ಎಲ್ಲ ಮೂರು ಮಾದರಿಗಳ ಸರಣಿಗಾಗಿ ಟೀಂ ಇಂಡಿಯಾವನ್ನು ಘೋಷಿಸಿದರು. ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಭಾರತ ಮೂರು ಟಿ20, ಮೂರು ಏಕದಿನ ಹಾಗೂ ಎರಡು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಟಿ20 ನಾಯಕತ್ವವನ್ನು ಸೂರ್ಯಕುಮಾರ್ ಯಾದವ್‌ಗೆ ಹಸ್ತಾಂತರಿಸಲಾಗಿದ್ದು, ಏಕದಿನ ಸರಣಿಗೆ ಕೆಎಲ್ ರಾಹುಲ್ ನಾಯಕತ್ವ ವಹಿಸಲಿದ್ದಾರೆ. ಟೆಸ್ಟ್ ತಂಡದ ನಾಯಕತ್ವವನ್ನು ರೋಹಿತ್ ಶರ್ಮಾಗೆ ಹಸ್ತಾಂತರಿಸಲಾಗಿದೆ.

ಟಿ20 ತಂಡ: ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ರುತುರಾಜ್ ಗಾಯಕ್ವಾಡ್, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ರಿಂಕು ಸಿಂಗ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್ (ವಿ.ಕೀ), ಜಿತೇಶ್ ಶರ್ಮಾ (ವಿ.ಕೀ), ರವೀಂದ್ರ ಜಡೇಜಾ (ಉ.ನಾ), ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯ್, ಕುಲ್ದೀಪ್ ಯಾದವ್, ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್, ಮುಖೇಶ್ ಕುಮಾರ್, ದೀಪಕ್ ಚಹಾರ್.

ಏಕದಿನ ತಂಡ: ರುತುರಾಜ್ ಗಾಯಕ್ವಾಡ್, ಸಾಯಿ ಸುದರ್ಶನ್, ತಿಲಕ್ ವರ್ಮಾ, ರಜತ್ ಪಾಟಿದಾರ್, ರಿಂಕು ಸಿಂಗ್, ಶ್ರೇಯಸ್ ಅಯ್ಯರ್, ಕೆಎಲ್ ರಾಹುಲ್ (ನಾ.ವಿ), ಸಂಜು ಸ್ಯಾಮ್ಸನ್ (ವಿ.ಕೀ), ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಯುಜ್ವೇಂದ್ರ ಚಾಹಲ್, ಮುಖೇಶ್ ಕುಮಾರ್, ಅವೇಶ್ ಖಾನ್, ಅರ್ಷದೀಪ್ ಸಿಂಗ್, ದೀಪಕ್ ಚಾಹರ್.

ಟೆಸ್ಟ್ ತಂಡ ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ರುತುರಾಜ್ ಗಾಯಕ್ವಾಡ್, ಇಶಾನ್ ಕಿಶನ್ (ವಿ.ಕೀ), ಕೆಎಲ್ ರಾಹುಲ್ (ವಿ.ಕೀ), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜಾ, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಮುಖೇಶ್ ಕುಮಾರ್, ಜಸ್ಪ್ರೀತ್ ಬುಮ್ರಾ (ಉ.ನಾ), ಪ್ರಸಿದ್ಧ್ ಕೃಷ್ಣ, ಶಮಿ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶುಕ್ರವಾರ 1 ಡಿಸೆಂಬರ್ 2023

ರಾಜ್ಯದಲ್ಲಿ ಈ ವರ್ಷ ಇನ್ನೂ 188 ಇಂದಿರಾ ಕ್ಯಾಂಟೀನ್ ಸ್ಥಾಪನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ



ಬೆಂಗಳೂರು, ನ.30(ಕೆಎಂಶಿ)-ಜನರ ಅನುಕೂಲಕ್ಕಾಗಿ ಈ ವರ್ಷ ಹೆಚ್ಚುವರಿಯಾಗಿ 188 ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಶಾಸಕರ ಭವನದ ಆವರಣದಲ್ಲಿ ಸಂತ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ರಾಜಧಾನಿಯ 225 ವಾರ್ಡ್‌ಗಳಲ್ಲಿಯೂ ಇಂದಿರಾ ಕ್ಯಾಂಟೀನ್ ಪ್ರಾರಂಭಿಸಲಾಗುವುದು. ಇದಲ್ಲದೇ ಅಗತ್ಯವಿರುವೆಡೆ ಕ್ಯಾಂಟೀನ್ ಪ್ರಾರಂಭಿಸಲಾಗುವುದು. ಇಂದಿರಾ ಕ್ಯಾಂಟೀನ್‌ಗೆ ಸ್ಥಳದ ಅಭಾವವಿರುವ ಕಡೆ ಮೊಬೈಲ್ ಕ್ಯಾಂಟೀನ್‌ಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಿದರು.

ಕನಕದಾಸರು ಸಮಾಜ ಸುಧಾರಕರಾಗಿದ್ದರು. ಅವರ ಸಾಹಿತ್ಯದ ಮೂಲಕ ಮನುಷ್ಯತ್ವವನ್ನು ಸಾರಿದರು. ಇಡೀ ಜಾತ್ಯತೀತವಾದ, ಮೇಲು-ಕೀಳು, ಭೇದ-ಭಾವವಿಲ್ಲದ ಸಮಸಮಾಜ ನಿರ್ಮಿಸಲು ಶ್ರಮಿಸಿದ ವಿಶ್ವಮಾನವ. ರಾಮಧಾನ್ಯ ಚರಿತೆ, ಮೋಹನತರಂಗಿಣಿ ಸೇರಿದಂತೆ ಹಲವು ಕೃತಿಗಳನ್ನು ರಚಿಸಿದವರು, ಸಮಾಜದ ತಾರತಮ್ಯ ಹೋಗಲಾಡಿಸಲು ಹೋರಾಡಿದ ದಾಸ ಶ್ರೇಷ್ಠರ ದಿನವನ್ನು ಸರ್ಕಾರ ಇಂದು ಆಚರಿಸುತ್ತಿದೆ. ಸಾಹಿತ್ಯದ ಮೂಲಕ ತಮ್ಮ ಆದರ್ಶಗಳನ್ನು ಜನರಿಗೆ ತಿಳಿಹೇಳಿ ಜಾಗೃತಿ ಮೂಡಿಸಿದ್ದರು, ಜನರಿಗೆ ಅರ್ಥವಾಗುವ ಸರಳ ಭಾಷೆಯಲ್ಲಿ ತಮ್ಮ ದಾಸ ಸಾಹಿತ್ಯವನ್ನು ರಚಿಸಿದರು ಎಂದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ನಾಡಿನ ಎಲ್ಲ ಜನತೆಗೆ ಕನಕದಾಸ ಜಯಂತಿಯ ಶುಭಾಶಯಗಳನ್ನು ಕೋರಿದರು.

ಹೆಡಿಯಾಲ ಬಳಿ ಸೆರೆ ಸಿಕ್ಕ ಹುಲಿಯ ಡಿಎನ್‌ಎ ಪರೀಕ್ಷೆಗೆ ನಿರ್ಧಾರ

- ಹುಲಿ ಸೆರೆ ಕಾರ್ಯಾಚರಣೆಗೆ ಪ್ರಶಂಸೆ ವ್ಯಕ್ತಪಡಿಸಿದ ಹಿರಿಯ ಅಧಿಕಾರಿಗಳು
- ರೈತ ಮಹಿಳೆ ಕೊಂದ ಸ್ಥಳದಲ್ಲಿ ಸಿಕ್ಕ ಹುಲಿ ಕೂದಲು ಸಂಗ್ರಹಿಸಿ ಪರೀಕ್ಷೆಗೆ ರವಾನೆ
- ಸ್ಥಳ ಪರಿಶೀಲಿಸಿದ ಹುಲಿ ಯೋಜನೆಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶಾಶ್ವತಿ ಮಿಶ್ರ



ಹುಲಿ ದಾಳಿ ಮಾಡಿದ ಹಾಗೂ ಸೆರೆ ಸಿಕ್ಕ ಸ್ಥಳಕ್ಕೆ ಹುಲಿ ಯೋಜನೆಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮಾನವ-ವನ್ಯಜೀವಿ ಸಂಘರ್ಷ ತಡೆಗೆ ಜಿಲ್ಲೆಯ ನೋಡಲ್ ಅಧಿಕಾರಿ ಶಾಶ್ವತಿ ಮಿಶ್ರ ಭೇಟಿ ನೀಡಿ, ಪರಿಶೀಲಿಸಿದರು. ಚಿತ್ರದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಎಸಿಎಫ್ ಪರಮೇಶ್ ಇನ್ನಿತರರಿದ್ದಾರೆ.

ಮೈಸೂರು,ನ.30(ಎಂಟಿವೈ)- ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಹೆಡಿಯಾಲ ವಲಯ ವ್ಯಾಪ್ತಿಯ ಬಳ್ಳೂರು ಹುಂಡಿ ಬಳಿ ಸೆರೆ ಸಿಕ್ಕ ರೈತ ಮಹಿಳೆ ಬಲಿ ಪಡೆದಿದ್ದ ಹುಲಿ ಸ್ಯಾಂಪಲ್ ಡಿಎನ್‌ಎ ಪರೀಕ್ಷೆಗೆ ಒಳಪಡಿಸಲು ನಿರ್ಧರಿಸಲಾಗಿದ್ದು, ಹುಲಿ ಸೆರೆ ಸ್ಥಳಕ್ಕೆ ಹುಲಿ ಯೋಜನೆಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮಾನವ-ವನ್ಯಜೀವಿ ಸಂಘರ್ಷ ತಡೆಗೆ ಮೈಸೂರು ಜಿಲ್ಲೆಯ ನೋಡಲ್ ಅಧಿಕಾರಿಯಾಗಿರುವ ಶಾಶ್ವತಿ ಮಿಶ್ರ ಭೇಟಿ ನೀಡಿ, ಪರಿಶೀಲಿಸಿದರಲ್ಲದೆ ಕಾರ್ಯಾಚರಣೆ ಕುರಿತು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಬಳ್ಳೂರುಹುಂಡಿ ಗ್ರಾಮ ಹೆಡಿಯಾಲ ವಲಯದ ಕಾಡಂಚಿನ ಗ್ರಾಮವಾಗಿದ್ದು, ನ.24ರಂದು ಹೊಲದಲ್ಲಿ ಜಾನುವಾರು ಮೇಯಿಸುತ್ತಿದ್ದ ರತ್ನಮ್ಮ(52) ಅವರ ಮೇಲೆ ದಾಳಿ ಮಾಡಿ ಹತ್ಯೆಗೈಯ್ದಿತ್ತು. ಮಾರನೇ ದಿನದಿಂದಲೇ 300ಕ್ಕೂ ಹೆಚ್ಚು ಸಿಬ್ಬಂದಿ, 3 ಸಾಕಾನೆಯೊಂದಿಗೆ ಹುಲಿ ಸೆರೆ ಕಾರ್ಯಾಚರಣೆ ಆರಂಭಿಸಿದ್ದರು. ನ.28ರಂದು ಮುಂಜಾನೆ ರೋಚಕ ಕಾರ್ಯಾಚರಣೆ ಮೂಲಕ ಹುಲಿ ಸೆರೆ ಹಿಡಿಯಲಾಗಿತ್ತು. ಮಹಿಳೆ ಮೇಲೆ ದಾಳಿ ನಡೆಸಿದ ಸ್ಥಳ ಹಾಗೂ ಮೃತದೇಹ ಪತ್ತೆಯಾದ ಸ್ಥಳದ ನಡುವೆ ಹುಲಿ ಕೂದಲು ಸಂಗ್ರಹಿಸಿದ್ದ ಅರಣ್ಯ ಸಿಬ್ಬಂದಿ, ಡಿಎನ್‌ಎ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಹುಲಿ ಸೆರೆ ಸಿಕ್ಕ ಬಳ್ಳೂರು ಹುಂಡಿ ಸಮೀಪ ಕಾಡಂಚಿನಲ್ಲಿ ಅಳವಡಿಸಿದ್ದ ಕ್ಯಾಮರಾ ಟ್ರಾಪ್‌ನಲ್ಲಿ ಯಾವುದೇ ಪ್ರಾಣಿಯ ಚಲನವಲನ ಸೆರೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಸೆರೆ ಹಿಡಿದ ಹುಲಿಯೇ ಮಹಿಳೆ ಹತ್ಯೆಗೈಯ್ದಿರುವುದು ದೃಢಪಟ್ಟಿದೆ.

ಸ್ಥಳ ಪರಿಶೀಲನೆ: ಹುಲಿ ದಾಳಿ ನಡೆಸಿದ, ಮಹಿಳೆ ಮೃತದೇಹ ಪತ್ತೆಯಾದ ಹಾಗೂ ಹುಲಿ ಸೆರೆ ಸಿಕ್ಕ ಸ್ಥಳಕ್ಕೆ ಹುಲಿ ಯೋಜನೆಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮಾನವ-ವನ್ಯಜೀವಿ ತಡೆಗೆ ಮೈಸೂರು ಜಿಲ್ಲೆಯ ನೋಡಲ್ ಅಧಿಕಾರಿಯಾಗಿರುವ ಶಾಶ್ವತಿ ಮಿಶ್ರ ಭೇಟಿ ನೀಡಿ, ಪರಿಶೀಲಿಸಿದರು. ಈ ವೇಳೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಎಸಿಎಫ್ ಪರಮೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದು ಮಾಹಿತಿ ನೀಡಿದರು.

ಪ್ರಶಂಸೆ: ಮಹಿಳೆ ಕೊಂದ ಹುಲಿ ಸೆರೆ ಕಾರ್ಯಾಚರಣೆ ಕ್ಲಿಷ್ಟಕರವಾಗಿದ್ದು, ಅರಣ್ಯ ಪ್ರದೇಶದೊಳಗೆ ಬೋನಿನಲ್ಲಿ ಕುಳಿತು ಅರವಳಿಕೆ ನೀಡುವ ಮೂಲಕ ಹುಲಿ ಸೆರೆ ಹಿಡಿದಿರುವುದಲ್ಲದೆ, ಮಾನವ ಪ್ರಾಣ ಹಾನಿ ಪುನರಾವರ್ತನೆಯಾಗದಂತೆ ಕಟ್ಟೆಚ್ಚರ ವಹಿಸಿದ್ದಕ್ಕೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಸಿಬ್ಬಂದಿ ಕಾರ್ಯವನ್ನು ಶಾಶ್ವತಿ ಮಿಶ್ರ ಶ್ಲಾಘಿಸಿದ್ದಾರೆ.

ಸೆರೆ ಸಿಕ್ಕಿದ್ದು ಹಿರಿಯ ಹುಲಿ

ಮಹಿಳೆ ಮೇಲೆ ದಾಳಿ ನಡೆಸಿ ಸೆರೆ ಸಿಕ್ಕಿರುವ ಹುಲಿ 13 ವರ್ಷದ ಗಂಡು ಹುಲಿ. 2012ರಲ್ಲಿ ಹೆಡಿಯಾಲ ವಲಯದಲ್ಲೇ ಕ್ಯಾಮರಾ ಟ್ರಾಪ್‌ಗೆ ಸೆರೆ ಸಿಕ್ಕಿದ್ದ ಈ ಹುಲಿ ಇದೀಗ ಸೆರೆ ಸಿಕ್ಕಿದೆ. ಮೊದಲ ಬಾರಿ ಕ್ಯಾಮರಾ ಟ್ರಾಪ್‌ಗೆ ಸೆರೆ ಸಿಕ್ಕಾಗ ಅದಕ್ಕೆ ಒಂದೂವರೆ ವರ್ಷದಿಂದ 2 ವರ್ಷವಾಗಿದ್ದು, ಇದೀಗ 11 ವರ್ಷದ ನಂತರ ಸೆರೆ ಹಿಡಿದಿರುವುದರಿಂದ ಈ ಹುಲಿಗೆ 13ರಿಂದ 14 ವರ್ಷ ವಯಸ್ಸಾಗಿದೆ ಎಂದು ಅಂದಾಜಿಸಲಾಗಿದೆ. ಸಾಮಾನ್ಯವಾಗಿ ಅರಣ್ಯದಲ್ಲಿ 8-9 ವರ್ಷವಾಗುತ್ತಿದ್ದಂತೆ ಸರಹದ್ದಿನ ಕಾಳಗದಲ್ಲಿ ಮೃತಪಟ್ಟಿರುವ ಉದಾಹರಣೆ ಸಾಕಷ್ಟಿದೆ. ಅಲ್ಲದೆ, ಕಾದಾಟದಲ್ಲಿ ಗಂಭೀರವಾಗಿ ಗಾಯಗೊಂಡು ಕಾಡಂಚಿನ ಗ್ರಾಮಗಳತ್ತ ಬಂದು ಜಾನುವಾರುಗಳ ಮೇಲೆ ದಾಳಿ ಮಾಡುವ ಸಂದರ್ಭವೂ ಹೆಚ್ಚಾಗಿರುತ್ತದೆ. ಆದರೆ ಸೆರೆ ಸಿಕ್ಕಿರುವ ಯು-2371 ಸಂಖ್ಯೆಯ ಹುಲಿ ಇನ್ನು ಆರೋಗ್ಯವಾಗಿದ್ದು, ವಯೋಸಹಜ ಸಮಸ್ಯೆಯಿಂದ ಕಾಡುಪ್ರಾಣಿಗಳನ್ನು ಬೇಟೆಯಾಡುವ ಸಾಮರ್ಥ್ಯ ಕಳೆದುಕೊಂಡಿದೆ ಎಂಬ ಸಂಶಯವಿದೆ. ಜಿಂಕೆ, ಕಾಡೆಮ್ಮೆ, ಸಾಂಬರ್ ಬೇಟೆಯಾಡಲು ಸಾಧ್ಯವಾಗದೆ ಕಾಡಂಚಿನ ಗ್ರಾಮದಲ್ಲಿ ಜಾನುವಾರುಗಳನ್ನೇ ಗುರಿಯಾಗಿಸಿತ್ತು. ಇದರಿಂದ ಆಕಸ್ಮಿಕವಾಗಿ ರತ್ನಮ್ಮ ಅವರನ್ನು ಬಲಿ ಪಡೆದಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ನಕಲಿ ದಾಖಲೆ ಮಾತ್ರವಲ್ಲ, ನಕಲಿ ವ್ಯಕ್ತಿ ಸೃಷ್ಟಿಸಿ ಭೂಮಿ ಮಾರಾಟ ಬಯಲು

ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ನ.30- ತುಮಕೂರು ಜಿಲ್ಲೆಯ ಮಧುಗಿರಿಯ ಸಹಕಾರ ಬ್ಯಾಂಕ್‌ನ ನಿವೃತ್ತ ಅಧಿಕಾರಿಗೆ ಸೇರಿದ ಜಮೀನನ್ನು ನಕಲಿ ದಾಖಲೆ ಸೃಷ್ಟಿಸಿ, ನಕಲಿ ವ್ಯಕ್ತಿಯನ್ನು ಬಳಸಿಕೊಂಡು ಮಾರಾಟ ಮಾಡಿರುವ ಬಗ್ಗೆ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಮಧುಗಿರಿಯ ಸಹಕಾರ ಬ್ಯಾಂಕ್‌ನ ನಿವೃತ್ತ ಅಧಿಕಾರಿ ವೆಂಕಟಾಚಲಪತಿ (74) ಎಂಬುವರು 1995ರ ಆ.22ರಂದು ಹುಯಿಲಾಳು ಗ್ರಾಮದ ಸರ್ವೆ ನಂ.43/14ರಲ್ಲಿ 3 ಎಕರೆ 5 ಗುಂಟೆ ಜಮೀನನ್ನು ಮೈಸೂರಿನ ಪಾಪಯ್ಯ ಎಂಬುವರಿಂದ ಖರೀದಿಸಿ ಖಾತಾ, ಕಂದಾಯ ಸೇರಿದಂತೆ ಎಲ್ಲಾ ದಾಖಲಾತಿಗಳನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದರು.

ಮಧುಗಿರಿಯಲ್ಲಿದ್ದ ವಯೋವೃದ್ಧರಾದ ಇವರು, ಮೈಸೂರಿಗೆ ಪದೇ ಪದೆ ಬರಲು ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಸಂಶಯಗೊಂಡು ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ತಮ್ಮ ಜಮೀನಿನ ಬಗ್ಗೆ ಪರಿಶೀಲಿಸಿ ದಾಗ ಮೈಸೂರಿನ ಶ್ರೀರಾಂಪುರ 2ನೇ ಹಂತದ ಬಿ.ಇ.ಗಿರೀಶ್ (41) ಮತ್ತು ಗಂಗೋತ್ರಿ ಲೇಔಟ್‌ನ ಕೆ.ಹೆಚ್.ಹನುಮಂತರಾಜ್ ಎಂಬುವರು ಬೇರೊಂದು ವ್ಯಕ್ತಿಯನ್ನು ವೆಂಕಟಾಚಲಪತಿ ಎಂದು ಬಿಂಬಿಸಿ ಅವರ ಸಹಿಗಳನ್ನು ನಕಲು ಮಾಡಿ ಬೆಂಗಳೂರಿನ ಕದಿರೇನಹಳ್ಳಿ ನಿವಾಸಿ ಸಿ.ಎಸ್.ಮಂಜುನಾಥ್ ಎಂಬುವರಿಗೆ 2021ರ ಏಪ್ರಿಲ್ 5ರಂದು ಮಾರಾಟ ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ವೆಂಕಟಾಚಲಪತಿ ನೀಡಿದ ದೂರನ್ನು ದಾಖಲಿಸಿ ಕೊಂಡಿರುವ ವಿಜಯನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮೈಸೂರಲ್ಲಿ ಕನಕದಾಸರ ಜಯಂತ್ಯುತ್ಸವ ಮೆರವಣಿಗೆ ವೇಳೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಎಂ.ಶ್ರೀನಿವಾಸ್ ಕುಮಾರ್, ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.



ಮೈಸೂರಿನ ಇಟ್ಟಿಗೆಗೂಡಿನಲ್ಲಿ ಕನಕದಾಸರ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಡಾ.ಶುಶ್ರುತ್, ಎಸ್.ಆರ್.ರವಿಕುಮಾರ್, ಮಹೇಶ್ ಇಟ್ಟಿಗೆಗೂಡು, ಮಾಜಿ ಕಾರ್ಪೊರೇಟರ್ ಛಾಯಾದೇವಿ ಮತ್ತಿತರರಿದ್ದರು. ಈ ವೇಳೆ ಸಾರ್ವಜನಿಕರಿಗೆ ಉಪಾಹಾರ ವಿತರಿಸಲಾಯಿತು.

ಇಂದು ಕನ್ನಡ ಚಿತ್ರಗೀತೆಗಳ ಕರೋಕೆ



ಮೈಸೂರು,ನ.30(ಜಿಎ)-ಅಮೃತ ವರ್ಷಿಣಿ ಗಾನವೃಂದದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಡಿ.1 ರಂದು ಸಂಜೆ 5ಕ್ಕೆ ಕನ್ನಡ ಚಲನಚಿತ್ರ ಗೀತೆಗಳ ಕರೋಕೆ ಕಾರ್ಯಕ್ರಮವನ್ನು ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಲಾಗಿದೆ ಎಂದು ಗಾಯಕ ಡಾ.ಮಂಜುನಾಥ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ 11 ಮಂದಿ ಗಾಯಕರು ಕನ್ನಡ ಚಲನಚಿತ್ರಗಳ 25ಕ್ಕೂ ಅಧಿಕ ಗೀತೆಗಳನ್ನು ಹಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದ್ದು, ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಕನಕರಾಜ್, ಎಸ್.ಕೋಮಲ ಉಪಸ್ಥಿತರಿದ್ದರು.

ಲಾರಿ ಹರಿದು ಸೆಸ್ಕ್ ಸಿಬ್ಬಂದಿ ಸಾವು



ಹರೀಶ್ ರಾವ್

ಮೈಸೂರು, ನ.30(ಆರ್‌ಕೆ)-ಲಾರಿ ಹರಿದು ಸೆಸ್ಕ್ ಸಿಬ್ಬಂದಿ (Over seer) ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಇಂದು ಬೆಳಗ್ಗೆ ಮೈಸೂರಿನ ಜೆ.ಪಿ.ನಗರದ ರಿಂಗ್ ರಸ್ತೆಯ ಬಳಿ ಸಂಭವಿಸಿದೆ.

ಮೈಸೂರಿನ ರಮಾಬಾಯಿ ನಗರ ನಿವಾಸಿ ಹರೀಶ್ ರಾವ್ (56) ದುರಂತ ಸಾವನ್ನಪ್ಪಿದವರು. ಮೂಲತಃ ಕೊಡಗಿನ ವಿರಾಜಪೇಟೆಯವರು. ಮೈಸೂರಿನ ಚಾಮುಂಡಿಪುರಂನಲ್ಲಿರುವ ಸೆಸ್ಕ್ ಉಪವಿಭಾಗದ ಸಿಬ್ಬಂದಿಯಾಗಿದ್ದರು. ರಾತ್ರಿ ಪಾಳಿಯ ಕೆಲಸ ಮುಗಿಸಿ ಬೈಕ್‌ನಲ್ಲಿ ರಮಾಬಾಯಿನಗರದ ನಿವಾಸಕ್ಕೆ ಮರಳುತ್ತಿದ್ದಾಗ ಹಿಂದಿನಿಂದ ಬಂದ ಲಾರಿ ಜೆ.ಪಿ.ನಗರದ ರಿಂಗ್ ರಸ್ತೆ ಬಳಿ ಡಿಕ್ಕಿ ಹೊಡೆದಿದೆ. ಈ ವೇಳೆ ಆಯ ತಪ್ಪಿ ಕೆಳಗೆ ಬಿದ್ದ ಹರೀಶ್ ರಾವ್ ಮೇಲೆ ಚಕ್ರ ಹರಿದು ಅವರು ಸ್ಥಳದಲ್ಲೇ ಕೊನೆಯುಸಿರೆಳೆದರು ಎಂದು ಪೊಲೀಸರು ತಿಳಿಸಿದ್ದಾರೆ.

ಹರೀಶ್‌ರಾವ್ ಅವರು ಪತ್ನಿ ಸವಿತಾ, ಪುತ್ರರಾದ ಅರ್ಜುನ್ ರಾವ್ ಮತ್ತು ಸಾಯಿಕೃಷ್ಣ ರಾವ್ ಅವರನ್ನು ಅಗಲಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಕೆ.ಆರ್.ಸಂಚಾರ ಠಾಣೆ ಪೊಲೀಸರು, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡರು. ಡಿಸಿಪಿ ಎಸ್.ಜಾಹ್ನವಿ, ಸಂಚಾರ ಎಸಿಪಿ ಪರಶುರಾಮಪ್ಪ ಸಹ ಅಪಘಾತ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಒಕ್ಕಲಿಗರ ವಿಕಾಸ ವೇದಿಕೆಯಿಂದ ಕನ್ನಡ ಹಬ್ಬ ಆಚರಣೆ



ಮೈಸೂರು,ನ.30(ಎಂಟಿವೈ)-ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಗುರುವಾರ ಆಯೋಜಿಸಿದ್ದ ಕನ್ನಡ ಹಬ್ಬ ಹಾಗೂ ಕನಕ ಜಯಂತಿ ಕಾರ್ಯಕ್ರಮದಲ್ಲಿ ಸಾಧಕರಿಗೆ ವಿವಿಧ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮವನ್ನು ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ದೇವರಾಜು ಪಿ.ಚಿಕ್ಕಹಳ್ಳಿ ಉದ್ಘಾಟಿಸಿ ಮಾತನಾಡಿ, ಸಂತಕವಿ ಕನಕದಾಸರು ಕೀರ್ತನೆಗಳ ಗಾಯನಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಬಳಸಿಕೊಳ್ಳುವ ಮೂಲಕ ಅದಕ್ಕೆ ಜೀವಕಳೆಯನ್ನು ತಂದುಕೊಟ್ಟರು. ನಮ್ಮಲ್ಲಿ ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ ಎಂಬ ಎರಡು ಪ್ರಕಾರಗಳಿವೆ. ಈ ಪೈಕಿ ನಮ್ಮ ನೆಲಮೂಲದ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕನಕದಾಸರು ಬಳಸಿಕೊಂಡು ಕೀರ್ತನೆಗಳನ್ನು ಜನರಿಗೆ ತಲುಪಿಸಿ ಜನಪ್ರಿಯಗೊಳಿಸಿದರು. ಕನಕದಾಸರು 15-16ನೇ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೇ ಕೆಳ ಪಂಗಡದ ದಾಸರು. ತಳ ಸಮುದಾಯದಿಂದ ಬಂದ ಇವರು ಕೀರ್ತನೆ ಸಂಸ್ಕೃತಿಗೆ ಹೊಸ ಚೈತನ್ಯ ತಂದುಕೊಟ್ಟರು. ಈ ಕಾರಣಕ್ಕೆ ಇವರು ವಿಶೇಷ ಎನಿಸುತ್ತಾರೆ. ಸಮಸಮಾಜ ನಿರ್ಮಾಣವೇ ಕನಕದಾಸರ ಮೂಲ ಆಶಯವಾಗಿತ್ತು. ಅದಕ್ಕಾಗಿ ಕೀರ್ತನೆಗಳನ್ನು ಅಸ್ತ್ರವಾಗಿ ಬಳಕೆ ಮಾಡಿಕೊಂಡರು ಎಂದು ತಿಳಿಸಿದರು.

ಕೀರ್ತನೆ ಮೂಲಕ ಕನಕದಾಸರು ಕನ್ನಡ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಅವರು ರಚನೆ ಮಾಡಿರುವ 316 ಕೀರ್ತನೆಗಳು ಮಾತ್ರ ಲಭ್ಯ ಇವೆ. 5 ಕಾವ್ಯಕೃತಿಗಳನ್ನು ರಚಿಸಿದ್ದಾರೆ. ಇದರಲ್ಲಿ ಮೋಹನ ತರಂಗಿಣಿ ಕೃತಿಯಲ್ಲಿ 2798, ನಳಚರಿತ್ರೆ ಕೃತಿಯಲ್ಲಿ 450, ರಾಮಧಾನ್ಯ ಚರಿತ್ರೆಯಲ್ಲಿ 156, ಹರಿಭಕ್ತಿಸಾರ ಕೃತಿಯಲ್ಲಿ 120 ಪದ್ಯಗಳಿವೆ. ನೃಸಿಂಹಸ್ತವ ಕೃತಿ ಕುರಿತು ಇನ್ನಷ್ಟು ಸಂಶೋಧನೆಗಳಾಗಬೇಕು. ಕನಕದಾಸರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಬಾಡ ಗ್ರಾಮದಲ್ಲಿ 1509ರಲ್ಲಿ ಬಚ್ಚಮ್ಮ ಮತ್ತು ಬೀರಪ್ಪ ನಾಯಕ ದಂಪತಿಯ ಮಗನಾಗಿ ಜನಿಸಿದರು. ಕನಕದಾಸರು ಒಂದು ಜಾತಿಗೆ ಸೀಮಿತವಾದ ಭಕ್ತರಲ್ಲ, ಎಲ್ಲ ಜಾತಿಗಳಿಗೆ ಬೇಕಾದವರು. ಜಾತಿ ವ್ಯವಸ್ಥೆಯ ಬಗ್ಗೆ ಸಮರ ಸಾರಿದ ಭಕ್ತ ಎಂದರೆ ಕನಕದಾಸರು ಎಂದರೆ ತಪ್ಪಾಗಲಾರದು ಎಂದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ದಿವಂಗತ ರಾಜಶೇಖರ ಕೋಟಿ, ಟಿ.ಎನ್.ದಾಸೇಗೌಡರ ಸ್ಮರಣಾರ್ಥ ಪ್ರಶಸ್ತಿ, ಕನ್ನಡ ವಿಕಾಸ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕನ್ನಡ ಉಪನ್ಯಾಸಕ ಡಾ.ಬೇವಿನಹಳ್ಳಿ ಉಮೇಶ್, ನಿವೃತ್ತ ಪ್ರಾಧ್ಯಾಪಕ ಪ್ರೊ.ನಂಜರಾಜೇಅರಸ್, ವೇದಿಕೆಯ ಪದಾಧಿಕಾರಿಗಳಾದ ಎಚ್.ಎಲ್.ಯಮುನಾ, ಕೆ.ಆರ್.ಮಿಲ್ ಶಿವಣ್ಣ, ಅರವಿಂದ ಶರ್ಮ ಇದ್ದರು.



ಇತ್ತೀಚೆಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಉದ್ಯಮಿ ಹಾಗೂ ಸಮಾಜ ಸೇವಕ ಎಸ್.ಶ್ರೀಕಾಂತ್ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಡಿ.5ರಿಂದ ಸುದರ್ಶನ ಕ್ರಿಯೆ

ಮೈಸೂರು, ನ. 30- ಮೈಸೂರಿನ ಶ್ರೀ ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಡಿಸೆಂಬರ್ 5ರಿಂದ 9ರವರೆಗೆ ಸಿದ್ಧಾರ್ಥನಗರ ಬಡಾವಣೆ ಲೋಕಹಿತಂ ಗುರುಕುಲದಲ್ಲಿ ಆರೋಗ್ಯಕರ ಜೀವನ ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆ ಕಲಿಸುವ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 6 ರಿಂದ 8.30 ಹಾಗೂ ಸಂಜೆ 6 ರಿಂದ 8.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9480476825 ಸಂಪರ್ಕಿಸಬಹುದು.

ರಾಜ್ಯವ್ಯಾಪ್ತಿ ಪೌರಕಾರ್ಮಿಕರ ಪ್ರತಿಭಟನೆಗೆ ಮೈಸೂರು ಪಾಲಿಕೆ ಪೌರಕಾರ್ಮಿಕರ ಬೆಂಬಲವಿಲ್ಲ

ಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ ಘೋಷಣೆ



ಮೈಸೂರು,ನ.30(ಜಿಎ)-ಒಳಚರಂಡಿ ಸಹಾಯಕ ಕಾರ್ಮಿಕರನ್ನು ಖಾಯಂ ಮಾಡುವುದೂ ಸೇರಿದಂತೆ ಪೌರಕಾರ್ಮಿಕರ ವಿವಿಧ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘ ಡಿ.1ರಂದು ರಾಜ್ಯಾದ್ಯಂತ ಕರೆ ನೀಡಿರುವ ಪ್ರತಿಭಟನೆಗೆ ಮೈಸೂರು ನಗರಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರ ಕಾರ್ಮಿಕರ ಮಹಾಸಂಘದ ಬೆಂಬಲವಿಲ್ಲ ಎಂದು ಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ ಘೋಷಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರವು ಈಗಾಗಲೇ ರಾಜ್ಯದ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೇರಪಾವತಿ, ಹೊರಗುತ್ತಿಗೆ ಪೌರಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಕಾರ್ಮಿಕರು, ಲೋಡರ್ಸ್, ಕ್ಲೀನರ್ಸ್, ವಾಹನ ಚಾಲಕರು ಮತ್ತು ಸಹಾಯಕರನ್ನು ಕೂಡಲೇ ಕಾಯಂಗೊಳಿಸಲು ಮತ್ತು ವಿವಿಧ ಬೇಡಿಕೆ ಈಡೇರಿಸಲು ನಿರ್ಧಾರ ಕೈಗೊಂಡಿದ್ದು, ನಗರಾಭಿವೃದ್ಧಿ ಸಚಿವರು ಭರವಸೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾಳಿನ ಪ್ರತಿಭಟನೆಗೆ ನಾವು ಬೆಂಬಲ ಸೂಚಿಸುತ್ತಿಲ್ಲ ಎಂದರು.

ಮಾಜಿ ಮೇಯರ್ ನಾರಾಯಣ್ ಅವರು ಪ್ರತಿಭಟನೆ ಮೂಲಕ ರಾಜ್ಯದ ಗಮನ ಸೆಳೆದು ತಾವು ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ಪಡೆದುಕೊಳ್ಳಲು ಈ ರೀತಿ ಅಮಾಯಕ ಪೌರಕಾರ್ಮಿಕರನ್ನು ಬಳಸಿಕೊಳ್ಳುತ್ತಿದ್ದಾರೆ. ಕಳೆದ 15 ವರ್ಷಗಳಿಂದ ನಾರಾಯಣ್ ಪೌರಕಾರ್ಮಿಕರನ್ನು ಕಾಯಂ ಮಾಡಿಸುತ್ತೇನೆಂದು ಎಲ್ಲರ ದಿಕ್ಕು ತಪ್ಪಿಸಿ, ಅವರು ಅಧಿಕಾರ ಪಡೆದುಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅವರನ್ನು ಈಗಾಗಲೇ ಸಂಘದಿಂದ ಉಚ್ಚಾಟನೆ ಮಾಡಲಾಗಿದೆ. ಅವರೊಟ್ಟಿಗೆ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಪೌರಕಾರ್ಮಿಕರನ್ನು ಉಚ್ಚಾಟನೆ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಸರ್ಕಾರದ ವಿರುದ್ಧ ಅವರು ಪ್ರತಿಭಟನೆ ಮಾಡಿದ್ದರೆ, ಸರ್ಕಾರದ ಪರವಾಗಿ ಸಂಘದ ವತಿಯಿಂದ ಪಾಲಿಕೆ ಮುಂಭಾಗ ಘೋಷಣೆಗಳನ್ನು ಕೂಗಿ ಸರ್ಕಾರವನ್ನು ಬೆಂಬಲಿಸುತ್ತೇವೆ. ಈ ಸಂಬಂಧ ಪಾಲಿಕೆ ಆಯುಕ್ತರಿಗೆ ಮತ್ತು ಪೊಲೀಸ್ ಆಯುಕ್ತರಿಗೂ ಮನವಿ ಸಲ್ಲಿಸಿದ್ದೇವೆ ಎಂದರು. ಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಆರ್.ನರಸಿಂಹ, ಪ್ರಧಾನ ಕಾರ್ಯದರ್ಶಿ ಟಿ.ಶ್ರೀನಿವಾಸ್, ಕುಮಾರಸ್ವಾಮಿ, ಎಸ್.ಗಣೇಶ್ ಉಪಸ್ಥಿತರಿದ್ದರು.



ಮೈಸೂರಿನ ಕೃಷ್ಣರಾಜ ವಿಭಾಗದ ಎಸಿಪಿಯಾಗಿದ್ದ ಗಂಗಾಧರಸ್ವಾಮಿ ಅವರು ಮುಂಬಡ್ತಿಯೊಂದಿಗೆ ಮಂಡ್ಯ ಎಎಸ್‌ಪಿಯಾಗಿ ನಿಯೋಜನೆಗೊಂಡ ಹಿನ್ನೆಲೆಯಲ್ಲಿ ಅವರನ್ನು ಕುವೆಂಪುನಗರ ನಾಗರಿಕರ ಪರವಾಗಿ ಪ್ರೊ.ಶಿವರಾಜಪ್ಪ, ರಘುರಾಮ್ ವಾಜಪೇಯಿ, ಉದ್ಯಮಿ ನಾಗೇಶ್, ವಿಕ್ರಾಂತ್ ಪಿ.ದೇವೇಗೌಡ, ಪೈಲ್ವಾನ್ ಹೇಮಂತ್, ಅವಿನಾಶ್, ಚಿಕ್ಕಹರದನಹಳ್ಳಿ ರಮೇಶ್ ರಂಗಪ್ಪ, ರಘು ಜವರಪ್ಪ, ಎಳನೀರು ರಾಮದೇವು (ಪ್ರದೀಪ್), ಅರವಿಂದನಗರ ರಾಜು, ನಾರಾಯಣ್ ಮತ್ತಿತರರು ಅಭಿನಂದಿಸಿದರು.



ಕನಕದಾಸ ಪತ್ತಿನ ಸಹಕಾರ ಸಂಘದ ವತಿಯಿಂದ 536ನೇ ಕನಕ ಜಯಂತ್ಯುತ್ಸವ ಆಚರಿಸಲಾಯಿತು. ಈ ವೇಳೆ ಮಾಜಿ ಉಪಾಧ್ಯಕ್ಷ ಮತ್ತು ನಿರ್ದೇಶಕರೂ ಆದ ರಾಜೀವ್, ನಿರ್ದೇಶಕರಾದ ಬೀರೇಶ್ ಧರ್ಮೇಂದ್ರ, ಚೇತನ್, ರೂಪದೇವಿ, ಕನಕದಾಸ ಪತ್ತಿನ ಸಹಕಾರ ಸಂಘದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮನುಜಸ್ಮೃತಿ ಕೃತಿ ಸಾಮಾಜಿಕ ಚಿಂತನೆಯನ್ನು ಪ್ರೇರೇಪಿಸುತ್ತದೆ

ಕೃತಿ ಬಿಡುಗಡೆಗೊಳಿಸಿ ವಿಮರ್ಶಕ ಎಸ್.ಆರ್.ವಿಜಯಶಂಕರ್ ಅಭಿಮತ



ಮೈಸೂರು,ನ.30(ಎಂಟಿವೈ)- ಲೇಖಕ ಡಾ.ಕೆ.ಪಿ.ಮಹಾದೇವಯ್ಯ ಅವರ ಮನುಜಸ್ಮೃತಿ ಕೃತಿಯು ಸಾಮಾಜಿಕ ಚಿಂತನೆಯನ್ನು ಪ್ರೇರೇಪಿಸುತ್ತದೆ ಎಂದು ಖ್ಯಾತ ವಿಮರ್ಶಕ ಎಸ್.ಆರ್.ವಿಜಯಶಂಕರ್ ವ್ಯಾಖ್ಯಾನಿಸಿದರು

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಗುರುವಾರ ಸಹಜಾ ಪ್ರಕಾಶನ ಮತ್ತು ಬದುಕು ಟ್ರಸ್ ಆಯೋಜಿಸಿದ್ದ ಡಾ.ಕೆ.ಪಿ. ಮಹಾದೇವಯ್ಯ ಅವರ ಮನುಜಸ್ಮೃತಿ ಕೃತಿ ಬಿಡುಗಡೆ ಸಮಾರಂಭದಲ್ಲಿ ಕೃತಿ ಕುರಿತು ಮಾತನಾಡಿದ ಅವರು, ಮನಸ್ಮೃತಿಗೆ ವಿರುದ್ಧವಾದ ಇದು ಭಿನ್ನವಾದ ಮೀಮಾಂಸೆ ಪರಿಕಲ್ಪನೆಯನ್ನು ಹೇಳುತ್ತದೆ. ಧ್ಯಾನದೀಪದಂತಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರವಾದದ ಸಮಾನತೆಯ ಕಲ್ಪನೆ ಈ ಕೃತಿ ಹಿಂದಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಕಳಕಳಿ, ಸಮಾನತೆ, ಆರ್ಥಿಕ ಸ್ವಾತಂತ್ರ್ಯ, ಮನುಷ್ಯತ್ವ ಹಾಗೂ ದಾಖಲೆಯ ಗುಣಗಳಿವೆ. ಡಾ.ಕೆ.ಪಿ.ಮಹಾದೇವಯ್ಯ ಅವರ ಪ್ರಜ್ಞಾವಂತ ಕವಿಯ ಮನಸ್ಸು ಇಲ್ಲಿ ಕೆಲಸ ಮಾಡಿದೆ ಎಂದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿ ಮಾತನಾಡಿ, ಈ ಕೃತಿ ಪ್ರಸ್ತುತ ವಿದ್ಯಮಾನಗಳಿಗೆ ಕೈಗನ್ನಡಿ ಹಿಡಿದಂತಿದೆ. ಸಮಾಜವನ್ನು ಕಾಡುತ್ತಿರುವ ಜಾತಿ ದೌರ್ಜನ್ಯ, ಮರ್ಯಾದೇಡು ಹತ್ಯೆ, ನೋವು, ವಿಷಾದ, ಪ್ರೀತಿ, ಸಮಾನತೆ ಸೇರಿದಂತೆ ಎಲ್ಲ ವಿಷಯಗಳ ಬಗ್ಗೆಯೂ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಈ ಕೃತಿ ಚಿಂತನೆಗೆ ಎಡೆ ಮಾಡುವ ಪಂಚಿಂಗ್ ಡೈಲಾಗ್‌ಗಳನ್ನು ಹೊಂದಿದೆ. ಸುಭಾಷಿತ ಮಾದರಿಯ ಈ ದಿನ ವಾಣಿಗಳು ಮಾನವತೆ, ವೈಚಾರಿಕತೆ, ವೈಜ್ಞಾನಿಕತೆಯ ಜಾಗೃತಿ ಮೂಡಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಕೃತಿ ಲೋಕಾರ್ಪಣೆ ಮಾಡಿದ ಪ್ರಗತಿಪರ ಚಿಂತಕ ಈ. ಧನಂಜಯ ಎಲಿಯೂರು ಮಾತನಾಡಿ, ಡಾ.ಕೆ.ಪಿ. ಮಹಾದೇವಯ್ಯ ಅವರು ಮಾತುಗಳು ನಮ್ಮನ್ನು ಹಿಡಿದು ನಿಲ್ಲಿಸುತ್ತವೆ. ನಮ್ಮದೇ ಮಾತುಗಳು ಎನಿಸುತ್ತವೆ. ವಿಡಂಬನೆಯ ಮೂಲಕವೇ ಎಚ್ಚರಿಸುತ್ತವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ದಲಿತ ಚಳವಳಿಗಾರರನ್ನೂ ಟೀಕಿಸುವ ಮೂಲಕ ಎಚ್ಚರಿಸುವಂತಹ ಕೆಲಸವನ್ನು ಡಾ.ಕೆ.ಪಿ.ಮಹಾದೇವಯ್ಯ ಮಾಡಿದ್ದಾರೆ. ಶ್ರೀಕೃಷ್ಣ, ಶ್ರೀರಾಮ ಅಗ್ರಹಾರದಿಂದ ಬಂದವರಲ್ಲ. ಆದರೂ ಅವರನ್ನು ತಮ್ಮವರಾಗಿ ಮಾಡಿಕೊಂಡು ಮಾರ್ಕೆಟ್ ಮಾಡುತ್ತಿದ್ದಾರೆ. ಉಡುಪಿಯಲ್ಲಿ ಶ್ರೀಕೃಷ್ಣ ಒಳಗಿದ್ದರೆ ಕನಕ ಇನ್ನೂ ಹೊರಗೇ ಇದ್ದಾನೆ. ಇಂತಹ ವರ್ಗ ಸಂಘರ್ಷ ಕಾಲಘಟ್ಟದಲ್ಲಿ ಸಮಾಜವನ್ನು ಬಡಿದೆಬ್ಬಿಸುವ ಕೆಲಸ ಆಗಬೇಕಾಗಿದೆ. ಸಮಾಜದಲ್ಲಿ ಮತೀಯವಾದ ತಲೆ ಎತ್ತಿರುವ ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಆತ್ಮಶೋಧನೆ ಮಾಡಿಕೊಳ್ಳಬೇಕು. ಕರ್ನಾಟಕದಲ್ಲಿ ಆದಂತೆ 2024ರಲ್ಲಿ ದೇಶದಲ್ಲೂ ಬದಲಾವಣೆ ಆಗದಿದ್ದಲ್ಲಿ ಕಷ್ಟವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಡಾ.ಎನ್.ಕೆ.ಲೋಲಾಕ್ಷಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹಲಗೂರಿನಲ್ಲಿ ಕಾಡಾನೆ ಹಾವಳಿ: ಬೆಳೆ ನಾಶ



ಹಲಗೂರು, ನ.30– ಸಮೀಪದ ಬೈಪಾಸ್ ರಸ್ತೆಯಲ್ಲಿರುವ ಹೊನ್ನೇಗೌಡ ಎಂಬುವವರ ಜಮೀನಿಗೆ ಸತತವಾಗಿ ಎರಡು ದಿನಗಳಿಂದ ಕಾಡಾನೆಗಳು ದಾಳಿ ಮಾಡಿ ಜಮೀನಿನಲ್ಲಿ ಬೆಳೆದ ಸಪೋಟ, ತೆಂಗಿನ ಸಸಿಗಳನ್ನು ಮುರಿದು ತುಳಿದು ಹಾಕಿ ನಾಶಪಡಿಸಿರುವ ಘಟನೆ ಜರುಗಿದೆ.

ಹೆಚ್.ಬಸಾಪುರ ಗ್ರಾಮದ ವಾಸಿ ಹೊನ್ನೇಗೌಡ ಸುಮಾರು ಮೂರು ಎಕರೆ ಜಮೀನಿನಲ್ಲಿ ನೂರಾರು ಸಪೋಟ ಸಸಿಗಳು, ಅಡಿಕೆ ಮತ್ತು ತೆಂಗಿನ ಸಸಿಗಳನ್ನು ಬೆಳೆಸಿದ್ದರು. ತಡರಾತ್ರಿ ಬಸವನ ಬೆಟ್ಟದ ಅರಣ್ಯ ಪ್ರದೇಶದಿಂದ ಬಂದ ಕಾಡಾನೆಗಳು ಸುಮಾರು ನಲವತ್ತಕ್ಕೂ ಹೆಚ್ಚು ತೆಂಗು, ಸಪೋಟ ಸಸಿಗಳನ್ನು ತುಳಿದು ನಾಶಪಡಿಸಿವೆ. ಇದರಿಂದಾಗಿ ಸುಮಾರು 85 ಸಾವಿರಕ್ಕೂ ಹೆಚ್ಚು ನಷ್ಟ ಉಂಟಾಗಿದೆ.

ಜಮೀನಿನ ಮಾಲೀಕರಾದ ಹೊನ್ನೇಗೌಡ ಮಾತನಾಡಿ, ಬುಧವಾರ ತಡರಾತ್ರಿ ಕಾಡಾನೆಗಳು ದಾಳಿ ಮಾಡಿ ಜಮೀನಿನಲ್ಲಿ ಬೆಳಯಲಾಗಿದ್ದ ಫಸಲನ್ನು ನಾಶ ಮಾಡಿವೆ ಇದರಿಂದ ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ಸಾಲ ಮಾಡಿ ಬೆಳೆಯನ್ನ ಬೆಳೆಯಲಾಗಿತ್ತು. ವ್ಯವಸಾಯ ಮಾಡಿ ಬಂದ ಲಾಭದಲ್ಲಿ ಸಾಲ ತೀರಿಸಿಕೊಂಡು ನೆಮ್ಮದಿ ಜೀವನ ನಡೆಸಬೇಕು ಎನ್ನುವುದರೊಳಗೆ ಕಾಡಾನೆಗಳು ದಾಳಿ ಮಾಡಿ ಫಸಲನ್ನು ತುಳಿದು ತಿಂದು ನಾಶ ಪಡಿಸುತ್ತಿರುವುದರಿಂದ ಇಲ್ಲಿನ ರೈತರು ವ್ಯವಸಾಯ ಮಾಡುವುದೇ ಕಷ್ಟಕರವಾಗಿದ್ದು, ಸೂಕ್ತ ಪರಿಹಾರ ನೀಡುವಂತೆ ಮನವಿ ಮಾಡಿದರು. ಇದೇ ವೇಳೆ ಅರಣ್ಯ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು. ಇದರ ಜೊತೆಗೆ ಹಲಗೂರು ಹೊರವಲಯದ ಅಂಚಿನಲ್ಲಿರುವ ಹಲಗೂರು ವಿದ್ಯಾಸಂಸ್ಥೆ ಬಳಿ ತಡರಾತ್ರಿ ಒಂಟಿಸಲಗ ದಾಳಿ ಮಾಡಿ ಜಮೀನಿನ ಸುತ್ತ ಹಾಕಲಾಗಿದ್ದ ತಂತಿ ಬೇಲಿಯನ್ನು ಮುರಿದು ಹಾಕಿ ಒಳ ನುಗ್ಗಿ ಸ್ವಲ್ಪ ಪ್ರಮಾಣದ ಬೆಳೆಯನ್ನು ತುಳಿದು ನಾಶ ಪಡಿಸಿದೆ. ಸ್ವಲ್ಪ ದೂರದಲ್ಲಿ ವಸತಿ ಪ್ರದೇಶ ಇದ್ದು, ಅಲ್ಲಿನ ಜನರಿಗೆ ಇದೀಗ ಆತಂಕ ಶುರುವಾಗಿದೆ.

ಮಂಡ್ಯದಲ್ಲಿ ಕನಕದಾಸರ ಜಯಂತಿ



ಮಂಡ್ಯ, ನ.30– ಮೇಲು, ಕೀಳು, ಬಡವ, ಶ್ರೀಮಂತರ ನಡುವೆ ಸಾಮರಸ್ಯ ಬೆಳೆದು ಶಾಂತಿ ನೆಲೆಸಲು ಕನಕ ಜಯಂತಿ ಪೂರಕ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಗುರುವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆಯ ಸಂಯುಕ್ತಾಶ್ರಯದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಅವರ ಭವನದಲ್ಲಿ ನಡೆದ ಕನಕ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ನೆಲೆ ಸತ್ಯ ಧರ್ಮಕ್ಕೆ ಶಕ್ತಿ ಕೊಟ್ಟಿದೆ. ಅದಕ್ಕೆ ಕಾರಣ ಕನಕದಾಸರಂತಹ ಮಹಾನ್ ವ್ಯಕ್ತಿಗಳು, ಇಂತಹವರ ವ್ಯಕ್ತಿತ್ವದಿಂದ ದೇಶದಲ್ಲಿ ಯಾವುದೇ ತಾರತಮ್ಯ ಮೂಡುವುದಿಲ್ಲ. ಪ್ರತಿ ಮನೆಯಲ್ಲೂ ಕನಕದಾಸರಂತಹ ಮಹಾನ್ ವ್ಯಕ್ತಿಗಳು ಹುಟ್ಟಲಿ ಎಂದರು. ಕನಕದಾಸರು ಹುಟ್ಟುವಾಗಲೇ ಸಾಧಕರಾಗಿರಲಿಲ್ಲ, ಸಾಮಾನ್ಯ ಮನುಷ್ಯರಾಗಿ ಅವರು ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಮಹಾನ್ ವ್ಯಕ್ತಿಯಾದರು. ನಾಡಿನ ಎಲ್ಲರೂ ಕನಕದಾಸರಂತೆ ನಾಡಿನ ಹಿತಕ್ಕಾಗಿ ಪ್ರಾಮಾಣಿಕ ಹೆಜ್ಜೆ ಇಟ್ಟರೆ ದೇಶವು ಬೆಳಗಲಿದೆ. ಕನಕದಾಸ ಅವರ ಭಕ್ತಿಗೆ ಮೆಚ್ಚಿ ಕೃಷ್ಣನೇ ತಿರುಗಿದನೆಂದರೆ, ಅವರ ಭಕ್ತಿಯಲ್ಲಿ ಪ್ರಾಮಾಣಿಕತೆ ಎಷ್ಟಿತ್ತು ಅಂತ ನಾವು ಯೋಚಿಸಬೇಕಿದೆ. ಇಂತವರು ಹುಟ್ಟಿದ ನೆಲದಲ್ಲಿ ನಾವು ಹುಟ್ಟಿದ್ದೇವೆ. ಅದೇ ನಮ್ಮ ಅದೃಷ್ಟ ಎಂದು ಹೇಳಿದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಕುಲಕ್ಕಿಂತ ಗುಣಮುಖ್ಯ, ಎಲ್ಲಾರು ಸಮಾನರು ಎಂದು ತೋರಿಸಿ ಕೊಟ್ಟವರು ಕನಕದಾಸರು. ಕನಕದಾಸರ ಗುಣವನ್ನು ಮೈಗೂಡಿಸಿಕೊಂಡು ಮುನ್ನಡೆಯೋಣ, ಒಳ್ಳೆ ಕೆಲಸವನ್ನೇ ಮಾಡೋಣ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಎಸ್ಪಿ ಎನ್.ಯತೀಶ್, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸಿಫ್, ಎಡಿಸಿ ಡಾ.ಹೆಚ್.ಎಲ್.ನಾಗರಾಜು, ಉಪ ವಿಭಾಗಾಧಿಕಾರಿ ಶಿವಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಉದಯ್‌ಕುಮಾರ್, ಕುರುಬರ ಸಂಘದ ಜಿಲ್ಲಾಧ್ಯಕ್ಷ ಸುರೇಶ್, ಉಪಾಧ್ಯಕ್ಷ ಶ್ರೀನಿವಾಸ್ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಕಾರು ಡಿಕ್ಕಿ: ಚಿರತೆ ಸಾವು

ಮಳವಳ್ಳಿ, ನ.30– ಕಾರು ಡಿಕ್ಕಿ ಹೊಡೆದ ಪರಿಣಾಮ ಚಿರತೆ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ತಾಲೂಕಿನ ಬಾಚಹಳ್ಳಿ ಗ್ರಾಮದ ಬಳಿ ಸಂಭವಿಸಿದೆ.

ಗ್ರಾಮದ ಬಳಿಯ ಮಳವಳ್ಳಿ–ಕೊಳ್ಳೆಗಾಲ ಹೆದ್ದಾರಿಯಲ್ಲಿ ಘಟನೆ ನಡೆದಿದ್ದು, ಚಿರತೆಯೊಂದು ಹೆದ್ದಾರಿ ದಾಟುವಾಗ ಕಾರು ಡಿಕ್ಕಿ ಹೊಡೆದಿದ್ದು, ಕಾರು ಗುದ್ದಿದ ರಭಸಕ್ಕೆ ರಸ್ತೆ ಬದಿಗೆ ಬಿದ್ದು ಒದ್ದಾಡಿ ಚಿರತೆ ಪ್ರಾಣ ಬಿಟ್ಟಿದೆ. ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ, ಸ್ಥಳೀಯರಿಂದ ಮಾಹಿತಿ ಪಡೆದುಕೊಂಡು ಮೃತ ಚಿರತೆಯನ್ನು ಕಾಡಿನತ್ತ ಕೊಂಡೊಯ್ದಿದ್ದಾರೆ.

ವ್ಯಕ್ತಿ ನಾಪತ್ತೆ



ನಾಗಮಂಗಲ: ತಾಲೂಕಿನ ಹೊಣಕೆರೆ ಹೋಬಳಿಯ ಮಾದಹಳ್ಳಿಯಿಂದ ಸಣ್ಣತಿಮ್ಮಯ್ಯ ಅವರ ಪುತ್ರ ರಮೇಶ್ (46) ಎಂಬಾತ ನ.28ರಂದು ನಾಪತ್ತೆಯಾಗಿದ್ದಾನೆ.

ನ.28ರ ಬೆಳಿಗ್ಗೆ 6 ಗಂಟೆಯಲ್ಲಿ ಮನೆಯಿಂದ ಹೊರಗಡೆ ಹೋದವರು, ವಾಪಸ್ ಮನೆಗೆ ಬಂದಿಲ್ಲ ಎಂದು ರಮೇಶ ಅವರ ತಾಯಿ ಲಕ್ಷ್ಮಮ್ಮ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕವರು ರಾಕೇಶ್ ಮೊ. 8088326755 ಹಾಗೂ ವೆಂಕಟೇಶ್ ಮೊ. 8431766711 ಅನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಅಂತರರಾಜ್ಯ ಸರಗಳ್ಳ ಬಂಧನ



ವಶಪಡಿಸಿಕೊಂಡ ಚಿನ್ನಾಭರಣದೊಂದಿಗೆ ಪೊಲೀಸ್ ಅಧಿಕಾರಿಗಳು.

ಮದ್ದೂರು, ನ.30– ಮಹಾರಾಷ್ಟ್ರ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮಹಿಳೆಯರ ಮಾಂಗಲ್ಯ ಸರ ಹಾಗೂ ಚಿನ್ನದ ಸರಗಳನ್ನು ಕಳ್ಳತನ ಮಾಡುತ್ತಿದ್ದ ಸರಗಳ್ಳನನ್ನು ಮದ್ದೂರು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೀದರ್ ಮೂಲದ ಜಾವೀದ್ ಬಾಲಿ ಜಾಫ್ರಿ ಬಂಧಿತ ಸರಗಳ್ಳನಾಗಿದ್ದು, ಈತನಿಂದ ಒಟ್ಟು 435.5 ಗ್ರಾಮ್ ಚಿನ್ನಾಭರಣಗಳು, ಸುಮಾರು 27.30 ರೂ. ಲಕ್ಷ ಬೆಲೆ ಬಾಳುವ ಚಿನ್ನದ ಸರಗಳು ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಒಂದು ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈತ ಕಳೆದ ತಿಂಗಳು ಪಟ್ಟಣದ ಎಸ್.ಬಿ.ಎಂ ರಸ್ತೆಯ ನಿವಾಸಿಯಾದ 75 ವರ್ಷದ ವೃದ್ಧೆ ಕೆಂಪಮ್ಮ ಎಂಬುವರ ಕೊರಳಲ್ಲಿದ್ದ 62 ಗ್ರಾಂ ತೂಕದ ಚಿನ್ನದ ಸರವನ್ನು ಕಸಿದು ಪರಾರಿಯಾಗಿದ್ದ.

ತಾಲೂಕಿನ ಬೆಸಗರಹಳ್ಳಿ, ಕೆ.ಎಂ. ದೊಡ್ಡಿ, ಮಂಡ್ಯದ ಶಿವಳ್ಳಿ, ಬಸರಾಳು, ಪಶ್ಚಿಮ ಪೊಲೀಸ್ ಠಾಣೆ ಸೇರಿದಂತೆ ರಾಮನಗರ ಜಿಲ್ಲೆಯ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲೂ ಮಹಿಳೆಯರಿಂದ ಸರಗಳ್ಳತನ ಮಾಡಿದ್ದಾನೆ ಎನ್ನಲಾಗಿದ್ದು. ಈ ಹಿಂದೆ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸರಗಳ್ಳತನ ಮತ್ತು ಗಮನ ಬೇರಡೆ ಸೆಳೆದು ವಂಚಿಸುವ ಪ್ರಕರಣಲ್ಲಿ ಭಾಗಿಯಾಗಿರುವ ಬಗ್ಗೆ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದ್ದವು.

ಡಿವೈಎಸ್‌ಪಿ ಕೃಷ್ಣಪ್ಪ ಮಾರ್ಗದರ್ಶನದಲ್ಲಿ ಮದ್ದೂರು ಗ್ರಾಮಾಂತರ ಸಿಪಿಐ ವೆಂಕಟೇಗೌಡ ಸೇರಿದಂತೆ ಇತರರ ನೇತೃತ್ವದಲ್ಲಿ ತಂಡವನ್ನು ರಚಿಸಲಾಗಿತ್ತು.

ಪ್ರಶಂಸೆ: ಮದ್ದೂರು ವೃತ್ತ ಹಾಗೂ ಮದ್ದೂರು ಪೊಲೀಸ್ ಠಾಣಾ ಅಧಿಕಾರಿಗಳು ಮತ್ತು ಸಿಬ್ಬಂದಿಯ ಈ ಕಾರ್ಯವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕ ಎನ್.ಯತೀಶ್ ಶ್ಲಾಘಿಸಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಒಂಟಿ ಮಹಿಳೆಯರಿಗೆ ಕಿರುಕುಳ ನೀಡುತ್ತಿದ್ದ ಕಾಮುಕ ಬಂಧನ

ಮಂಡ್ಯ,ನ.30– ಬೈಕ್‌ನಲ್ಲಿ ಬಂದು ಒಂಟಿ ಮಹಿಳೆಯರಿಗೆ ಕಿರುಕುಳ ನೀಡುತ್ತಿದ್ದ ಕಾಮುಕನನ್ನು ಮಂಡ್ಯ ಪೂರ್ವ ಠಾಣೆಯ ಪೊಲೀಸರು ಬಂಧಿಸಿದ್ದಾರೆ.



ಮಂಡ್ಯ ನಗರದ ಹಲವೆಡೆ ಒಂಟಿ ಮಹಿಳೆಯರನ್ನು ಟಾರ್ಗೆಟ್ ಮಾಡಿ ಅವರನ್ನು ಹಿಂಬಾಲಿಸಿ ಕಿರುಕುಳ ನೀಡುತ್ತಿದ್ದ ಕೆರಗೋಡು ಗ್ರಾಮದ ಚಂದ್ರಶೇಖರ್ ಆರಾಧ್ಯ (35) ಎಂಬಾತನೆ ಬಂಧಿತ ಆರೋಪಿಯಾಗಿದ್ದಾನೆ. ಮಹಿಳೆಯರು ಒಂಟಿಯಾಗಿ ಸಂಚರಿಸುವುದನ್ನು ಗಮನಿಸಿ, ಅವರು ರಸ್ತೆಯಲ್ಲಿ ಒಬ್ಬರೇ ಹೋಗುವಾಗ ಅವರನ್ನು ಹಿಂಬಾಲಿಸಿ ಕಿರುಕುಳ ನೀಡಿ ವಿಕೃತಿ ಮೆರೆಯುತ್ತಿದ್ದ. ಹೆಲ್ಮೆಟ್ ಧರಿಸಿ ಬೈಕ್‌ನಲ್ಲಿ ಬಂದು ಕಿರುಕುಳ ನೀಡುತ್ತಿದ್ದ ಕೀಚಕನ ಕೃತ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು.

ಕಳೆದ ಒಂದು ತಿಂಗಳಿಂದ ಮಂಡ್ಯ ನಗರದ ಹಲವು ಕಡೆ ಒಂಟಿ ಮಹಿಳೆಯರು ಜನನಿಬಿಡ ರಸ್ತೆಯಲ್ಲಿ ಸಂಚರಿಸುವಾಗ ಅವರನ್ನೇ ಟಾರ್ಗೆಟ್ ಮಾಡಿ ಕಿರುಕುಳ ನೀಡಿ ಅಲ್ಲಿಂದ ಪರಾರಿಯಾಗುತ್ತಿದ್ದ. ನಿನ್ನೆ ಇದೇ ರೀತಿ ಮಹಿಳೆಯೊಬ್ಬರಿಗೆ ಕಿರುಕುಳ ನೀಡಿ ಪರಾರಿಯಾಗಲು ಯತ್ನಿಸುವಾಗ ಆರೋಪಿಯ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಮಾಹಿತಿ ಪಡೆದ ಪೂರ್ವ ಠಾಣೆ ಪೊಲೀಸರು ಆತನನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದಿದ್ದಾರೆ. ಸಿಸಿಟಿವಿ ದೃಶ್ಯ ಆಧರಿಸಿ ಆರೋಪಿ ಬಂಧನವಾಗಿದ್ದು, ದೂರು ಸಹ ದಾಖಲಾಗಿದೆ.

ಮಂಡ್ಯ, ಮೈಸೂರಿನಲ್ಲಿ ಹೆಣ್ಣು ಭ್ರೂಣ ಪತ್ತೆ, ಹತ್ಯೆ ಪ್ರಕರಣ

ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ: ಸಚಿವ ಚಲುವರಾಯಸ್ವಾಮಿ



ಮಂಡ್ಯ, ನ.30– ಬೆಂಗಳೂರಿನ ಬಯ್ಯಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಭ್ರೂಣ ಹತ್ಯೆಯ ಬಗ್ಗೆ ದಾಖಲಾಗಿರುವ ಪ್ರಕರಣ ತನಿಖಾ ಹಂತದಲ್ಲಿದ್ದು, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಕೇವಲ ಒಂದು ಜಿಲ್ಲೆಗೆ ಸೀಮಿತವಾಗಿಲ್ಲ. ಎರಡು ಮೂರು ಜಿಲ್ಲೆಗೆ ಸೇರಿದೆ. ಸ್ಕ್ಯಾನಿಂಗ್ ಕೆಲಸ ನಡೆದ ಸ್ಥಳಗಳಲ್ಲಿ ಯಾವುದೇ ರೀತಿಯ ಸ್ಕ್ಯಾನಿಂಗ್ ಉಪಯೋಗಿಸುವ ವಸ್ತುಗಳು ದೊರಕಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿಗೆ ವಹಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೆ ಚರ್ಚಿಸಲಾಗುವುದು ಎಂದರು. ಭ್ರೂಣ ಹತ್ಯೆ ತಡೆಗಟ್ಟಲು ಜಿಲ್ಲಾ, ತಾಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಕಂದಾಯ, ಪೊಲೀಸ್, ಮಹಿಳಾ, ಆರೋಗ್ಯ ಇಲಾಖೆ ಸದಸ್ಯರನ್ನೊಳಗೊಂಡ ತಂಡ ರಚಿಸಲಾಗಿದೆ. ಈ ತಂಡಗಳು ನಿರುತರವಾಗಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಡಯಗ್ನೋಸ್ಟಿಕ್ ಸೆಂಟರ್, ಲ್ಯಾಬ್‌ಗಳನ್ನು ಪರಿಶೀಲಿಸಬೇಕು. ಅನಧಿಕೃತ ಲ್ಯಾಬ್, ಪರವಾನಗಿ ಇಲ್ಲದ ವೈದ್ಯರು ಕ್ಲಿನಿಕ್ ನಡೆಸುತ್ತಿದ್ದಲ್ಲಿ ಕ್ರಮ ಕೈಗೊಂಡು ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ಯಾವುದಾದರೂ ಅಪರಿಚಿತ ವ್ಯಕ್ತಿ, ವಾಹನದ ಓಡಾಟ ಕಂಡುಬಂದಲ್ಲಿ ನಿಗಾ ವಹಿಸಿ, ತನಿಖೆ ನಡೆಸಿ ಇದು ನಿರಂತರವಾಗಿ ನಡೆಯಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಮಂಡ್ಯ ಶಾಸಕ ಗಣಿಗ ರವಿಕುಮಾರ್, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳೀಗೌಡ, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸೀಫ್, ಎಸ್ಪಿ ಯತೀಶ್ ಎನ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಹೆಣ್ಣು ಭ್ರೂಣ ಹತ್ಯೆ ದಂಧೆಕೋರರಿಗೆ ಶಿಕ್ಷೆಯಾಗಲಿ: ನಾಗಣ್ಣಗೌಡ

ಮಂಡ್ಯ, ನ.30– ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಮಾಡುವ ಜಾಲ ದೊಡ್ಡ ಮಟ್ಟದಲ್ಲಿ ವಿಸ್ತರಿಸಿದ್ದು, ಸಮಗ್ರ ತನಿಖೆ ನಡೆಸಿ ಇದರ ಮೂಲ ಪತ್ತೆ ಹಚ್ಚಿ ತಪ್ಪಿತಸ್ಥರನ್ನು ಶಿಕ್ಷಿಸಬೇಕು ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಣಕ್ಕಾಗಿ ನಾಗರಿಕ ಸಮಾಜ ತಲೆತಗ್ಗಿಸುವ ಇಂಥ ಕೃತ್ಯವನ್ನು ಮಾಡುವುದು ಕ್ರೂರವಾದ ಸಂಗತಿ, ವಿದ್ಯಾವಂತ ಜನತೆ ಇಂತಹ ಕೃತ್ಯಕ್ಕೆ ಇಳಿದಿರುವುದು ನೋವಿನ ವಿಚಾರವಾಗಿದೆ. ಸಮಾಜದಲ್ಲಿ ಈಗಾಗಲೇ ಹೆಣ್ಣು ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿದ್ದು, ಇಂತಹ ಮಾನವ ವಿರೋಧಿ ಕೃತ್ಯವನ್ನು ಎಲ್ಲರೂ ತಡೆಯಬೇಕಾಗಿದೆ ಎಂದರು. ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿ ಉನ್ನತ ತನಿಖೆ ನಡೆಸುವ ಮೂಲಕ ಆರೋಪಿಗಳನ್ನು ಪತ್ತೆಹಚ್ಚಬೇಕು. ಆರೋಗ್ಯ ಇಲಾಖೆ ಮುನ್ನೆಚ್ಚರಿಕೆ ವಹಿಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಸುತ್ತಮುತ್ತಲ ಪ್ರದೇಶದಲ್ಲಿ ಯಾವ್ಯಾವ ಚಟುವಟಿಕೆ ನಡೆಯುತ್ತಿದೆ ಎಂಬುದರ ಬಗ್ಗೆ ಗಮನಹರಿಸಬೇಕು. ಸುತ್ತಲು ಬೆಳೆ ಇರುವ ಜಮೀನು ಮಧ್ಯ ಭಾಗದ ಆಲೆಮನೆಯ ಕೊಠಡಿಯಲ್ಲಿ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಮಾಡುವ ಜಾಲ ಬೇರೂರಿದೆ. ಹೆಣ್ಣು ಭ್ರೂಣ ಹತ್ಯೆ ಮಾಡುವುದು ಘೋರ ಅಪರಾಧ. ಕರಾಳ ದಂಧೆಯಲ್ಲಿ ಭಾಗಿಯಾಗಿರುವ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮವಾಗಬೇಕು ಎಂದು ಹೇಳಿದರು.

ಕನಕದಾಸರು ಜಾತಿ ವ್ಯವಸ್ಥೆ ವಿರುದ್ಧ ಧ್ವನಿಯಾಗಿದ್ದರು



ಹೆಚ್.ಡಿ.ಕೋಟೆ, ನ.30– ಕೀರ್ತನೆಗಳ ಮೂಲಕ ಸಮಾಜದ ಕಣ್ಣು ತೆರೆಸಿದ್ದ ಕನಕದಾಸರು ಜಾತಿ ವ್ಯವಸ್ಥೆ ವಿರುದ್ಧ ಧ್ವನಿಯಾಗಿದ್ದರು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧದ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಶ್ರೀ ಭಕ್ತ ಕನಕದಾಸರ 536ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನಕದಾಸರ ಭಕ್ತಿ ಮೆಚ್ಚಿ ಶ್ರೀ ಕೃಷ್ಣ ದರ್ಶನ ನೀಡಿದ ಎಂದು ನಾವು ಕಥೆಗಳನ್ನು ಆಲಿಸಿದ್ದೇವೆ, ಆದರೆ ಇತ್ತೀಚಿನ ದಿನಗಳಲ್ಲಿ ಕನಕನಿಗೆ ಕೃಷ್ಣ ದರ್ಶನ ನೀಡಿಲ್ಲ ಎಂದು ಹೇಳುತ್ತಿರುವುದು ನಮ್ಮ ಧರ್ಮಕ್ಕೆ ಧಕ್ಕೆಯನ್ನು ತರುತ್ತದೆ. ಧರ್ಮಕ್ಕಿಂತ ಇಲ್ಲಿ ಯಾವುದು ಸಹ ದೊಡ್ಡದಲ್ಲ, ಆದ್ದರಿಂದ ನಾನು ನಂಬಿದ ಧರ್ಮವನ್ನು ಮುಂದುವರಿಸಿಕೊಂಡು ಹೋಗೋಣ ಎಂದರು.

ಐದು ಜಿಲ್ಲೆಗೆ ಮಾದರಿಯಾಗಿ ಪಟ್ಟಣದಲ್ಲಿ ಕನಕ ಭವನವನ್ನು ನಿರ್ಮಿಸಲಾಗಿದೆ. ಸಮಾಜದವರು ಅವರ ಪ್ರತಿಮೆ ನಿರ್ಮಾಣಕ್ಕೆ ಮನವಿ ಮಾಡಿದ್ದಾರೆ, ಮುಂದಿನ ದಿನಗಳಲ್ಲಿ ಅದನ್ನು ನೆರವೇರಿಸಲಾಗುವುದು ಎಂದ ಅವರು, ಈ ದಿನ ತಾಲೂಕು ಆಡಳಿತದ ವತಿಯಿಂದ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಸರಳವಾಗಿ ಅರ್ಥಪೂರ್ಣವಾಗಿ ಆಚರಣೆ ಮಾಡುತ್ತಿದ್ದು ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳನ್ನು ತಾಲೂಕಿಗೆ ಕರೆಯಿಸಿ ಅದ್ಧೂರಿಯಾಗಿ ಕಾರ್ಯಕ್ರಮ ಮಾಡೋಣ ಎಂದರು.

ಉಪನ್ಯಾಸಕ ಮಹೇಶ್ ಮಾತನಾಡಿ, ಕೀರ್ತನೆಗಳ ಅಶ್ವಿನಿ ದೇವತೆಗಳೆಂದು ಕನಕದಾಸರು ಮತ್ತು ಪುರಂದರದಾಸರುಗಳನ್ನು ಕರೆಯುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ತಹಶಿಲ್ದಾರ್ ಶ್ರೀನಿವಾಸ್, ಗ್ರೇಡ್ 2 ತಹಶಿಲ್ದಾರ್ ಸಣ್ಣರಾಮಪ್ಪ ಇಓ ಧರಣೀಶ್, ಬಿಇಓ ಮಾರಯ್ಯ, ಡಾ.ಟಿ. ರವಿಕುಮಾರ್, ಎಇಇ ರಾಮೇಗೌಡ, ಗೋವಿಂದನಾಯಕ, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಆನಂದ ಮೊಳೆಯೂರು, ಮುಖಂಡರಾದ ಜಯರಾಮೇಗೌಡ, ಎಚ್.ಸಿ.ಮಂಜುನಾಥ್, ಕ್ಯಾತನಹಳ್ಳಿ ನಾಗರಾಜು, ರಾಜೇಗೌಡ, ಮಾಲೇಗೌಡ, ಅಕ್ಬರ್ ಪಾಷ, ಜಿವಿಕ ಬಸವರಾಜು, ಪರಶಿವಮೂರ್ತಿ, ಯತೀಶ್ ಸಿಂಡೇನಹಳ್ಳಿ, ಶಿವಮಲ್ಲು, ಅಶೋಕ್, ಕೊಮಾರೇಗೌಡ, ಮಲ್ಲೇಶ್, ಬೀರೇಗೌಡ, ಸೋಮಚಾರಿ, ಮಹಾದೇವಯ್ಯ, ಅನುಷಾ, ಶೈಲ, ಸುಗುಣ, ಕೃಷ್ಣೆಗೌಡ, ಸಮಾಜದ ಮುಖಂಡರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಮ ಸಮಾಜ ನಿರ್ಮಾಣಕ್ಕೆ ಕನಕದಾಸರ ಕೊಡುಗೆ ಅಪಾರ



ಹುಣಸೂರು, ನ.30– ಶತ–ಶತಮಾನಗಳ ಹಿಂದೆ ಸಮಾಜದಲ್ಲಿದ್ದ ಜಾತಿ ವ್ಯವಸ್ಥೆ ಮತ್ತು ಅಸಮಾನತೆಯ ವಿರುದ್ಧ ಧ್ವನಿ ಎತ್ತುವ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಕನಕದಾಸರ ಕೊಡುಗೆ ಬಹು ದೊಡ್ಡದೆಂದು ಮಾಜಿ ಸಚಿವ ಸಿ.ಎಚ್. ವಿಜಯಶಂಕರ್ ತಿಳಿಸಿದರು.

ನಗರದ ಕನಕ ಭವನದಲ್ಲಿ ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ವತಿಯಿಂದ ಆಯೋಜಿಸಿದ್ದ 536ನೇ ಕನಕ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶತಮಾನಗಳ ಹಿಂದೆ ಸಮಾಜದಲ್ಲಿದ್ದ ಅಸಮಾನತೆ, ಜಾತಿ, ಧರ್ಮ, ಮತ, ಕುಲಗಳ ಭೇದಭಾವವನ್ನು ಹೋಗಲಾಡಿಸಿ ಸಾಮಾಜಿಕ ಪಿಡುಗುಗಳ ಬಗ್ಗೆ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಕೀರ್ತನೆಗಳನ್ನು ಬರೆದು ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದು ದಾಸಶ್ರೇಷ್ಠರಲ್ಲಿ ಅಗ್ರಗಣ್ಯ ದಾಸರಾದರು. ಕನಕದಾಸರು ಮನುಕುಲದ ಉದ್ಧಾರಕ್ಕಾಗಿ ನೀಡಿದ ಕೊಡುಗೆ ಅಪಾರ, ಅವರ ಆದರ್ಶಗಳು ಮನುಕುಲಕ್ಕೆ ದಾರಿದೀಪವಾಗಿವೆ. ಕುಲ ಕುಲವೆಂದು ಹೊಡೆದಾಡದಿರಿ. ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂದು ಹೇಳುವುದರ ಮೂಲಕ ಜನರಲ್ಲಿರುವ ಮೌಢ್ಯತೆಗಳನ್ನು ಖಂಡಿಸಿ, ಸಮಾನತೆಯ ಹರಿಕಾರರಾಗಿದ್ದಾರೆ ಎಂದು ಬಣ್ಣಿಸಿದರು.

ಸಭೆಯಲ್ಲಿ ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಕೆ. ಕುನ್ನೇಗೌಡ, ರಾಜ್ಯ ಕುರುಬರ ಸಂಘದ ನಿರ್ದೇಶಕ ಬಿಳಿಗೆರೆ ಮಾದೇಗೌಡ, ಸಮಾಜದ ಹಿರಿಯ ಮುಖಂಡ ಎ.ಪಿ.ಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿಇಒ ಎಸ್.ರೇವಣ್ಣ, ಸಂಘದ ಗೌರವ ಅಧ್ಯಕ್ಷ ರಾಮೇಗೌಡ, ಪ್ರಧಾನ ಕಾರ್ಯದರ್ಶಿ ವಾಸೇಗೌಡ, ಭರತ್ ಕುಮಾರ್, ಕಾರ್ಯದರ್ಶಿ ನರಸಿಂಹ, ಖಜಾಂಚಿ ಗಣೇಶ್‌ಕುಮಾರಸ್ವಾಮಿ, ನಗರಸಭಾ ಸದಸ್ಯರಾದ ಸ್ವಾಮಿಗೌಡ, ಹರೀಶ್, ಸಂಘದ ನಿರ್ದೇಶಕರಾದ ಕಂಬಳಿ ಜಯರಾಂ, ಡೇರಿ ಈಶ್ವರ್, ಬಸವರಾಜೇಗೌಡ, ಕಾಯಿ ಶೇಖರ್, ಪ್ರಭಾಕರ ಹೆಗ್ಗಡೆ, ಜಟ್ಟಿಗೌಡ, ಜಿಲ್ಲಾ ಸಂಘದ ಉಪಾಧ್ಯಕ್ಷರಾದ ಬಸವರಾಜೇಗೌಡ, ಕುಪ್ಪುಸ್ವಾಮಿ, ಕನಕ ನೌಕರರ ಸಂಘದ ಮಾಜಿ ಅಧ್ಯಕ್ಷ ಚಂದ್ರೇಗೌಡ, ಮುಖಂಡರಾದ, ಗಣಪತಿ, ರವಿ ಪ್ರಸನ್ನ, ಉಂಡಿಮಾಳ ಸುರೇಶ್, ಡಾ.ಭರತಕುಮಾರ್, ಶಾಂತರಮೇಶ್, ಅಶೋಕ್, ಕಚುವಿನಹಳ್ಳಿ ಲೋಕೇಶ್, ಕಣಗಾಲ್ ಮಲ್ಲೇಶ್, ರಾಜಣ್ಣ, ಚಂದ್ರೇಗೌಡ, ಉದ್ದೂರು ಮಹೇಶ್ ಸೇರಿದಂತೆ ಅನೇಕರಿದ್ದರು.

ಜಮೀನು ವಿವಾದ: ಅಣ್ಣನ ಕುಟುಂಬದಿಂದ ತಮ್ಮನ ಕೊಲೆ

ನಂಜನಗೂಡು : ಜಮೀನು ವಿಚಾರವಾಗಿ ಅಣ್ಣ– ತಮ್ಮನ ನಡುವೆ ನಡೆದ ಗಲಾಟೆ ವಿಕೋಪಕ್ಕೆ ತಿರುಗಿ, ತಮ್ಮನ ಕೊಲೆಯೊಂದಿಗೆ ಅಂತ್ಯವಾಗಿರುವ ಘಟನೆ ತಾಲೂಕಿನ ಕವಲಂದೆ ಹೋಬಳಿಯ ಮರಳ್ಳಿಪುರ ಗ್ರಾಮದಲ್ಲಿ ನಡೆದಿದೆ.

ಮಚ್ಚಿನ ಏಟಿಗೆ ತೀವ್ರವಾಗಿ ಗಾಯಗೊಂಡಿದ್ದ ಗ್ರಾಮದ ಪರಶಿವಪ್ಪ(65) ಮೃತಪಟ್ಟಿದ್ದಾರೆ. ಜಮೀನಿನ ವಿಚಾರವಾಗಿ ಸಹೋದರರಾದ ಪರಶಿವಪ್ಪ ಹಾಗೂ ಪ್ರಭುಸ್ವಾಮಿ ನಡುವೆ ಗ್ರಾಮದಲ್ಲಿ ಬುಧವಾರ ರಾತ್ರಿ ಗಲಾಟೆ ನಡೆದಿತ್ತು, ಈ ವೇಳೆ ಪ್ರಭುಸ್ವಾಮಿ ಮಗ ಆದೀಶ್ ಚಿಕ್ಕಪ್ಪ ಪರಶಿವಪ್ಪನ ಕಣ್ಣಿಗೆ ಮಣ್ಣು ಎರಚಿ ಮಚ್ಚಿನಿಂದ ಹಲ್ಲೆ ನಡೆಸಿದ. ತೀವ್ರವಾಗಿ ಗಾಯಗೊಂಡಿದ್ದ ಪರಶಿವಪ್ಪನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು, ಆದರೆ ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಮಧ್ಯರಾತ್ರಿ ಪರಶಿವಪ್ಪ ಮೃತಪಟ್ಟಿದ್ದಾರೆ.

ಆರೋಪಿಗಳಾದ ಪ್ರಭುಸ್ವಾಮಿ ಹಾಗೂ ಆದೀಶ್ ತಲೆಮರೆಸಿಕೊಂಡಿದ್ದಾರೆ.

ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಸ್ಥಳಕ್ಕೆ ಕವಲಂದೆ ಪೊಲೀಸ್ ಠಾಣೆಯ ಪಿಎಸ್‌ಐ ಲಕ್ಷ್ಮಿಕಾಂತ ಕೋಳಿ, ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿಗಳ ಪತ್ತೆಗಾಗಿ ಕ್ರಮವಹಿಸಲಾಗಿದೆ ಎಂದು ಕವಲಂದೆ ಪಿ.ಎಸ್.ಐ ಕೃಷ್ಣಕಾಂತ್ ಕೋಳಿ ತಿಳಿಸಿದರು.



ಕಾರ್ತಿಕ ಮಾಸದ ಅಂಗವಾಗಿ ಸೋಮವಾರ ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ಹೂವಿನ ಸೀರೆ ಅಲಂಕಾರದ ಜೊತೆಗೆ ವಿಶೇಷ ಪೂಜೆಯನ್ನು ಅರ್ಚಕ ವೃಂದ ಸಾಂಘಿಕವಾಗಿ ನೆರವೇರಿಸಿತು. ಸಾವಿರಾರು ಭಕ್ತರು ಅಮ್ಮನವರ ದರ್ಶನ ಪಡೆದು ನಮಿಸಿದರು. ಸೇವಾರ್ಥದಾರರಿಂದ ದೇವಾಲಯದ ಆವರಣದಲ್ಲಿ ಪ್ರಸಾದ ವಿನಿಯೋಗ ನಡೆಯಿತು.

ತಿ.ನರಸೀಪುರದಲ್ಲಿ ಕನಕ ಜಯಂತಿ ಆಚರಣೆ



ತಿ.ನರಸೀಪುರ, ನ.30– ಗುರುಗಳು ನೀಡಿದ ಬಾಳೆಹಣ್ಣನ್ನು ತಿನ್ನದೆ ಎಲ್ಲೆಡೆ ಭಗವಂತನಿದ್ದಾನೆ ಎಂಬ ಸಂದೇಶವನ್ನು ಕನಕದಾಸರು ಸಾರಿದ್ದಾರೆ ಎಂದು ತಿಳಿಸಿದ ಕೆಡಿಪಿ ಸದಸ್ಯ ಸುನಿಲ್ ಬೋಸ್, ಕನಕದಾಸರು ಮನುಷ್ಯ ಅಹಂಕಾರದಿಂದ ಬದುಕಬಾರದು, ಅಹಂ ಬಿಟ್ಟರೆ ಯಾರು ಬೇಕಾದರೂ ನೆಮ್ಮದಿಯ ಬದುಕು ಕಾಣಬಹುದು ಎಂದಿದ್ದಾರೆ. ನಾವು ನಮ್ಮ ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕು. ಮನುಷ್ಯತ್ವದಿಂದ ಬದುಕಬೇಕು ಎಂಬುದನ್ನು ತೋರಿಸಿದ್ದಾರೆ ಎಂದಿದ್ದಾರೆ.

ಪಟ್ಟಣದ ಮರೀಗೌಡ ಸ್ಮಾರಕ ಭವನದ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಕುರುಬರ ಸಂಘದ ಸಹಯೋಗದಲ್ಲಿ ನಡೆದ 536ನೇ ಕನಕದಾಸರ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.


ಬುದ್ಧ ಬಸವಣ್ಣನವರಂತೆ ಕನಕದಾಸರು ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿದರು. ಸಮಾನತೆಯ ಸಂದೇಶ ಸಾರಿದರು. ಅಂಬೇಡ್ಕರ್ ಕೂಡ ಜಾತೀಯ ವ್ಯವಸ್ಥೆ ದೂರ ಮಾಡಿ ಜಾತ್ಯತೀತ ಸಮಾನತೆಯ ಬದುಕಿಗಾಗಿ ಸಂವಿಧಾನ ತಂದರು. ನಾವೆಲ್ಲರೂ ಜಾತ್ಯಾತೀತವಾಗಿ ಬದುಕುವಂತಾಗಬೇಕು ಎಂದರು.

ವರುಣಾ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ. ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸಮಾನತೆಯ ಸಂದೇಶ ಸಾರಿದ ಕನಕದಾಸರ ಆದರ್ಶ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತೆ ಹೇಳಿದರು.

ನಿವೃತ್ತ ಪ್ರಾಂಶುಪಾಲ ಕೆಂಪರಾಜು ಅವರು ಪ್ರಧಾನ ಭಾಷಣ ಮಾಡಿ ಕನಕರ ಜೀವನ ಚರಿತ್ರೆಯ ಬಗ್ಗೆ ತಿಳಿಸಿದರು. ಇದಕ್ಕೂ ಮುನ್ನಾ ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಾಲಯದಿಂದ ವೇದಿಕೆಯ ವರಿಗೆ ಪಟ್ಟಣದ ಮಾರುಕಟ್ಟೆ ರಸ್ತೆ, ಲಿಂಕ್ ರಸ್ತೆ, ಕಾಲೇಜು ರಸ್ತೆ ಮಾರ್ಗವಾಗಿ ವಿವಿಧ ಕಲಾ ತಂಡಗಳ ಜತೆ ಕನಕರ ಪ್ರತಿಮೆಯನ್ನು ಮೆರವಣಿಗೆ ಮಾಡಲಾಯಿತು

ಕಾರ್ಯಕ್ರಮದಲ್ಲಿ ಲಕ್ಷ್ಮೀ ವೆಂಕಟರಮಣ ದೇವಾಲಯದ ದೊರೆಸ್ವಾಮೀಜಿ,ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆ ಹುಂಡಿ ಮಹೇಶ್, ಕಾರ್ಯದರ್ಶಿ ಬಸವರಾಜು, ದೊಡ್ಡಬಾಗಿಲು ಎಂ ಮಲ್ಲಿಕಾರ್ಜುನ ಸ್ವಾಮಿ, ತುಂಬಲ ಬಾಬು, ಪುರಸಭಾ ಮಾಜಿ ಅಧ್ಯಕ್ಷ ರಾಧಾ ಟಿ.ಎಂ.ನಂಜುಂಡಸ್ವಾಮಿ, ಎನ್.ಸೋಮು, ಜಿ.ಪಂ. ಮಾಜಿ ಸದಸ್ಯ ಎಂ.ಆರ್. ಸೋಮಣ್ಣ, ಉಕ್ಕಲಗೆರೆ ಬಸವಣ್ಣ, ಮನ್ಸೂರ್ ಆಲಿ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರುಹಟ್ಟಿ ಮಹದೇವಯ್ಯ, ಕೂಡ್ಲೂರು ದೇವರಾಜು, ಎಂ.ಕೆ. ಸಹದೇವ, ತಾ.ಪಂ ಮಾಜಿ. ಅಧ್ಯಕ್ಷ ರಮೇಶ್ ತುಂಬಲ ಅಧ್ಯಕ್ಷ ರಾಮನಂಜಯ, ತಹಶೀಲ್ದಾರ್ ಸುರೇಶಾಚಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸಿ.ಕೃಷ್ಣ, ಕುಪ್ಪ ಭಾಗ್ಯಮ್ಮ,ಬಸವಣ್ಣ, ಮುದ್ದಬೀರಿನಹುಂಡಿ ಗುರುಸ್ವಾಮಿ, ತುಂಬಲ ಪ್ರಕಾಶ್, ಬಾದಾಮಿ ಮಂಜು ವಾಟಾಳು ನಾಗೇಶ್, ಅಕ್ಕೂರು ಗುರುಮೂರ್ತಿ, ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ನಾಯಕ ಸಂಘದ ಅಧ್ಯಕ್ಷ ಚಿಕ್ಕಣ್ಣ, ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ವಿದ್ಯಾನಗರ ಸ್ವಾಮಿ, ಗುತ್ತಿಗೆದಾರರಾದ ಹೊಸಪುರ ಮಲ್ಲು, ಡೈರಿ ಅಧ್ಯಕ್ಷ ಮಂಟೇಲಿಂಗಪ್ಪ ಮಾದೇಶ್, ಹುಣಸೂರು ಬಸವಣ್ಣ, ಎ.ಬಿ. ಮಂಜುನಾಥ್ ಇತರರು ಹಾಜರಿದ್ದರು.

ನಾನು ಲೋಕಸಭಾ ಕ್ಷೇತ್ರದ ಆಕಾಂಕ್ಷಿಯಲ್ಲ



ನಂಜನಗೂಡು, ನ.30– ಸಮಾಜ ಕಲ್ಯಾಣ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಾಲೂಕಿನ ಮಲ್ಲನ ಮೂಲೆಯ ಗುರುಕಂಬಳೀಶ್ವರ ಮಠಕ್ಕೆ ಭೇಟಿ ನೀಡಿ ಮಠಾಧೀಶರಾದ ಚೆನ್ನಬಸವ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಬಳಿಕ ಸುದ್ದಿಗಾರರೊಂದಿಗೆ ಮಾತಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬ ಊಹಾಪೋಹಗಳು ಶುದ್ಧ ಸುಳ್ಳು. ನಾನು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯ ಆಕಾಂಕ್ಷಿಯಲ್ಲ, ಕ್ಷೇತ್ರದಿಂದ ಬಹಳಷ್ಟು ಮಂದಿ ಆಕಾಂಕ್ಷಿಗಳಿದ್ದಾರೆ ಅವರಲ್ಲಿ ಸುನೀಲ್‌ಬೋಸ್ ಕೂಡ ಪ್ರಬಲ ಆಕಾಂಕ್ಷಿಯಾಗಿದ್ದಾರೆ ಎಂದರು.

ಪಕ್ಷದ ವರಿಷ್ಠರು ಶಾಸಕರು, ಕಾರ್ಯಕರ್ತರ, ಜನರ ಅಭಿಪ್ರಾಯವನ್ನು ಸಂಗ್ರಹಿಸಿ ಗೆಲ್ಲುವ ಅಭ್ಯರ್ಥಿ ಯಾರು, ಯಾರಿಗೆ ಜನಬಲವಿದೆ, ಗೆಲ್ಲುವ ಸಾಮರ್ಥ್ಯ ಯಾರಿಗೆ ಅಧಿಕವಾಗಿದೆ ಕಾರ್ಯಕರ್ತರ ಒಲವು ಹೆಚ್ಚಿದೆ ಎಂಬುದರ ಬಗ್ಗೆ ಸರ್ವೆ ನಡೆಸಿ ಅಭ್ಯರ್ಥಿಯನ್ನು ಆಯ್ಕೆ ಮಾಡಲಿದ್ದಾರೆ ಎಂದರು.

ನಂಜನಗೂಡು ಉಪ ಚುನಾವಣೆಯ ಸಂಧರ್ಭದಲ್ಲಿ ಪಕ್ಷವನ್ನು ಸಂಘಟಿಸಿದ್ದ ಕಾರಣ ಸುನೀಲ್‌ಬೋಸ್ ಅವರನ್ನೇ ಸ್ಪರ್ಧಿಸುವಂತೆ ಇಲ್ಲಿನ ಕಾರ್ಯಕರ್ತರು ಒತ್ತಡ ಹೇರಿದ್ದರು. ಮುಖ್ಯಮಂತ್ರಿಗಳೂ ಕೂಡ ಸಮ್ಮತಿ ಸೂಚಿಸಿದ್ದರು. ಆದರೆ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅವರಿಗೆ ಟಿಕೆಟ್ ಸಿಗಲಿಲ್ಲ, ಆದರೂ ಕೂಡ ಸ್ವಲ್ಪವೂ ಬೇಜಾರು ಮಾಡಿಕೊಳ್ಳದೆ ಪಕ್ಷವನ್ನು ಸಂಘಟಿಸಿ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಿದ್ದಾರೆ ಎಂದರು.

ನಂತರ ಸಾರ್ವತ್ರಿಕ ಚುನಾವಣೆಯಲ್ಲೂ ಕೂಡ ಅವರನ್ನೇ ಅಭ್ಯರ್ಥಿ ಎಂದು ಬಿಂಬಿಸಲಾಗಿತ್ತು ಆಗಲೂ ಕೂಡ ಟಿಕೇಟ್ ದೊರೆಯಲಿಲ್ಲ, ಆದರೂ ಕೂಡ ಅವರು ಪಕ್ಷದ ಸಂಘಟನೆಯಲ್ಲಿ ತೊಡಗಿ, ದುಡಿಯುವ ಮೂಲಕ ಪಕ್ಷ ನಿಷ್ಠೆ ತೋರಿದ್ದಾರೆ. ಈ ಬಾರಿ ಅವರೂ ಕೂಡ ಕ್ಷೇತ್ರದಿಂದ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ಈ ಬಾರಿ ಅವರಿಗೆ ವರಿಷ್ಠರು ಗ್ರೀನ್ ಸಿಗ್ನಲ್ ಕೊಡುವ ಸೂಚನೆಯಿದ್ದು ಟಿಕೆಟ್ ದೊರಕುವ ವಿಶ್ವಾಸವಿದೆ ಎಂದರು.

ಇದೇ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ದೇವನೂರು ಬುಲೆಟ್ ಮಹದೇವಪ್ಪ, ಪ್ರಮುಖರಿದ್ದರು.

ಬ್ರಾಹ್ಮಣವಾದ ವಿರೋಧಿಸಬೇಕೆ ಹೊರತು, ಬ್ರಾಹ್ಮಣ ಜಾತಿಯನ್ನಲ್ಲ

ಕನಕದಾಸರ ಜಯಂತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಕಿವಿಮಾತು

■ ಕನಕದಾಸರು ಒಂದು ಜಾತಿಗೆ ಸೀಮಿತವಲ್ಲ ■ ಸಮಾಜ ಸುಧಾರಕರು ಎಲ್ಲರ ಆಸ್ತಿಯೂ ಹೌದು ■ ಅಂಬೇಡ್ಕರ್, ನಿಜಲಿಂಗಪ್ಪ ಭೇಟಿ ಸಂಗತಿಯ ಮಹತ್ವ ■ ಮೋದಿ ಸಂವಿಧಾನಕ್ಕೆ ಕೈ ಮುಗಿದರೆ, ಅವರ ತಂಡ ಬದಲಾಯಿಸಲೆತ್ನಿಸುತ್ತೆ



ಮೈಸೂರು, ನ.30(ಬಿಎಲ್‌ಯು)– ಬ್ರಾಹ್ಮಣ ಜಾತಿಯನ್ನು ವಿರೋಧ ಮಾಡಬಾರದು, ಆದರೆ ಬ್ರಾಹ್ಮಣವಾದವನ್ನು ವಿರೋಧಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು. ಮೈಸೂರಿನ ಕಲಾಮಂದಿರದಲ್ಲಿ ಇಂದು ಜಿಲ್ಲಾಡಳಿತ ಆಯೋಜಿಸಿದ್ದ ಶ್ರೀ ಕನಕದಾಸರ 536 ನೇ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾವು ಯಾವತ್ತೂ ಬ್ರಾಹ್ಮಣ ಜಾತಿಯ ವಿರೋಧಿಗಳಲ್ಲ, ಆದರೆ ಬ್ರಾಹ್ಮಣವಾದದ ವಿರೋಧಿಗಳು ಎಂದು ಸ್ಪಷ್ಟಪಡಿಸಿದರು.

ಮೇಲು ವರ್ಗದಲ್ಲಿ ಕೂಡ ಬಹಳಷ್ಟು ಸಮಾಜ ಸುಧಾರಕರಿದ್ದಾರೆ. ತಾವು ಕಂಡ ಜಾತಿ ವ್ಯವಸ್ಥೆಯ ವಿರುದ್ಧ ಮೇಲು ವರ್ಗದ ಸಮಾಜ ಸುಧಾರಕರು ದನಿ ಎತ್ತಿರುವ ಬಹಳಷ್ಟು ನಿದರ್ಶನಗಳಿವೆ. ಆದ ಕಾರಣ ನಾವು ಬ್ರಾಹ್ಮಣ ಜಾತಿಯ ವಿರೋಧಿಗಳಲ್ಲ, ಆದರೆ ಬ್ರಾಹ್ಮಣವಾದದ ವಿರೋಧಿಗಳು ಎಂದು ಪುನರ್ ಸ್ಪಷ್ಟನೆ ನೀಡಿದರು.

ಕನಕದಾಸರು, ಮಡಿವಾಳ ಮಾಚಯ್ಯ ಸೇರಿದಂತೆ ಬಹಳಷ್ಟು ಸಮಾಜ ಸುಧಾರಕರು ಜಾತ್ಯಾತೀತವಾದಿಗಳಾಗಿದ್ದರು. ಕನ್ನಡ ವಚನ ಚಳವಳಿ ಮೂಲಕ ಭಿನ್ನಾಭಿಪ್ರಾಯ ತೊಡೆದು ಹಾಕಲು ಯತ್ನಿಸಿದರು. ಇದರಿಂದ ಇವರನ್ನು ಒಂದು ಜಾತಿಗೆ ಸೀಮಿತಗೊಳಿಸಿ ಮತಕ್ಕಾಗಿ ಆಚರಣೆ ಮಾಡಬಾರದು ಎಂದು ಸಲಹೆ ನೀಡಿದರು.

ಡಾ.ಅಂಬೇಡ್ಕರ್–ನಿಜಲಿಂಗಪ್ಪ ಪ್ರಸಂಗ: ಒಂದು ಬಾರಿ ದಿವಂಗತ ಮಾಜಿ ಮುಖ್ಯ ಮಂತ್ರಿ ನಿಜಲಿಂಗಪ್ಪ ಅವರು ಡಾ.ಅಂಬೇಡ್ಕರ್ ಅವರನ್ನು ಭೇಟಿ ಮಾಡಿದ ಸಂದರ್ಭವನ್ನು ಉಲ್ಲೇಖಿಸಿದ ಡಾ.ಮಹದೇವಪ್ಪ, ನೀವು ಕೆಟ್ಟವರು ಎಂದು ನಿಜಲಿಂಗಪ್ಪಗೆ ಅಂಬೇಡ್ಕರ್ ಹೇಳಿದರು. ಇದರಿಂದ ಆಘಾತಗೊಂಡ ನಿಜಲಿಂಗಪ್ಪ ಕಾರಣ ಕೇಳಿದರು. ಬಸವಣ್ಣನವರನ್ನು ನೀವು ಬೀದಿಗೆ ಬಿಡದೆ ಜೇಬಿನಲ್ಲಿಟ್ಟುಕೊಂಡಿದ್ದೀರಲ್ಲ ಇದು ಸರಿಯೇ?, ಬಸವಣ್ಣನವರನ್ನು ನಿಮ್ಮಲ್ಲೆ ಇಟ್ಟುಕೊಂಡರೆ ಸಾಮಾಜಿಕ ಸಂದೇಶ ಪಸರಿಸುವುದು ಹೇಗೆ ಎಂದು ಪ್ರಶ್ನಿಸಿದ್ದರು ಎಂಬ ಸಂಗತಿಯನ್ನು ಡಾ.ಮಹದೇವಪ್ಪ ವಿವರಿಸಿದರು.

ಎಲ್ಲರೂ ತಾಯಿ ಗರ್ಭದಿಂದ ಬರುತ್ತೇವೆ. ಆದರೆ ಜಾತಿಗೆ ಏಕೆ ಸೀಮಿತಗೊಳಿಸುತ್ತೀರಾ ಎಂಬ ಮಾತು ಮಹತ್ವದ್ದಾಗಿದೆ. ಇಂತಹ ಸಂದೇಶ ಸಾರಿದ ಕನಕದಾಸರು ಕೆಳವರ್ಗದಿಂದ ಬಂದು ಈಗ ಹಿಮಾಲಯದೆತ್ತರದ ಶಿಖರದಲ್ಲಿದ್ದಾರೆ ಎಂದರು. ಅಸ್ಪೃಶ್ಯತೆ ವಿರುದ್ಧ ಗಟ್ಟಿದನಿ ಎತ್ತಿದ ಕನಕದಾಸರು ಸಮಾಜದ ಎಲ್ಲರ ಆಸ್ತಿ. ಆದರೆ ಇಂತಹವರನ್ನು ಒಂದು ಜಾತಿಗೆ ಬಂಧಿ ಮಾಡಿದರೆ ನಮಗೆ ನಾವೇ ಅವನತಿಯತ್ತ ಸಾಗುತ್ತೇವೆ ಎಂದು ಡಾ.ಮಹದೇವಪ್ಪ ಎಚ್ಚರಿಸಿದರು.

ಕನಕದಾಸ ಜಯಂತಿಯನ್ನು ಕುರುಬ ಸಮುದಾಯ, ಅಂಬೇಡ್ಕರ್ ಜಯಂತಿಯನ್ನು ದಲಿತ ಸಮುದಾಯ, ಬಸವ ಜಯಂತಿಯನ್ನು ಲಿಂಗಾಯಿತ ಸಮುದಾಯ, ವಾಲ್ಮೀಕಿ ಜಯಂತಿಯನ್ನು ನಾಯಕ ಸಮುದಾಯದವರು ಮಾತ್ರ ಆಚರಣೆ ಮಾಡದೆ, ಸಮಾಜದ ಎಲ್ಲರ ಆಸ್ತಿಯಾಗಿರುವ ಸಮಾಜ ಸುಧಾಕರ ಜಯಂತಿಯನ್ನು ಎಲ್ಲರೂ ಆಚರಣೆ ಮಾಡಬೇಕು. ಯಾವುದೇ ಒಂದು ಜಾತಿಗೆ ಸೀಮಿತಗೊಳಿಸಬಾರದು. ಹಾಗೆ ಮಾಡಿದರೆ ಅದು ಅವರಿಗೆ ಅಪಮಾನ ಮಾಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಂವಿಧಾನಕ್ಕೆ ಕೈ ಮುಗಿಯುತ್ತಾರೆ, ಸಂವಿಧಾನವನ್ನು ಗೌರವಿಸುತ್ತಾರೆ. ಆದರೆ ಅವರ ತಂಡದವರು ಸಂವಿಧಾನವನ್ನೇ ಬದಲಾವಣೆ ಮಾಡಲು ಮುಂದಾಗುತ್ತಾರೆ ಎಂದು ಡಾ.ಮಹದೇವಪ್ಪ ದೂರಿದರು.

ಕನಕದಾಸರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು. ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ಕನಕದಾಸರ ಇತಿಹಾಸ ಹಾಗೂ ಪೌರಾಣಿಕ ಸಂಗತಿಗಳ ಬಗ್ಗೆ ಮಾತನಾಡಿದರು. ಈ ವೇಳೆ ಕನಕದಾಸರ ಪದಗಳನ್ನು ಹಾಡಲಾಯಿತು. ವಿಧಾನ ಸಭಾ ಸದಸ್ಯ ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಮರಿತಿಬ್ಬೇಗೌಡ, ಡಾ.ತಿಮ್ಮಯ್ಯ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿಶ್ವನಾಥರನ್ನು ಇಎನ್‌ಟಿ ಸರ್ಜನ್‌ಗೆ ತೋರಿಸಬೇಕು....

ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ವಿಪರೀತ ಮಾತನಾಡಿ ಕೆಟ್ಟವರಾಗುತ್ತಾರೆ. ವಿಶ್ವನಾಥ್ ಒಳ್ಳೆಯ ವ್ಯಕ್ತಿ ಆದರೆ ಸುಮ್ಮನಿರುವುದಿಲ್ಲ. ಯಾವಾಗಲೂ ಮಾತನಾಡುತ್ತಿರುತ್ತಾರೆ. ಅದೂ ವಿಪರೀತ ಮಾತನಾಡಿ ಕೆಡುತ್ತಾರೆ ಎಂದರು. ನಾವು ಇವರಂತೆ ಮಾತನಾಡದೆ ವಿಚಾರಗಳನ್ನು ಅದುಮಿಟ್ಟುಕೊಳ್ಳುತ್ತೇವೆ. ಆದರೆ ವಿಶ್ವನಾಥ್ ಹಾಗಲ್ಲ. ಎಲ್ಲಾ ವಿಚಾರಗಳನ್ನು ಹೇಳಿ ಬಿಡುತ್ತಾರೆ. ಅವರನ್ನು ಒಂದು ಬಾರಿ ಇಎನ್‌ಟಿ ಸರ್ಜನ್‌ಗೆ ತೋರಿಸಬೇಕಿದೆ ಎಂದು ಡಾ.ಮಹದೇವಪ್ಪ ವಿಡಂಬನಾತ್ಮಕವಾಗಿ ಹೇಳಿದರು.

ಸೂರ್ಯ, ಚಂದ್ರ ನಾನೇಳಿದ ಮೇಲೆ ಹುಟ್ಟುವುದು...!!

ಸೂರ್ಯ,ಚಂದ್ರ ನಾನೇಳಿದ ಮೇಲೆ ಹುಟ್ಟುವುದು ಎಂದು ಕೆಲವು ರಾಜಕಾರಣಿಗಳು ಅಹಂ ಪಡುತ್ತಿದ್ದಾರೆ ಎಂದು ಡಾ.ಮಹದೇವಪ್ಪ ಪದೇ ಪದೇ ಹೇಳಿದ್ದು ನೆರೆದವರಲ್ಲಿ ಅಚ್ಚರಿ ಮೂಡಿಸಿತು. ಬಹಳಷ್ಟು ರಾಜಕಾರಣಿಗಳಿಗೆ ನಾನತ್ವ ಹೋಗಿಲ್ಲ. ನಾನು ಬಿಟ್ಟರೆ ಇಲ್ಲ ಎಂದು ಅಹಂನಲ್ಲಿ ತೇಲಾಡುತ್ತಿರುತ್ತಾರೆ. ಸೂರ್ಯ, ಚಂದ್ರ ನಾನೇಳಿದ ಮೇಲೆ ಹುಟ್ಟುವುದು ಎಂಬ ಭ್ರಮೆಯಲ್ಲಿರುತ್ತಾರೆ ಎಂದರು. ನನ್ನ ಬಿಟ್ಟರೆ ಯಾರೂ ಇಲ್ಲ ಎಂಬ ದುರಂಹಕಾರ ಧೋರಣೆ ತೋರುತ್ತಾರೆ ಎಂದು ಕಿಡಿಕಾರಿದರು. ತಮ್ಮ ಭಾಷಣದ ಮಧ್ಯೆ ಡಾ.ಮಹದೇವಪ್ಪ ಇದೇ ವಿಚಾರವನ್ನು ಪದೇ ಪದೇ ಪುನರುಚ್ಚರಿಸಿದರು. ಆದರೆ ಅಹಂನಿಂದ ಮೆರೆಯುತ್ತಿರುವ ಆ ರಾಜಕಾರಣಿ ಯಾರೆಂದು ಹೇಳಲಿಲ್ಲ. ಡಾ.ಮಹದೇವಪ್ಪ ಕಿಡಿಕಾರುತ್ತಿರುವ ಆ ರಾಜಕಾರಣಿ ಯಾರು ಎಂಬ ಕುತೂಹಲ ಎಲ್ಲರಲ್ಲೂ ಮನೆ ಮಾಡಿತ್ತು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಅಧಿಕಾರಿಗಳು ಭಾಗಿಯಾಗಿದ್ದರೆ ಶಿಸ್ತುಕ್ರಮ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಸ್ಪಷ್ಟನೆ

ಮೈಸೂರು, ನ.30(ಬಿಎಲ್‌ಯು)– ಮೈಸೂರಿನಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಅಧಿಕಾರಿಗಳು ತಪ್ಪಿತಸ್ಥರೆಂದು ಕಂಡು ಬಂದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಪ್ರಕರಣದ ಬಗ್ಗೆ ತನಿಖೆ ಮಾಡಲಾಗುವುದು. ಇದರಲ್ಲಿ ಅಧಿಕಾರಿಗಳು ತಪ್ಪಿತಸ್ಥರಿದ್ದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಕರಣದ ಬಗ್ಗೆ ಸಮಗ್ರ ತನಿಖೆ ಮಾಡಲಾಗುವುದು. ತರುವಾಯ ಅಧಿಕಾರಿಗಳು ತಪ್ಪಿತಸ್ಥರೆಂದು ಕಂಡು ಬಂದರೆ ಅವರ ವಿರುದ್ಧವೂ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಆಸ್ಪತ್ರೆ ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಆಗಾಗ್ಗೆ ಭೇಟಿ ನೀಡಿ ಪರಿಶೀಲನೆ ಮಾಡಲು ಆರೋಗ್ಯ ಇಲಾಖೆ ನೇತೃತ್ವದ ಸಮಿತಿ ಇರುತ್ತದೆ. ಇವರು ಪರಿಶೀಲನೆ ಮಾಡುತ್ತಾರೆ. ಪ್ರಸವಪೂರ್ವ ಲಿಂಗ ಪತ್ತೆ ತಡೆಗೆ ಕಾರ್ಯಾಚರಣೆ ಮಾಡುತ್ತಾರೆ. ಈ ಕಾರ್ಯಾಚರಣೆಯನ್ನು ಈಗ ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲಾಗುವುದು ಎಂದು ಡಾ.ಮಹದೇವಪ್ಪ ತಿಳಿಸಿದರು. ಪ್ರಸವಪೂರ್ವ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ ವಿರುದ್ಧ ಕಾನೂನಿನಲ್ಲಿ ಕಟ್ಟುನಿಟ್ಟಿನ ಕ್ರಮವಿದೆ. ತಪ್ಪಿತಸ್ಥರಿದ್ದರೆ ಕೆಪಿಎಂಇ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದರು.

ನಿಗಮ ಮಂಡಳಿಗಳಿಗೆ ನೇಮಕ ಪ್ರಕ್ರಿಯೆ: ನಿಗಮ ಮಂಡಳಿಗಳಿಗೆ ನೇಮಕ ಮಾಡುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹೈಕಮಾಂಡ್ ನಡುವೆ ಮಾತುಕತೆ ನಡೆದಿದೆ. ಯಾವಾಗ ನೇಮಕ ಮಾಡಬೇಕೆಂದು ಅವರು ತೀರ್ಮಾನ ಮಾಡುತ್ತಾರೆ ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು.

ಜಾತಿ ಗಣತಿ ವರದಿ ಕುರಿತಂತೆ ಕಾಂಗ್ರೆಸ್ ಪಕ್ಷದ ಬೆಂಬಲವಿದೆ. ಈ ಬಗ್ಗೆ ನಮ್ಮ ಪಕ್ಷದ ಕೆಲವರು ತಮ್ಮ ಪರ ವಿರೋಧ ಹೇಳಿಕೆ ನೀಡಬಹುದು. ಆದರೆ ಅದು ಅವರ ಅಭಿಪ್ರಾಯವಷ್ಟೆ ಎಂದು ತಿಳಿಸಿದರು. ವಿಧಾನಸಭಾ ಅಧಿವೇಶನದಲ್ಲಿ ಸರ್ಕಾರವನ್ನು ಕಟ್ಟಿ ಹಾಕಲು ವಿರೋಧ ಪಕ್ಷಗಳು ತಂತ್ರಗಾರಿಕೆ ರೂಪಿಸಿವೆ ಎಂಬ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳು ರಚನಾತ್ಮಕವಾಗಿ ಕೆಲಸ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರಿನಲ್ಲಿ ಶ್ರೀ ಕನಕದಾಸರ ಜಯಂತಿ ಅದ್ದೂರಿ ಆಚರಣೆ

ಮೆರವಣಿಗೆಯಲ್ಲಿ ಜಾನಪದ ಕಲಾ ತಂಡಗಳ ಮೆರಗು, ಅತ್ಯಾಕರ್ಷಿಸಿದ ಸ್ತಬ್ಧಚಿತ್ರಗಳು

ಮೈಸೂರು, ನ.30(ಬಿಎಲ್‌ಯು)– ದಾಸಶ್ರೇಷ್ಠ, ಸಂತಕವಿ ಶ್ರೀ ಕನಕದಾಸರ 536ನೇ ಜಯಂತಿ ಅಂಗವಾಗಿ ಮೈಸೂರಿನಲ್ಲಿ ಇಂದು ಶ್ರೀ ಕನಕದಾಸರ ಪ್ರತಿಮೆಯ ಅದ್ದೂರಿ ಮೆರವಣಿಗೆ ನಡೆಯಿತು.

ಮೈಸೂರು ಅರಮನೆ ಬಲರಾಮ ದ್ವಾರದ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಆರಂಭವಾದ ಮೆರವಣಿಗೆಗೆ ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರೂ ಆದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಚಾಲನೆ ನೀಡಿದರು. ಶ್ರೀ ಕನಕದಾಸರ ಪ್ರತಿಮೆವುಳ್ಳ ಬೆಳ್ಳಿ ರಥ ಮೆರವಣಿಗೆಯ ಕೇಂದ್ರ ಬಿಂದುವಾಗಿತ್ತು.

ನಂದಿ ಧ್ವಜ, ಲಿಂಗಧೀರ ಕುಣಿತ, ವೀರಭದ್ರ ಕುಣಿತ, ಪೂಜಾ ಕುಣಿತ, ನವಿಲು ಕುಣಿತ, ಮರಗಾಲು ಕುಣಿತ, ಗೊರವ ಕುಣಿತ, ಕೋಲಾಟ, ಕೊಡಗಿನ ಮಹಿಳೆಯರ ನೃತ್ಯ, ದಾವಣಗೆರೆ ಲಂಬಾಣಿ ಮಹಿಳೆಯರ ನೃತ್ಯ, ಹುಲಿ ವೇಷ, ಯಕ್ಷಗಾನ, ಬೆದರು ಬೊಂಬೆ, ಚಿಲಿಪಿಲಿ ಗೊಂಬೆ, ತಮಟೆ, ನಗಾರಿ ಸೇರಿದಂತೆ ಹಲವು ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ಕುಲ ಕುಲವೆಂದು ಹೊಡೆದಾಡದಿರಿ ಕುಲದ ನೆಲೆಯನೇನಾದರೂ ಬಲ್ಲಿರಾ ಎಂಬ ದಾಸವಾಣಿಯ ಉಡುಪಿಯ ಕನಕ ಗೋಪುರದ ಸ್ತಬ್ಧ ಚಿತ್ರ ಆಕರ್ಷಿಸಿತು. ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದ ಹಕ್ಕಬುಕ್ಕರ ಸ್ತಬ್ಧ ಚಿತ್ರ, ಕಿತ್ತೂರು ಸಂಸ್ಥಾನದ







ವೀರ ಸೇನಾನಿ ಸಂಗೊಳ್ಳಿ ರಾಯಣ್ಣ, ವೀರಮಾತೆ ಚೆನ್ನಮ್ಮ ಸ್ತಬ್ಧಚಿತ್ರಗಳು ಕಣ್ಮನ ಸೆಳೆದವು. ಅಖಂಡ ಭಾರತ ನಿರ್ಮಾತೃ ಚಂದ್ರಗುಪ್ತ ಮೌರ್ಯನ ಆಳ್ವಿಕೆಯ ಸ್ತಬ್ಧ ಚಿತ್ರ ಕೂಡ ಅತ್ಯಾಕರ್ಷಿಸಿತು.

ರಾಜ್ಯ ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿ ಯೋಜನೆ ಸಾರುವ ಸಿದ್ಧರಾಮಯ್ಯ ಭಾವಚಿತ್ರವಿರುವ ಸ್ತಬ್ಧಚಿತ್ರ ಕೂಡ ಗಮನ ಸೆಳೆಯಿತು. ಪೊಲೀಸ್ ಅಶ್ವಾರೋಹಿ ಪಡೆ ಕೂಡ ಮೆರವಣಿಗೆ ಹಿಂಬಾಲಿಸಿತು. ಸಾವಿರಾರು ಜನರು ಸಂಭ್ರಮದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಮೆರವಣಿಗೆ ಚಾಮರಾಜೇಂದ್ರ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ಮೆಟ್ರೊಪೋಲ್ ವೃತ್ತ, ವಿನೋಬಾ ರಸ್ತೆ ಮೂಲಕ ಕನಕದಾಸ ಜಯಂತಿ ಕಾರ್ಯಕ್ರಮ ನಡೆಯುತ್ತಿದ್ದ ಕಲಾಮಂದಿರ ತಲುಪಿತು. ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡ, ಬಿ.ಎಂ.ರಾಮು, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ರಾಕೇಶ್ ಪಾಪಣ್ಣ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಹೊಸಕಾಮನಕೊಪ್ಪಲ ಸ್ವಾಮಿ, ನಾಡನಹಳ್ಳಿ ಎಂ.ರವಿ, ಕೆಪಿಸಿಸಿ ಕಾರ್ಮಿಕ ಘಟಕದ ಕಾರ್ಯದರ್ಶಿ ಜಿ.ಸಿ.ಕಿರಣ್, ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಜಿ.ಸುಬ್ರಹ್ಮಣ್ಯ, ಮಾಜಿ ಕಾರ್ಪೋರೇಟರ್ ಬಿ.ಎಂ.ನಟರಾಜ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಡಾ.ಹೆಚ್.ಸಿ.ಕೃಷ್ಣಕುಮಾರ್ ಸಾಗರ್, ಮಾಜಿ ಮೇಯರ್‌ಗಳಾದ ಪುಷ್ಪಲತಾ, ಚಿಕ್ಕಣ್ಣ, ಮೋದಾಮಣಿ ಸೇರಿದಂತೆ ಹಲವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಸರ್ಕಾರ ಕಾಂತರಾಜ್ ವರದಿ ಸ್ವೀಕರಿಸಿ ವಿಧಾನಸಭೆಯಲ್ಲಿ ಚರ್ಚಿಸಬೇಕು



ಮೈಸೂರು, ನ.30(ಬಿಎಲ್‌ಯು)– ಜಾತಿಗಣತಿ ಸಿದ್ಧಪಡಿಸಿರುವ ಕಾಂತರಾಜ್ ವರದಿಯನ್ನು ಸರ್ಕಾರ ಸ್ವೀಕರಿಸಿ, ವಿಧಾನಸಭಾ ಅಧಿವೇಶನದಲ್ಲಿ ಚರ್ಚೆಗೆ ಕೈಗೆತ್ತಿಕೊಳ್ಳಬೇಕು ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ಮೈಸೂರು ಅರಮನೆ ಬಳಿ ಶ್ರೀ ಕನಕದಾಸರ ಜಯಂತಿ ಮೆರವಣಿಗೆ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಾಂತರಾಜ್ ವರದಿ ಇನ್ನು ಸರ್ಕಾರದ ಕೈ ಸೇರಿಲ್ಲ. ಆಗಲೇ ವರದಿಯನ್ನು ಕೆಲವರು ವಿರೋಧಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಕಾಂತರಾಜ್ ವರದಿ ಜಾತಿ ಗಣತಿ ಅಲ್ಲ, ಒಂದು ಸಮೀಕ್ಷೆ ಅಷ್ಟೆ. ಯಾವುದೇ ಒಂದು ಸಮುದಾಯದ ವಿರುದ್ಧ ಅಥವಾ ಪರವಾಗಿ ಈ ವರದಿ ತಯಾರಿಸಿಲ್ಲ. ಪ್ರತಿಯೊಂದು ಸಮುದಾಯದಲ್ಲಿರುವ ಬಡ ಜನರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಮಾಡಲಾಗಿದೆ ಎಂದು ವಿಶ್ವನಾಥ್ ಸ್ಪಷ್ಟಪಡಿಸಿದರು. ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದವರು, ಆರ್.ಅಶೋಕ್ ಉಪ ಮುಖ್ಯಮಂತ್ರಿ ಆಗಿದ್ದವರು, ಇವರು ಏನಾದರೊಂದು ಹೇಳಿಕೆ ನೀಡುವ ವೇಳೆ ಸಂವಿಧಾನದ ಚೌಕಟ್ಟಿನಲ್ಲಿ ಮಾತನಾಡಬೇಕು. ಜವಾಬ್ದಾರಿಯುತ ಸ್ಥಾನದಲ್ಲಿರುವವರು ತಮ್ಮ ಸ್ಥಾನಕ್ಕೆ ತಕ್ಕಂತೆ ಮಾತನಾಡಬೇಕು ಎಂದು ಸಲಹೆ ನೀಡಿದರು.

ಕಾಂತರಾಜ್ ವರದಿ ಸರ್ಕಾರದ ಕೈ ಸೇರಲಿ, ತರುವಾಯ ವಿಧಾನಸಭಾ ಅಧಿವೇಶನದಲ್ಲಿ ವರದಿ ಬಗ್ಗೆ ಚರ್ಚೆ ನಡೆಯಲಿ. ಆ ನಂತರ ತಮ್ಮ ಅಭಿಪ್ರಾಯ ಹೇಳಲಿ ಎಂದು ವಿಶ್ವನಾಥ್ ಕಿವಿಮಾತು ಹೇಳಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಸದ ಕಾರಣ ಶಾಸಕರು ತಮ್ಮ ಅಭಿಪ್ರಾಯ ಹೇಳಲು ಸಾಧ್ಯವಾಗುತ್ತಿಲ್ಲ. ಸಚಿವರು ಸ್ಪಂದಿಸದಿದ್ದಾಗ ಶಾಸಕರು ಬಹಿರಂಗವಾಗಿ ಹೇಳಿಕೆ ನೀಡುತ್ತಾರೆ. ಹೀಗೆ ಬಹಿರಂಗ ಹೇಳಿಕೆ ನೀಡಿರುವ ಶಾಸಕ ಬಿ.ಆರ್.ಪಾಟೀಲ್ ಅವರನ್ನು ಕರೆದು ಸಿದ್ದರಾಮಯ್ಯ ಮಾತನಾಡಿದ್ದಾರೆ. ಈಗ ಎಲ್ಲವೂ ಸರಿ ಹೋಗಿದೆ ಎಂದು ಹೆಚ್.ವಿಶ್ವನಾಥ್ ತಿಳಿಸಿದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ. 23ರಲ್ಲಿ 536ನೇ ಕನಕ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಈ ವೇಳೆ ದೇವರಾಜ ಅರಸ್ ಅವರ ಮೊಮ್ಮಗ ಸೂರಜ್ ಹೆಗಡೆ ಉದ್ಘಾಟಿಸಿದರು. ಕೆಪಿಸಿಸಿ ಸದಸ್ಯ ಲೋಕೇಶ್ ರಾವ್, ದೇವರಾಜ ಬ್ಲಾಕ್ ಅಧ್ಯಕ್ಷ ಸುಂದರ ಕುಮಾರ್, ಮಾಜಿ ಕಾರ್ಪೋರೇಟರ್ ಗೋಪಿ, 23ನೇ ವಾರ್ಡ್ ಕಾಂಗ್ರೆಸ್ ಮುಖಂಡ ರಾಜೀವ್, ಆನಂದ್, ಜ್ಞಾನೇಶ್, ಮಾದೇವ್, ಶ್ರೀಕಾಂತ್, ಕಾರ್ತಿಕ್, ಹರ್ಷ, ರಾಜು, ಮಂಗಳಮ್ಮ, ಶಾಂತಮ್ಮ, ಮಂಜುಳಾ, ಉಮೇಶ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಪವನ್, ಮತ್ತಿತರರು ಉಪಸ್ಥಿತರಿದ್ದರು.

ಆಹ್ವಾನ ಪತ್ರಿಕೆಯಲ್ಲಿ ಮಾಜಿ ಶಾಸಕ ಸೋಮಶೇಖರ್ ಹೆಸರಿಲ್ಲದ್ದಕ್ಕೆ ಆಕ್ರೋಶ

ಕನಕದಾಸ ಜಯಂತಿ ಮೆರವಣಿಗೆ ತಡೆದು ಜಿಲ್ಲಾಡಳಿತದ ವಿರುದ್ಧ ಕಿಡಿ

ಮೈಸೂರು, ನ.30(ಬಿಎಲ್‌ಯು)– ಜಿಲ್ಲಾಡಳಿತ ಆಯೋಜಿಸಿದ್ದ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೆಸರು ಕೈ ಬಿಟ್ಟಿರುವುದಕ್ಕೆ ಅವರ ಬೆಂಬಲಿಗರು ಕನಕದಾಸರ ಜಯಂತಿ ಮೆರವಣಿಗೆ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದಿಂದ ಇಂದು ಬೆಳಗ್ಗೆ ಹೊರಟ ಮೆರವಣಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ದೇವರಾಜ ಅರಸ್ ರಸ್ತೆ ತಲುಪಿತು. ಈ ವೇಳೆ ಸೋಮಶೇಖರ್ ಬೆಂಬಲಿಗರು ಮೆರವಣಿಗೆ ತಡೆದು, ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಶ್ರೀ ಕನಕದಾಸ ಜಯಂತ್ಯುತ್ಸವ ಸಮಿತಿ ಅಧ್ಯಕ್ಷರಾದ ಸೋಮಶೇಖರ್ ಹೆಸರನ್ನು ನಮೂದಿಸದೆ, ಜಿಲ್ಲಾಡಳಿತ ಶಿಷ್ಟಾಚಾರ ಉಲ್ಲಂಘನೆ ಮಾಡಿದೆ ಎಂದು ಕಿಡಿಕಾರಿದರು. ಜಿಲ್ಲಾಡಳಿತ ಹಮ್ಮಿಕೊಳ್ಳುವ ಎಲ್ಲಾ ಸಮುದಾಯದ ಜಯಂತಿಯ ಆಹ್ವಾನ ಪತ್ರಿಕೆಯಲ್ಲಿ ಜಯಂತ್ಯುತ್ಸವ ಸಮಿತಿ ಅಧ್ಯಕ್ಷರ ಹೆಸರು ಹಾಕಲಾಗುತ್ತದೆ. ಆದರೆ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆ ಮಾಡಲಾಗಿದೆ ಎಂದು ದೂರಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೂಡ ಕನಕ ಜಯಂತ್ಯುತ್ಸವ ಸಮಿತಿ ಅಧ್ಯಕ್ಷರ ಹೆಸರು ಹಾಕಲಾಗಿತ್ತು ಆದರೆ ಈ ಬಾರಿ ಕೈ ಬಿಡಲಾಗಿದೆ. ಇದರಿಂದ ನೀವು ಕಾರ್ಯಕ್ರಮದಲ್ಲಿ ಭಾಗವಹಿಸಬೇಡಿ ಎಂದು ಸೋಮಶೇಖರ್‌ಗೆ ಅವರ ಬೆಂಬಲಿಗರು ಒತ್ತಡ ಹಾಕಿದರು.

ಕಾರ್ಯಕ್ರಮಕ್ಕೆ ಗೈರು: ತರುವಾಯ ಜಿಲ್ಲಾಡಳಿತದ ವಿರುದ್ಧ ಸೋಮಶೇಖರ್ ಕೂಡ ಅಸಮಾಧಾನ ವ್ಯಕ್ತಪಡಿಸಿ ಅಲ್ಲಿಂದ ನಿರ್ಗಮಿಸಿದರು. ನಂತರ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಸೋಮಶೇಖರ್ ಸೇರಿದಂತೆ ಅವರ ಬೆಂಬಲಿಗರು ಗೈರು ಹಾಜರಾದರು.



ಕನಕ ಜಯಂತ್ಯುತ್ಸವ ಸಮಿತಿಯ ಸ್ತಬ್ಧ ಚಿತ್ರಗಳು ಕೂಡ ಕಲಾಮಂದಿರಕ್ಕೆ ಬಾರದೆ ಮಹಾರಾಜ ಕಾಲೇಜು ಮೈದಾನ ತಲುಪಿದವು. ಕಲಾಮಂದಿರದಲ್ಲಿ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಈ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾಡಳಿತ ಶಿಷ್ಟಾಚಾರ ಪಾಲಿಸಿದೆ. ಸರ್ಕಾರದ ನಿಯಮದಂತೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲಾಗಿದೆ. ಇದನ್ನು ಹೊರತುಪಡಿಸಿ ಶಿಷ್ಟಾಚಾರದ ವ್ಯಾಪ್ತಿಗೆ ಬಾರದವರ ಹೆಸರು ಹಾಕಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ತಾವಿರಬೇಕು ಎಂದು ಕೆಲವರು ಹೇಳಿದರೆ, ವೇದಿಕೆಯಲ್ಲಿ ಯಾರಿದ್ದರೇನು ಕಾರ್ಯಕ್ರಮ ಮಾಡಿ ಎಂದು ಮತ್ತೆ ಕೆಲವರು ಹೇಳುತ್ತಾರೆ. ಆದರೆ ಇಂತಹ ಅಭಿಪ್ರಾಯಗಳಿಗೆ ಸರ್ಕಾರ ಜವಾಬ್ದಾರಿ ಅಲ್ಲ. ಸರ್ಕಾರ ಕನಕದಾಸರ ಜಯಂತಿ ಸೇರಿದಂತೆ ಎಲ್ಲಾ ಜಯಂತಿಯನ್ನು ಗೌರವಯುತವಾಗಿ ಮಾಡುತ್ತಿದೆ ಎಂದು ತಿಳಿಸಿದರು.

ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರಿಲ್ಲ, ನಾನು ವೇದಿಕೆಯಲ್ಲಿ ಕೂರಲಾಗುತ್ತಿಲ್ಲ, ಕೆಳಗೆ ಕೂರಬೇಕು ಎಂದು ಕೆಲವರು ಅಸಮಾಧಾನ ವ್ಯಕ್ತಪಡಿಸುತ್ತಾರೆ. ಇದು ಅವರಿಗೆ ಪ್ರತಿಷ್ಠೆಯ ವಿಚಾರವಾಗಿರುತ್ತದೆ. ಆದರೆ ವೇದಿಕೆ ಮೇಲೆ ಕೂರುವುದಕ್ಕಿಂತ ಕೆಳಗೆ ಕುಳಿತು ಜ್ಞಾನಿಗಳ ಮಾತು ಆಲಿಸಿದರೆ ನಮ್ಮ ಜ್ಞಾನ ಮತ್ತಷ್ಟು ಹೆಚ್ಚಾಗುತ್ತದೆ ಎಂಬುದನ್ನು ಅವರು ಅರಿಯಬೇಕು ಎಂದು ಡಾ.ಮಹದೇವಪ್ಪ ಸಲಹೆ ನೀಡಿದರು.

ಕನಕದಾಸರ ಕೀರ್ತನೆಗಳು ಸಾರ್ವಕಾಲಿಕ

ಕನಕದಾಸರ ಜಯಂತ್ಯುತ್ಸವದಲ್ಲಿ ಶಾಸಕ ಮಂತರ್‌ಗೌಡ ಸ್ಮರಣೆ



ಮಡಿಕೇರಿ ನ.30–ನಾಡಿನ ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಭಕ್ತ ಕನಕದಾಸರ ಕೊಡುಗೆ ಅಪಾರವಾಗಿದ್ದು, ಕನಕದಾಸರ ಕೀರ್ತನೆಗಳು ಮತ್ತು ಚಿಂತನೆಗಳು ಸಾರ್ವಕಾಲಿಕವಾಗಿವೆ ಎಂದು ಶಾಸಕ ಡಾ.ಮಂತರ್‌ಗೌಡ ಸ್ಮರಿಸಿದರು.

ನಗರದ ಗಾಂಧಿ ಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಡಗು ಜಿಲ್ಲಾ ಕುರುಬ ಸಮಾಜದ ವತಿಯಿಂದ ನಡೆದ ಕನಕದಾಸರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ಮೊಬೈಲ್ ತಂತ್ರಜ್ಞಾನ ಯುಗದಲ್ಲೂ ಸಮಾಜದಲ್ಲಿ ಹಲವು ತಾರತಮ್ಯಗಳನ್ನು ನೋಡುತ್ತಿದ್ದೇವೆ. ಹಲವು ಶತಮಾನಗಳ ಹಿಂದೆ ಬಸವಣ್ಣ, ಅಲ್ಲಮಪ್ರಭು, ದಾಸಶ್ರೇಷ್ಠ ಕನಕದಾಸರು ಸೇರಿದಂತೆ ವಚನಕಾರರು, ಸಾಮಾಜಿಕ ನ್ಯೂನತೆಗಳನ್ನು ಸರಿಪಡಿಸಲು ಶ್ರಮಿಸಿದ್ದಾರೆ. ಆ ನಿಟ್ಟಿನಲ್ಲಿ ಸಾಹಿತ್ಯ ಹಾಗೂ ಕೀರ್ತನೆಗಳ ಮೂಲಕ ಜಾಗೃತಿ ಮೂಡಿಸಿದ್ದಾರೆ ಎಂದು ಹೇಳಿದರು.

ಶರಣರು, ದಾಸರ ವಿಚಾರ ಧಾರೆಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ದಾಸರ ಕೀರ್ತನೆಗಳು ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದುವಲ್ಲಿ ಸಹಕಾರಿಯಾಗಿವೆ. ಅನ್ಯಾಯದ ವಿರುದ್ಧ ಬೆಳಕು ಚೆಲ್ಲುವುದನ್ನು ಕಾಣುತ್ತೇವೆ. ಭಕ್ತಿ, ಶ್ರದ್ಧೆ, ಜ್ಞಾನ ಹೀಗೆ ಪ್ರತಿಯೊಂದು ಸಹ ಸಮತೋಲನದಿಂದ ಕೂಡಿದಾಗ ಉತ್ತಮ ಬದುಕು ನಡೆಸಲು ಸಾಧ್ಯ. ವಿದ್ಯಾರ್ಥಿಗಳು ವಿದ್ಯಾರ್ಜನೆ ಕಡೆ ಹೆಚ್ಚಿನ ಗಮನಹರಿಸಬೇಕು. ಜಿಲ್ಲೆಯ ಸೂಕ್ತ ಸ್ಥಳದಲ್ಲಿ ಕನಕ ಸಮುದಾಯ ಭವನ ನಿರ್ಮಿಸಲಾಗುವುದು. ಆ ನಿಟ್ಟಿನಲ್ಲಿ ಕೂಡಲೇ ಜಾಗ ಒದಗಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶರಣರು ಹಾಗೂ ದಾಸರ ಕೊಡುಗೆ ಅಪಾರ. ಕನಕದಾಸರು ಶೋಷಿತ ಜನರ ಬಗ್ಗೆ ಕೀರ್ತನೆ ಮೂಲಕ ಬೆಳಕು ಚೆಲ್ಲಿದ್ದಾರೆ. ಭಕ್ತ ಕನಕದಾಸ ಚಲನಚಿತ್ರದ ಮೂಲಕ ಕನಕದಾಸರ ಜೀವನ ಚರಿತ್ರೆಯನ್ನು ತಿಳಿದುಕೊಳ್ಳಬಹುದು. ಮೋಹನ ತರಂಗಿಣಿ, ನಳಚರಿತ್ರೆ, ಮೊದಲಾದ ಸಾಹಿತ್ಯ ಇಂದಿಗೂ ಪ್ರಸ್ತುತವಾಗಿದೆ. ಕನಕದಾಸರು ಸಮಾಜಕ್ಕೆ ತನ್ನದೇ ಸಂದೇಶಗಳನ್ನು ನೀಡಿದ್ದಾರೆ. ಅವುಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು ಎಂದರು.

ಹುಣಸೂರಿನ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಎಂ.ಆರ್. ರಾಶಿ ಮಾತನಾಡಿ, ಕನಕ ಎಂದರೆ ಚಿನ್ನ, ಕನಕದಾಸರ ಕೀರ್ತನೆಗಳು ಇಂದಿಗೂ ಪ್ರಸ್ತುತವಾಗಿವೆ. ಸಮಾಜದಲ್ಲಿ ಮೌಢ್ಯವನ್ನು ಹೋಗಲಾಡಿಸಲು ಕನಕದಾಸರು ಪ್ರಯತ್ನಿಸಿದ್ದಾರೆ. ಕುಲಕುಲವೆಂದು ಹೊಡೆದಾಡದಿರಿ ಎಂಬ ಸಂದೇಶ ನೀಡಿದ್ದಾರೆ. ಕೀರ್ತನೆಗಳ ಮೂಲಕ ಬದುಕಿನ ಅಸಮತೋಲನ ಬಗ್ಗೆ ಬೆಳಕು ಚೆಲ್ಲಿದ್ದಾರೆ ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ತಹಶೀಲ್ದಾರ್ ಪ್ರವೀಣ್ ಕುಮಾರ್, ಕೊಡಗು ಜಿಲ್ಲಾ ಕುರುಬ ಸಂಘದ ಅಧ್ಯಕ್ಷರಾದ ಎಚ್.ಎಸ್. ಮಹೇಶ್, ಪ್ರಧಾನ ಕಾರ್ಯದರ್ಶಿ ಬಿ.ಎ. ಗಂಗಾಧರ, ಉಪಾಧ್ಯಕ್ಷ ಟಿ.ಕೆ.ವಸಂತ, ಖಜಾಂಜಿ ಶಿವಣ್ಣ, ಕುರುಬ ಸಮಾಜದ ಮುಖಂಡ ನಂಜುಂಡ ಸ್ವಾಮಿ, ಪ್ರಮುಖರಾದ ಭರಮಣ್ಣ, ರವಿಗೌಡ, ಎಂ.ಟಿ.ಗಣೇಶ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಆನಂದ್, ಜಿಲ್ಲಾ ಆಯುಷ್ ಅಧಿಕಾರಿ ಡಾ. ರೇಣುಕಾ ದೇವಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಶಿಕ್ಷಣಾಧಿಕಾರಿ ಮಹದೇವಸ್ವಾಮಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸದಾಶಿವ ಪಲ್ಲೇದ್, ಕೃಷ್ಣಪ್ಪ, ಭಾಗಮಂಡಲ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಲೋಕೇಶ್, ಹಿಂದುಳಿದ ವರ್ಗಗಳ ತಾಲೂಕು ಅಧಿಕಾರಿ ಮೋಹನ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ, ಕಲಾವಿದ ಬಿ.ಸಿ.ಶಂಕರಯ್ಯ, ಮಣಜೂರು ಮಂಜುನಾಥ್ ಇತರರು ಇದ್ದರು.

ಹುಲಿ ದಾಳಿಗೆ ತೆನೆ ಹಸು ಬಲಿ

ಬೆಸಗೂರು ಗ್ರಾಮದ ಕಾಫಿ ತೋಟದಲ್ಲಿ ಕಳೇಬರ ಪತ್ತೆ



ಮಡಿಕೇರಿ, ನ.30–ಕಾಫಿ ತೋಟವೊಂದರಲ್ಲಿ ಹುಲಿ ದಾಳಿ ನಡೆಸಿ 5 ತಿಂಗಳ ತೆನೆ ಹಸುವನ್ನು ಕೊಂದುಹಾಕಿ, ಒಂದೂವರೆ ವರ್ಷದ ಕರುವನ್ನು ತೀವ್ರವಾಗಿ ಗಾಯಗೊಳಿಸಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬಾಳಲೆ ಹೋಬಳಿಯ ಬೆಸಗೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಂಜಮ್ಮ ಎಂಬವರಿಗೆ ಸೇರಿದ ಹಸು ಹುಲಿ ದಾಳಿಗೆ ಬಲಿಯಾಗಿದೆ. ಪಾರಂಗಡ ವಿವೇಕ್ ಬೋಪಣ್ಣ ಎಂಬವರಿಗೆ ಸೇರಿದ ಕಾಫಿ ತೋಟದಲ್ಲಿ ಹಸುವಿನ ಕಳೇಬರ ಪತ್ತೆಯಾಗಿದ್ದು, 3 ದಿನಗಳ ಹಿಂದೆ ಹುಲಿ ದಾಳಿ ನಡೆಸಿರಬಹುದು ಎಂದು ಶಂಕಿಸಲಾಗಿದೆ. ಹುಲಿ ಸುಮಾರು 100 ಅಡಿಗಳಷ್ಟು ದೂರ ಹಸುವನ್ನು ಎಳೆದೊಯ್ದು, ದೇಹದ ಅರ್ಧ ಭಾಗವನ್ನು ತಿಂದು ಹಾಕಿದೆ. ಗುರುವಾರ ಬೆಳಗ್ಗೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಹಸುವಿನ ಕಳೇಬರವನ್ನು ಕಂಡು ಮಾಲೀಕರಿಗೆ ಮಾಹಿತಿ ನೀಡಿದರು. ನಂತರ ಸ್ಥಳಕ್ಕೆ ಭೇಟಿ ನೀಡಿದ ಪೊನ್ನಂಪೇಟೆ ವಲಯ ಅರಣ್ಯಾಧಿಕಾರಿ ಶಂಕರ್ ಹಾಗೂ ಸಿಬ್ಬಂದಿಯಾದ ಹರೀಶ್, ಪುನೀತ್, ರಂಜಿತ್, ಅರುಣ, ಸುಬ್ರಮಣ್ಯ, ನಿತಿನ್, ಶೈಲೇಶ್, ರಂಜಿ, ಭರತ, ಕೌಶಿಕ್ ಪರಿಶೀಲನೆ ನಡೆಸಿದರು. ಈ ಭಾಗದಲ್ಲಿ ಜಾನುವಾರುಗಳ ಮೇಲೆ ಹುಲಿ ದಾಳಿ ಪ್ರಕರಣಗಳು ಮರುಕಳಿಸುತ್ತಿದ್ದು, ಕಾಫಿ ಕೊಯ್ಲು ಹತ್ತಿರ ಬರುತ್ತಿರುವುದರಿಂದ ಕಾರ್ಮಿಕರು ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಕೂಡಲೇ ಹುಲಿಯನ್ನು ಸೆರೆ ಹಿಡಿಯಬೇಕು. ಜಾನುವಾರು ಕಳೆದುಕೊಂಡ ಮಾಲೀಕರಿಗೆ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಈ ಸಂದರ್ಭ ಗ್ರಾಮಸ್ಥರಾದ ಅರಮಣಮಾಡ ಹರೀಶ್, ಮನು, ಎ.ರಚನ್, ಸಿಬಿನ್, ಎ.ಎನ್. ಸಚಿನ್, ಬಾಚಮಾಡ ಸಿಲನ್, ಪಾರಂಗಡ ಕಿಲನ್, ಕೊಕ್ಕಲೆಮಾಡ ಕಿಶ ಮತ್ತಿತರರು ಇದ್ದರು.

ರಾಜಕೀಯ ಉದ್ದೇಶದಿಂದ ಕೊಡವ ಅಭಿವೃದ್ಧಿ ನಿಗಮ ಘೋಷಣೆ



ಮಡಿಕೇರಿ, ನ.30–ಕೊಡವ ಅಭಿವೃದ್ಧಿ ನಿಗಮವನ್ನು ರಾಜಕೀಯ ಉದ್ದೇಶದಿಂದ ಮಾತ್ರ ಘೋಷಣೆ ಮಾಡಲಾಗಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಆರೋಪಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಗೆ ಕೇವಲ 15 ದಿನಗಳು ಇರುವಾಗ ಮಾತ್ರ ಆಗಿನ ಬಿಜೆಪಿ ಸರ್ಕಾರ ಮತ ಗಳಿಕೆಯ ಉದ್ದೇಶದಿಂದ ಕೊಡವ ಅಭಿವೃದ್ಧಿ ನಿಗಮ ಘೋಷಣೆ ಮಾಡಿತ್ತು. ಆದರೆ, ಇಂದಿಗೂ ಕೊಡವ ಅಭಿವೃದ್ಧಿ ನಿಗಮ ಕಂಪನಿ ಕಾಯ್ದೆಯಡಿ ನೋಂದಣಿ ಆಗಿಲ್ಲ. ನಿಗಮ ನೋಂದಣಿ ಆಗದಿರುವ ಬಗ್ಗೆ ಸ್ವತಃ ಸಂಸದ ಪ್ರತಾಪ್ ಸಿಂಹ ಅವರೇ ಹೇಳಿದ್ದಾರೆ. ಸತ್ಯ ಏನೆಂಬುದು ಅವರ ಬಾಯಿಂದಲೇ ಬಂದಿದೆ ಎಂದು ಪ್ರತಾಪ್ ಸಿಂಹಗೆ ತಿರುಗೇಟು ನೀಡಿದರು.

ಘೋಷಣೆಯಾದಲ್ಲಿ ನಿಗಮಕ್ಕೆ ಮುಖ್ಯಸ್ಥರು, ನಿರ್ದೇಶಕರು, ಸಿಬ್ಬಂದಿ ಇರುತ್ತಾರೆ. ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರೆತು ನಿಗಮಕ್ಕೆ ಅನುದಾನ ಬಿಡುಗಡೆಯಾಗುತ್ತದೆ. ಆದರೆ, ಸಂಸದರು ಹೇಳುವಂತೆ ಜಿಲ್ಲಾಧಿಕಾರಿ ಖಾತೆಯಲ್ಲಿ ಹಣವಿದೆ ಎಂದಾದರೇ, ಅದು ನಿಗಮಕ್ಕೆ ಸೇರಿದ್ದಲ್ಲ ಎಂದಾಯಿತಲ್ಲ. ಜಿಲ್ಲಾಧಿಕಾರಿ ಖಾತೆಯಲ್ಲಿರುವ ಹಣ 2018ರಲ್ಲಿ ಜಿಲ್ಲೆಯ ಅಭಿವೃದ್ಧಿಗೆಂದು ಬಿಡುಗಡೆಯಾಗಿದೆ. ಇದರಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳದ ಹಿನ್ನೆಲೆಯಲ್ಲಿ ಹಣ ಡಿಸಿ ಖಾತೆಯಲ್ಲಿ ಹಾಗೇ ಉಳಿದಿದೆ. ಸುಳ್ಳು ಯಾರು ಹೇಳುತ್ತಿದ್ದಾರೆಂದು ಜನರೇ ತೀರ್ಮಾನ ಮಾಡುತ್ತಾರೆ. ಕೇವಲ ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುವ ಬದಲಿಗೆ ಅಭಿವೃದ್ಧಿ ರಾಜಕಾರಣ ಮಾಡಲಿ ಎಂದರು.

ಹೈಫ್ಲೈಯರ್ಸ್ ಹಾಕಿ ಕಪ್–2023 ಪಂದ್ಯಾವಳಿ

ಚೇಂದಿರ, ಕರ್ತಮಾಡ, ಚಂದೂರ, ಕೊಂಗಂಡ ತಂಡಗಳು ಸೆಮಿಫೈನಲ್‌ಗೆ

ಇಂದಿನ ಸೆಮಿಫೈನಲ್ ಪಂದ್ಯಗಳು
ಬೆಳಗ್ಗೆ 11ಕ್ಕೆ: ಚೇಂದಿರ–ಚಂದೂರ
ಮಧ್ಯಾಹ್ನ 2ಕ್ಕೆ: ಕರ್ತಮಾಡ–ಕೊಂಗಂಡ



ಪೊನ್ನಂಪೇಟೆ, ನ.30–ಬಿಟ್ಟಂಗಾಲ ಸಮೀಪದ ವಿ.ಬಾಡಗದಲ್ಲಿ ನಡೆಯುತ್ತಿರುವ ಹೈಫ್ಲೈಯರ್ಸ್ ಹಾಕಿ ಕಪ್–2023ರ ಪಂದ್ಯಾವಳಿಯ ಸೆಮಿಫೈನಲ್‌ಗೆ ಚೇಂದಿರ, ಕರ್ತಮಾಡ, ಚಂದೂರ ಮತ್ತು ಕೊಂಗಂಡ ತಂಡಗಳು ಪ್ರವೇಶಿಸಿವೆ.

ವಿ.ಬಾಡಗದ ಹೈಫ್ಲೈಯರ್ಸ್ ಸಂಸ್ಥೆಯ ವತಿಯಿಂದ ಸ್ಥಳೀಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆಯುತ್ತಿರುವ ವಿರಾಜಪೇಟೆ ತಾಲೂಕಿನ ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯ 2ನೇ ವರ್ಷದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಗುರುವಾರದ ಕ್ವಾರ್ಟರ್ ಫೈನಲ್‌ನಲ್ಲಿ ಈ 4 ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆದುಕೊಂಡಿವೆ.

ಮೊದಲ ಕ್ವಾರ್ಟರ್ ಫೈನಲ್‌ನಲ್ಲಿ ಚೇಂದಿರ ತಂಡ ಸಣ್ಣುವಂಡ ತಂಡವನ್ನು 5–2 ಗೋಲುಗಳಿಂದ ಮಣಿಸಿತು. ವಿಜೇತ ತಂಡದ ಪರವಾಗಿ ಆಟಗಾರರಾದ ಹೇಮಂತ್, ಪುನೀತ್, ಮಂಜುನಾಥ್, ಚಿಣ್ಣಪ್ಪ ಗೋಲು ಬಾರಿಸಿದರು. ಪರಾಜಿತ ತಂಡದ ಪರವಾಗಿ ಪೊನ್ನಣ್ಣ ಗೋಲು ದಾಖಲಿಸಿದರು. 2ನೇ ಪಂದ್ಯದಲ್ಲಿ ಚಂದೂರ ತಂಡ ಗುಮ್ಮಟ್ಟಿರ ತಂಡವನ್ನು 6–2 ಗೋಲುಗಳಿಂದ ಸೋಲಿಸಿ ಮುನ್ನಡೆ ಸಾಧಿಸಿತು. ಚಂದುರ ತಂಡದ ಪರವಾಗಿ ಸುರೇಶ್ ಗಣಪತಿ, ಕಿರಣ್ ಮೇದಪ್ಪ, ಚೇತನ್ ಸೋಮಣ್ಣ ಗೋಲು ಬಾರಿಸಿದರೆ, ಪರಾಜಿತ ತಂಡದ ಪರವಾಗಿ ಬೋಪಣ್ಣ ಹಾಗೂ ಯಶ್ವಿನ್ ಗೋಲು ಹೊಡೆದರು.

3ನೇ ಪಂದ್ಯದಲ್ಲಿ ಕರ್ತಮಾಡ ತಂಡ ಮೇಚಿಯಂಡ ತಂಡವನ್ನು 3–2 ಗೋಲುಗಳಿಂದ ಪರಾಭವಗೊಳಿಸಿತು. ವಿಜೇತ ತಂಡದ ಪರವಾಗಿ ಬೆಳ್ಯಪ್ಪ, ಸಾಗರ್ ಪೂಣಚ್ಚ ಗೋಲು ಹೊಡೆದರೆ, ಮೇಚಿಯಂಡ ತಂಡದ ಪರವಾಗಿ ವಿನಿತ್ ನಾಣಯ್ಯ, ನಾಚಪ್ಪ ಗೋಲು ದಾಖಲಿಸಿದರು.

ಕೊನೆಯ ಪಂದ್ಯದಲ್ಲಿ ಕೊಂಗಂಡ ತಂಡ ಅಮ್ಮಣಿಚಂಡ ತಂಡವನ್ನು ಸಡನ್ ಡೆತ್‌ನಲ್ಲಿ ಒಟ್ಟು 7–6 ಗೋಲುಗಳಿಂದ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು. ಆರಂಭದಿಂದಲೇ ಹಣಾಹಣೆಯಿಂದ ನಡೆದ ಈ ಪಂದ್ಯದಲ್ಲಿ ಉಭಯ ತಂಡಗಳು ಸಮಬಲದ ಹೋರಾಟ ನಡೆಸಿತು. ವಿಜೇತ ತಂಡದ ಪರವಾಗಿ ಅದ್ವೈತ್, ನಾಚಪ್ಪ ಗೋಲು ದಾಖಲಿಸಿದರು. ಅಮ್ಮಣಿಚಂಡ ತಂಡದ ಪರವಾಗಿ ದಿವಾನ್, ಚೇತನ್ ಗೋಲು ಬಾರಿಸಿದ್ದರಿಂದ ಎರಡೂ ತಂಡಗಳು ಸಮಬಲ ಸಾಧಿಸಿತು. ಇದರಿಂದ ಶೂಟ್‌ಔಟ್ ನಿಯಮಾವಳಿ ಅಳವಡಿಸಿದ ಸಂದರ್ಭದಲ್ಲಿ ಉಭಯ ತಂಡಗಳು ಮತ್ತೆ ಸಮಬಲದ ಗೋಲು ದಾಖಲಿಸಿದ ಕಾರಣ ಸಡನ್ ಡೆತ್ ಅಳವಡಿಸಬೇಕಾಯಿತು. ಈ ವೇಳೆ ವಿಜೇತ ತಂಡದ ಪರವಾಗಿ ಒಂದು ಗೋಲು ಹೆಚ್ಚು ದಾಖಲಾದ ಕಾರಣ ಕೊಂಗಂಡ ತಂಡಕ್ಕೆ ಅದೃಷ್ಟ ಒಲಿಯಿತು.

ಕೊಂಗಂಡ ತಂಡದ ಪರವಾಗಿ ಚೆಲ್ಸಿ ಮೇದಪ್ಪ 2 ಗೋಲು ಬಾರಿಸಿದರೆ, ಅದ್ವೈತ್, ರಚನ್ ಮತ್ತು ನಾಚಪ್ಪ ತಲಾ ಒಂದೊಂದು ಗೋಲು ದಾಖಲಿಸಿದರು. ಪರಾಜಿತ ತಂಡದ ಪರವಾಗಿ ಚೇತನ್ 2 ಗೋಲು ಬಾರಿಸಿದರೆ, ವಿಘ್ನೇಶ್ ಬೋಪಣ್ಣ ಮತ್ತು ಸಂಜು ಸೋಮಯ್ಯ ತಲಾ ಒಂದೊಂದು ಗೋಲು ಬಾರಿಸಿದರು.

ಹುತಾತ್ಮ ಯೋಧ ಪ್ರಾಂಜಲ್‌ಗೆ ನಮನ



ಕುಶಾಲನಗರ, ನ.30– ಜಮ್ಮುವಿನ ರಜೌರಿಯಲ್ಲಿ ಉಗ್ರರ ದಾಳಿಗೆ ಹುತಾತ್ಮರಾದ ಕ್ಯಾಪ್ಟನ್ ಪ್ರಾಂಜಲ್ ಅವರಿಗೆ ತಾಲೂಕಿನ ಕೂಡುಮಂಗಳೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕುಶಾಲನಗರ ಸ್ಥಳೀಯ ಸಂಸ್ಥೆ, ಸ್ಕೌಟ್ಸ್‌ನ ಶಾಲಾ ಘಟಕ ಹಾಗೂ ಎನ್‌ಎಸ್‌ಎಸ್ ಘಟಕದ ವತಿಯಿಂದ ನಮನ ಸಲ್ಲಿಸಲಾಯಿತು.

ಗೈಡ್ಸ್ ಸಂಸ್ಥೆಯ ಸಹಾಯಕ ಕಮೀಷನರ್ ಸಿ.ಎಂ.ಸುಲೋಚನ ಮಾತನಾಡಿ, ಹುತಾತ್ಮ ಯೋಧ ಎಂ.ವಿ.ಪ್ರಾಂಜಲ್ ಅವರ ಕರ್ತವ್ಯ ನಿಷ್ಠೆ, ದೇಶ ಪ್ರೇಮ ಹಾಗೂ ತ್ಯಾಗ ಬಲಿದಾನ ಸ್ಮರಿಸಿದರು. ನಿವೃತ್ತ ಮುಖ್ಯ ಶಿಕ್ಷಕ ಎಂ.ಎಚ್.ನಜೀರ್ ಅಹ್ಮದ್ ಮಾತನಾಡಿ, ವಿದ್ಯಾರ್ಥಿಗಳು ಶಿಸ್ತು, ಸಂಯಮ, ಪ್ರಾಮಾಣಿಕತೆ ಬೆಳೆಸಿಕೊಂಡು ದೇಶದ ಸಮಗ್ರತೆಗೆ ಪಣ ತೊಡಬೇಕು ಎಂದರು.

ಶಾಲಾ ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ಎ.ಎಂ. ಜವರಯ್ಯ, ಸದಸ್ಯ ಕೆ.ಎಸ್.ರಾಜಾಚಾರಿ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ದಯಾನಂದ ಪ್ರಕಾಶ್, ಶಿಕ್ಷಕರಾದ ಕೆ.ಗೋಪಾಲಕೃಷ್ಣ, ಬಿ.ಎನ್.ಸುಜಾತ, ಬಿ.ಡಿ.ರಮ್ಯ, ಎಸ್.ಎಂ. ಗೀತಾ, ಅನ್ನಿಲಾ ರೇಖಾ, ಕೆ.ಟಿ.ಸೌಮ್ಯ ಇದ್ದರು.

ಹೆಣ್ಣು ಭ್ರೂಣ ಹತ್ಯೆ ಮಾಡಿದವರು, ಒಳಗಾದವರಿಗೂ ಕಠಿಣ ಶಿಕ್ಷೆ



ಚಾಮರಾಜನಗರ, ನ.30–ಹೆಣ್ಣು ಭ್ರೂಣ ಹತ್ಯೆಯಂತಹ ನೀಚ ಕೆಲಸ ಮತ್ತೊಂದಿಲ್ಲ. ಭ್ರೂಣ ಹತ್ಯೆ ಮಾಡಿದವರು ಹಾಗೂ ಭ್ರೂಣ ಹತ್ಯೆಗೆ ಒಳಗಾದವರಿಗೂ ಕಠಿಣ ಶಿಕ್ಷೆ ಆಗಬೇಕು. ಆಗ ಮಾತ್ರ ಈ ರೀತಿಯ ಪಾಪದ ಕೃತ್ಯ ತಡೆಯಲು ಸಾಧ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತಮಾಡಿದ ಅವರು, ಈ ಘಟನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಈ ಸಂಬಂಧ ಸರ್ಕಾರ ಹಲವು ಕ್ರಮ ತೆಗೆದುಕೊಂಡಿದೆ. ಚೀನಾದಲ್ಲಿ ನ್ಯುಮೋನಿಯಾ ಸೋಂಕು ಹೆಚ್ಚಳವಾಗಿರುವುದರಿಂದ ರಾಜ್ಯ ಕೂಡ ಎಚ್ಚೆತ್ತುಕೊಂಡಿದೆ. ಜಿಲ್ಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದ್ದು, ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ, ವಿಶೇಷ ವಾರ್ಡ್‌ಗಳನ್ನು ರೂಪಿಸಲಾಗುತ್ತದೆ ಎಂದರು. ಜಾತಿ ಗಣತಿ ವರದಿ ಬಿಡುಗಡೆಯಾದ ಬಳಿಕ ಸರ್ಕಾರ ಪತನ ಆಗುತ್ತದೆ ಹಾಗೂ ಲೋಕಸಭಾ ಚುನಾವಣೆಗೂ ಮುನ್ನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೈಲಿಗೆ ಹೋಗುತ್ತಾರೆ ಎಂಬ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈಶ್ವರಪ್ಪ ಮನಸ್ಸಿಗೆ ಬಂದಂತೆ ಏನೇನೋ ಮಾತನಾಡುತ್ತಾರೆ. ಅವರ ಹೇಳಿಕೆ ಡಿಕೆಶಿ ಅವರನ್ನು ಉದ್ದೇಶ ಪೂರ್ವಕವಾಗಿ ಜೈಲಿಗೆ ಹಾಕಿಸುವ ಹುನ್ನಾರದಂತಿದೆ. ಈಶ್ವರಪ್ಪ ಅವರ ಹೇಳಿಕೆ ಹಿಂದೆ ಷಡ್ಯಂತ್ರ ಅಡಗಿದೆ. ಯಾರು ಏನೇ ಅಂದರೂ ಸರ್ಕಾರ ಐದು ವರ್ಷ ಸುಭದ್ರವಾಗಿ ನಡೆಯಲಿದೆ ಎಂದು ತಿಳಿಸಿದರು.

ಕಲಾವಿದೆಗೆ ನೀಡಿದ ಬೆಳ್ಳಿ ಕಿರೀಟ ಕಳವು



ಚಾಮರಾಜನಗರ, ನ.30– ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ನಡೆದ ಮಹಾ ನಾಯಕ ಧಾರಾವಾಹಿ ಕಲಾವಿದರಿಗೆ ನಡೆದ ಸನ್ಮಾನ ಸಮಾರಂಭದಲ್ಲಿ ಕುಮಾರಿ ನಾರಾಯಣಿ ವರ್ಣೆ ಅವರಿಗೆ ತೊಡಿಸಿದ್ದ 80 ಸಾವಿರ ರೂ. ಮೌಲ್ಯದ 600 ಗ್ರಾಂ ಬೆಳ್ಳಿ ಕಿರೀಟ ಕಳವಾಗಿರುವ ಘಟನೆ ಬುಧವಾರ ನಡೆದಿದೆ. ಕಾರ್ಯಕ್ರಮದಲ್ಲಿ ಕಲಾವಿದರನ್ನು ಸನ್ಮಾನಿಸಿದ ನಂತರ ಬೆಳ್ಳಿ ಕಿರೀಟವನ್ನು ಪಕ್ಕದಲ್ಲಿ ಇಟ್ಟಿದ್ದಾಗ ಕಳವಾಗಿದೆ. ಈ ವಿಷಯ ಸಮಾರಂಭದ ಬಳಿಕ ಕಾರ್ಯಕ್ರಮದ ಆಯೋಜಕರಾದ ವೆಂಕಟರಮಣಸ್ವಾಮಿ (ಪಾಪು) ಅವರಿಗೆ ತಿಳಿಸಲಾಯಿತು. ಬಳಿಕ ಕಾರ್ಯಕ್ರಮದ ಸ್ಥಳದಲ್ಲಿ ಹುಡುಕಾಡಿದರೂ ಸಿಗದ ಕಾರಣ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಲಾಯಿತು. ಯಾರಿಗಾದರೂ ಈ ಬೆಳ್ಳಿ ಕಿರೀಟ ಸಿಕ್ಕಿದ್ದರೆ ಅಥವಾ ಮಾಹಿತಿ ದೊರೆತರೆ ಸ್ಥಳೀಯ ಪೊಲೀಸ್ ಠಾಣೆಗೆ ಅಥವಾ ವೆಂಕಟರಮಣ ಸ್ವಾಮಿ (ಪಾಪು) ಮೊ.ಸಂ: 9986216770ಗೆ ತಿಳಿಸುವಂತೆ ಮನವಿ ಮಾಡಲಾಗಿದೆ.

ಡಿ.4ರಿಂದ ಪಾರ್ವತಾಂಬೆ ಜಾತ್ರೆ



ಬೇಗೂರು(ಗುಂಡ್ಲುಪೇಟೆ), ನ.30–ಸಮೀಪದ ಹಸಗೂಲಿ ಗ್ರಾಮದಲ್ಲಿ ಶ್ರೀ ಪಾರ್ವತಾಂಬೆ ಜಾತ್ರಾ ಮಹೋತ್ಸವ ಡಿ.4, 5 ಮತ್ತು 6ರಂದು ವಿಜೃಂಭಣೆ ಯಿಂದ ನಡೆಯಲಿದೆ. ಡಿ.4ರಂದು ಗ್ರಾಮಸ್ಥರೆಲ್ಲಾ ಒಟ್ಟಾಗಿ ಸೇರಿ ದೇವಿಯ ವಿಗ್ರಹಕ್ಕೆ ಪೂಜೆ ಸಲ್ಲಿಸಿ ಬುಟ್ಟಿಯಲ್ಲಿರಿಸಿಕೊಂಡು ಬಂಡೀಪುರ ರಾಷ್ಟ್ರೀಯ ಅರಣ್ಯವಲಯ ವ್ಯಾಪ್ತಿಯ ಕಸಗಲಪುರದ ಶ್ರೀ ಪಾರ್ವ ತಾಂಬೆ ದೇವಿಯ ಮೂಲ ದೇವಾಲಯಕ್ಕೆ ಕಾಲ್ನಡಿಗೆಯಲ್ಲಿ ತೆರಳಲಿದ್ದಾರೆ.

ನಂತರ ಗ್ರಾಮಸ್ಥರು ಅಲ್ಲೇ ಉಳಿದು ಮಾರನೆಯದಿನ ಡಿ.5ರಂದು ಮಧ್ಯಾಹ್ನ 1 ಗಂಟೆಗೆ ದೇವಿಯನ್ನು ರಥದಲ್ಲಿರಿಸಿ ಸೇವಂತಿಗೆ ಹೂವಿನಿಂದ ಅಲಂಕರಿಸಿ ರಥ ಎಳೆಯಲಿದ್ದಾರೆ. ಇದೇ ವೇಳೆ ಹರಕೆ ಹೊತ್ತ ಭಕ್ತರು ಬಾಯಿಬೀಗ ಉತ್ಸವ, ಚಿನ್ನದ ತಾಳಿ, ಕಜ್ಜಾಯ, ಹಣ್ಣು ಜವನ, ಸೇವಂತಿಗೆ ಹೂವನ್ನು ದೇವಿಗೆ ಅರ್ಪಿಸಲ್ಲಿದ್ದಾರೆ. ಡಿ.6 ರಂದು ಬೆಳಗ್ಗೆ ಪೂಜೆ ಸಲ್ಲಿಸುವ ಗ್ರಾಮಸ್ಥರು ಮತ್ತೆ ರಥವನ್ನು ಎಳೆಯಲಿದ್ದಾರೆ.

ಸಮಾಜ ಸುಧಾರಣೆಗೆ ಕನಕದಾಸರ ಕೊಡುಗೆ ಅಪಾರ

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಭಿಮತ



ಚಾಮರಾಜನಗರ, ನ.30–ಜನರಿಗೆ ಅರ್ಥವಾಗುವ ಸರಳ ಕೀರ್ತನೆಗಳನ್ನು ರಚಿಸುವ ಮೂಲಕ ಸಾಮಾಜಿಕ ಬದಲಾವಣೆಗೆ ಹೆಚ್ಚಿನ ಒತ್ತು ನೀಡಿದ ಕನಕದಾಸರು, ಸಮಾಜ ಸುಧಾರಣೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದರು.

ನಗರದ ಜಿಲ್ಲಾಡಳಿತ ಭವನ ಆವರಣದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದಾಸ ಶ್ರೇಷ್ಠರಲ್ಲಿ ಒಬ್ಬರಾದ ಕನಕದಾಸರು ಸಮಾಜದ ಅಂಕು–ಡೊಂಕುಗಳನ್ನು ತಿದ್ದಿ, ಮೌಢ್ಯತೆ, ಜಾತೀಯತೆಯನ್ನು ತೊಡೆದುಹಾಕಲು ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಕೀರ್ತನೆಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ. ಅವರ ಕೀರ್ತನೆಗಳ ಸಾರ, ಸಂದೇಶಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಮುನ್ನೆಡೆಯಬೇಕಿದೆ ಎಂದು ತಿಳಿಸಿದರು.

ಕನಕದಾಸರು ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ. ಎಲ್ಲಾ ವರ್ಗಗಳಿಗೂ ಅನ್ವಯವಾಗುವ, ಜಾಗೃತ ಗೊಳಿಸುವ ಕೀರ್ತನೆಗಳನ್ನು ರಚಿಸಿ ಸಮಾಜವನ್ನು ಎಚ್ಚರಿಸಿದರು. ಸಂತರ ತತ್ವಸಿದ್ಧಾಂತ, ವಿಚಾರಧಾರೆ, ಚಿಂತನೆಗಳನ್ನು ಅರಿಯಲು ಸರ್ಕಾರ ಮಹಾಪುರುಷರು ಹಾಗೂ ದಾರ್ಶನಿಕರ ಜಯಂತಿಗಳನ್ನು ಆಚರಿಸಲು ಅನುವು ಮಾಡಿಕೊಟ್ಟಿದೆ ಅವರ ಸಂದೇಶಗಳನ್ನು ಅರಿತು ಸಮಾಜದ ಇತರರಿಗೂ ಮನವರಿಕೆ ಮಾಡುವ ಮೂಲಕ ಕನಕದಾಸರಿಗೆ ಗೌರವ ಸಲ್ಲಿಸಬೇಕು ಎಂದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, 1509ರಲ್ಲಿ ಹಾವೇರಿ ಜಿಲ್ಲೆಯ ಬಾಡಗ ಗ್ರಾಮದಲ್ಲಿ ಜನಿಸಿದ ಕನಕದಾಸರು 100 ವರ್ಷಗಳ ಕಾಲ ಜೀವಿಸಿದ್ದರು. ಕನಕದಾಸರು ಕನ್ನಡದಲ್ಲಿ ಸರಳ ಕೀರ್ತನೆಗಳನ್ನು ರಚಿಸುವ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದರು. ಜೀವನದಲ್ಲಿ ಪ್ರತಿಯೊಬ್ಬರು ಉತ್ತಮ ಪ್ರಜೆಯಾಗಿ ರೂಪುಗೊಳ್ಳಲು ಮಹಾಪುರುಷರು ಕೀರ್ತನಾ ಸಂದೇಶಗಳನ್ನು ನಮಗೆ ನೀಡಿದ್ದಾರೆ. ಅವರ ಜೀವನಾದರ್ಶಗಳನ್ನು ಪಾಲಿಸಬೇಕು ಎಂದು ತಿಳಿಸಿದರು.

ಮೈಸೂರಿನ ಸಂದರ್ಶಕ ಪ್ರಾಧ್ಯಾಪಕ ಡಾ.ರಾಜಶೇಖರ ಜಮದಂಡಿ ಮಾತನಾಡಿ, ಕನಕದಾಸರು ಆಧ್ಯಾತ್ಮದ ದಿವ್ಯದೃಷ್ಟಿ ಹೊಂದಿದ್ದರು. ಮನಸ್ಸಿನ ಕಲ್ಮಶವನ್ನು ತೊಡೆದುಹಾಕಿದ ಕನಕದಾಸರ ಕೀರ್ತನೆಗಳು ಇಂದಿಗೂ ಪ್ರಸ್ತುತವಾಗಿದೆ. ಮನಸ್ಸಿನ ಕಲ್ಮಶ ತಿಳಿಯಲು ಅಂತರಂಗದ ಕಣ್ಣು ತೆರೆಯಬೇಕು. ಅಂತರಂಗ, ಬಹಿರಂಗ ಶುದ್ಧಿಯನ್ನು ಜೀವನದಲ್ಲಿ ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಬಂಡೀಪುರ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪಅರಣ್ಯ ಸಂರಕ್ಷಣಾಧಿಕಾರಿ ದೀಪಾ ಜೆ.ಕಂಟ್ರಾಕ್ಟರ್, ಉಪವಿಭಾಗಾಧಿಕಾರಿ ಮಹೇಶ್, ತಹಶೀಲ್ದಾರ್ ಬಸವರಾಜು, ಕನಿಷ್ಠ ವೇತನ ಸಲಹಾ ಮಂಡಳಿಯ ಮಾಜಿ ಅಧ್ಯಕ್ಷ ಉಮೇಶ್, ಮುಖಂಡ ರಾಜಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಗುರುಲಿಂಗಯ್ಯ ಇದ್ದರು.

ಕಲಾತಂಡಗಳ ಮೆರುಗು



ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಪ್ರವಾಸಿ ಮಂದಿರದಲ್ಲಿ ಭಕ್ತ ಶ್ರೇಷ್ಠ ಶ್ರೀ ಕನಕದಾಸರ ಭಾವಚಿತ್ರ ಮೆರವಣಿಗೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು. ನಂತರ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆಯಲ್ಲಿ ಡೊಳ್ಳುಕುಣಿತ, ಗೊರವರ ಕುಣಿತ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿ ಮೆರವಣಿಗೆಗೆ ಮೆರುಗು ನೀಡಿದವು.

ಇಂದು ನಗರದಲ್ಲಿ ಏಡ್ಸ್ ಅರಿವು ಜಾಥಾ



ಚಾಮರಾಜನಗರ, ನ.30–ವಿಶ್ವ ಏಡ್ಸ್ ತಡೆ ದಿನಾಚರಣೆ ಅಂಗವಾಗಿ ಡಿ. 1ರಂದು ನಗರದಲ್ಲಿ ಏಡ್ಸ್ ಅರಿವು ಜಾಥಾ ಹಾಗೂ ವೇದಿಕೆ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಎಂ.ಎಸ್. ರವಿಕುಮಾರ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಅಂದು 11 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಇದಕ್ಕೂ ಮುನ್ನ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಜಾಥಾಕ್ಕೆ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಓ ಹಾಗೂ ಡಿಎಚ್‌ಓ ಚಾಲನೆ ನೀಡಲಿದ್ದಾರೆ. ನಂತರ ನಗರದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಯಲಿದೆ. ಎಂದು ಗುರುವಾರ ಸುದ್ದಿ ಗೋಷ್ಠಿಯಲ್ಲಿ ಹೇಳಿದರು. ಜಾಥಾದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಲಿದ್ದು, ನಾಟಕ ಪ್ರದರ್ಶನ, ಐಸಿಟಿಸಿ, ಎಆರ್‌ಟಿ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಸನ್ಮಾನಿಸಲಾಗುವುದು. ಸಂಜೆ 6.30ಕ್ಕೆ ಜಿಲ್ಲಾಡಳಿತ ಭವನದಿಂದ ಮೊಂಬತ್ತಿ ಮೆರವಣಿಗೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಎಚ್‌ಐವಿ ಮೇಲ್ವಿಚಾರಕರಾದ ಮಹದೇವಪ್ರಸಾದ್, ಶೇಖರ್, ಪ್ರಭಾರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿನಾಯಕ ಇದ್ದರು.



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಕನಕದಾಸರ ಜಯಂತಿ ಆಚರಿಸಲಾಯಿತು. ಶಾಸಕ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹಾದೇವ, ಆರ್.ಮಹದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಮಾಧ್ಯಮ ಕಾರ್ಯದರ್ಶಿ ವಕೀಲ ಅರುಣ್ ಕುಮಾರ್, ನಗರಸಭಾ ಸದಸ್ಯೆ ಚಿನ್ನಮ್ಮ, ಜಿಪಂ ಮಾಜಿ ಸದಸ್ಯರಾದ ಕೆರಹಳ್ಳಿ ನವೀನ್, ಸೋಮನಾಯಕ, ಸಿ.ಕೆ.ರವಿಕುಮಾರ್ ಅಸಂಘಟಿತ ಕಾರ್ಮಿಕರ ಸಂಘದ ಅಧ್ಯಕ್ಷ ಸ್ವಾಮಿ, ಸೈಯದ್‌ರಫಿ ಮತ್ತಿತರರಿದ್ದರು.

ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳಿ

ರೈತರಿಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾಹಿತಿ



ಚಾಮರಾಜನಗರ, ನ.30– ಬೆಳೆ ವಿಮೆ, ಬೆಳೆ ಸಾಲ, ಬೆಳೆ ಪರಿಹಾರ ವಿತರಣೆ, ಕನಿಷ್ಠ ಬೆಂಬಲ ಬೆಲೆ ಯೋಜನೆ ಅನುಷ್ಠಾನ, ಬೆಳೆ ದಾಖಲಾತಿ ಸೇರಿದಂತೆ ಸರ್ಕಾರದ ವಿವಿಧ ಸೌಲಭ್ಯ ವಿತರಣೆ ಬಳಕೆಗೆ ರೈತರು ತಮ್ಮ ಜಮೀನಿನ ಮಾಹಿತಿಯನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ತಿಳಿಸಿದ್ದಾರೆ.

ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟಾರೆ 4,41,547 ಫ್ಲಾಟ್ (ಸರ್ವೆ ನಂಬರ್)ಗಳಿದ್ದು, ಈವರೆಗೂ 2,31,001 ಫ್ಲಾಟ್‌ಗಳನ್ನು (ಶೇ.52.3) ಫ್ರೂಟ್ಸ್ ತಂತ್ರಾಂಶದಲ್ಲಿ ಸಂಯೋಜಿಸಲಾಗಿದ್ದು, ಬಾಕಿ 2,10,546 (ಶೇ.47.7) ಫ್ಲಾಟ್‌ಗಳನ್ನು ಜೋಡಿಸಬೇಕಿದೆ ಎಂದು ಮಾಹಿತಿ ನೀಡಿದ್ದಾರೆ. ಸದರಿ ಕಾರ್ಯವನ್ನು ಕ್ಷೇತ್ರ ಮಟ್ಟದಲ್ಲಿ ಕಂದಾಯ, ಕೃಷಿ, ತೋಟಗಾರಿಕೆ ಹಾಗೂ ಇನ್ನಿತರ ಇಲಾಖೆ ಗಳ ಲಾಗಿನ್‌ಗಳ ಮೂಲಕ ಮುಂದಿನ 15 ದಿನಗಳ ಅವಧಿಯಲ್ಲಿ ಅಭಿಯಾನ ರೂಪದಲ್ಲಿ ಕೈಗೊಂಡು ಫ್ರೂಟ್ಸ್ ತಂತ್ರಾಂಶದಲ್ಲಿ ಪೂರ್ಣ ಪ್ರಮಾಣದಲ್ಲಿ ಲ್ಯಾಂಡ್ ಅಪ್‌ಡೇಷನ್ ಪ್ರಗತಿ ಸಾಧಿಸಲು ಸರ್ಕಾರದ ನಿರ್ದೇಶನವಿದೆ ಎಂದು ತಿಳಿಸಿದ್ದಾರೆ. ಜಿಲ್ಲೆಯ ಸಮಸ್ತ ರೈತರು ತಮ್ಮ ಆಧಾರ್ ಕಾರ್ಡ್ ಪ್ರತಿ, ಬ್ಯಾಂಕ್ ಪಾಸ್‌ಪುಸ್ತಕದ ವಿವರ, ಮೊಬೈಲ್ ನಂಬರ್, ಪರಿಶಿಷ್ಟ ಜಾತಿ, ಪಂಗಡದ ರೈತರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರ ಹಾಗೂ ತಮ್ಮ ಮಾಲೀಕತ್ವದ ಎಲ್ಲಾ ಜಮೀನಿನ ಸರ್ವೆ ನಂಬರ್ ವಿವರಗಳನ್ನು ಹತ್ತಿರದ ತಹಸೀಲ್ದಾರ್ ಕಚೇರಿ, ಕಂದಾಯ ನಿರೀಕ್ಷಕರ ಕಚೇರಿ, ಗ್ರಾಮ ಲೆಕ್ಕಿಗರ ಕಚೇರಿ ಅಥವಾ ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಪಶುಸಂಗೋಪನೆ, ಸಹಕಾರ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಚೇರಿಗಳಿಗೆ ಕೂಡಲೇ ಒದಸಬೇಕು. ಎಲ್ಲಾ ಫಹಣಿಯ ದಾಖಲೆಗಳನ್ನು 15 ದಿನಗಳೊಳಗೆ ನೀಡಿ ನೋಂದಾಯಿಸಿಕೊಳ್ಳಬೇಕು ಎಂದು ಮಾಹಿತಿ ನೀಡಿದ್ದಾರೆ.

ಬರಗಾಲದಿಂದ ಬೆಳೆ ನಷ್ಟಕ್ಕೆ ದೊರೆಯುವ ಪರಿಹಾರವು ಫ್ರೂಟ್ಸ್ ತಂತ್ರಾಂಶದ ದಾಖಲೆಯನ್ವಯ ರೈತರ ಖಾತೆಗೆ ನೇರವಾಗಿ ಮುಂದಿನ ದಿನಗಳಲ್ಲಿ ಹಣ ಜಮೆಯಾಗಲಿದೆ. ಸದರಿ ಮಾಹಿತಿಯನ್ನು ಸರ್ಕಾರದ ವಿವಿಧ ಇಲಾಖೆಗಳ ಸವಲತ್ತುಗಳನ್ನು ನೀಡಲು ಮಾತ್ರ ಬಳಕೆ ಮಾಡುವುದರಿಂದ ರೈತರು ನಿರ್ಭೀತಿಯಿಂದ ತಮ್ಮ ಜಮೀನಿನ ಮಾಹಿತಿಯನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ನೋಂದಣಿ ಹೇಗೆ?

ರೈತ ತಮ್ಮ ಆಧಾರ್ ಕಾರ್ಡ್ ಪ್ರತಿ, ಬ್ಯಾಂಕ್ ಪಾಸ್‌ಪುಸ್ತಕದ ವಿವರ, ಮೊಬೈಲ್ ನಂಬರ್, ಜಾತಿ ಪ್ರಮಾಣ ಪತ್ರ, ಎಲ್ಲಾ ಜಮೀನಿನ ಸರ್ವೆ ನಂಬರ್‌ಗಳ ವಿವರಗಳನ್ನು ತಹಶೀಲ್ದಾರ್ ಕಚೇರಿ, ಕಂದಾಯ ನಿರೀಕ್ಷಕರ ಕಚೇರಿ, ಗ್ರಾಮ ಲೆಕ್ಕಿಗರ ಕಚೇರಿ, ನ್ಯಾಯಬೆಲೆ ಅಂಗಡಿ ಅಥವಾ ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಪಶುಸಂಗೋಪನೆ, ಸಹಕಾರ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕಚೇರಿಗಳಿಗೆ ಒದಗಿಸಿ ನೋಂದಣಿ ಮಾಡಿಕೊಳ್ಳಬೇಕು.

ಮೈಸೂರು ಮಿತ್ರ ಶುಕ್ರವಾರ 1 ಡಿಸೆಂಬರ್ 2023

ಹುಲಿ ಹಾವಳಿ; ಸ್ಥಳಕ್ಕೆ ಶಾಸಕ ಜಿ.ಟಿ.ದೇವೇಗೌಡರ ಭೇಟಿ

- ಎಚ್ಚರವಾಗಿರುವಂತೆ ಗ್ರಾಮಸ್ಥರಿಗೆ ಮನವರಿಕೆ
- ಕಾರ್ಯಾಚರಣೆಗೆ ಸಹಕರಿಸುವಂತೆ ಮನವಿ



ಮೈಸೂರು, ನ.30– ಮೈಸೂರು ತಾಲೂಕು, ಜಯಪುರ ಹೋಬಳಿ ಚಿಕ್ಕ ಕಾನ್ಯ ಹಾಗೂ ಸುತ್ತಮುತ್ತಲ ಗ್ರಾಮ ಗಳಲ್ಲಿ ಹುಲಿ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಹುಲಿ ಸೆರೆ ಕಾರ್ಯಾಚರಣೆ ಸ್ಥಳಕ್ಕೆ ಭೇಟಿ ನೀಡಿ ಅರಣ್ಯಾಧಿಕಾರಿಗಳಿಂದ ಮಾಹಿತಿ ಪಡೆದರು. ಜಯಪುರ ಹೋಬಳಿ ಸಿಂಧುವಳ್ಳಿ, ಬ್ಯಾತಹಳ್ಳಿ, ಚಿಕ್ಕಕಾನ್ಯ, ದೊಡ್ಡಕಾನ್ಯ ಗ್ರಾಮಗಳ ಮಧ್ಯದಲ್ಲಿ ಹುಲಿ ಕಾಣಿಸಿಕೊಂಡಿದ್ದು, ಗ್ರಾಮಸ್ಥರು ರಾತ್ರಿ ವೇಳೆಯಲ್ಲಿ ಅನಾವಶ್ಯಕವಾಗಿ ಓಡಾಡಬಾರದು. ಅನಾವಶ್ಯಕ ವದಂತಿ ಗಳನ್ನು ನಂಬಿ ಭಯಭೀತರಾಗದೆ ಕಾರ್ಯಾಚರಣೆ ಮುಗಿಯುವವರೆಗೆ ಅರಣ್ಯ ಇಲಾಖೆಯವರಿಗೆ ಸಹಕರಿಸ ಬೇಕು. ಟಿವಿಎಸ್ ಕಂಪನಿಯ ನೌಕರರು ರಾತ್ರಿ ಪಾಳಿ ಮುಗಿಸಿ ಹೋಗುವಾಗ ಎಚ್ಚರಿಕೆ ವಹಿಸುವಂತೆ ತಿಳಿ ಹೇಳಿದರು.

ಅರಣ್ಯ ಇಲಾಖೆಯವರು ನಡೆಸುವ ಹುಲಿ ಸೆರೆ ಕಾರ್ಯಾಚರಣೆಗೆ ಅಗತ್ಯವಾದ ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸುವಂತೆ ಇದೇ ವೇಳೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿ ಸಿದರಲ್ಲದೆ, ವ್ಯಾಪಕ ಕಾರ್ಯಾಚರಣೆ ಮೂಲಕ ಹುಲಿಯನ್ನು ಶೀಘ್ರ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ಈ ಸಂದರ್ಭ ದಲ್ಲಿ ಎಸಿಎಫ್ ಲಕ್ಷ್ಮಿಕಾಂತ್, ಆರ್‌ಎಫ್‌ಓ ಸುರೇಂದ್ರ, ಸ್ಥಳೀಯ ಮುಖಂಡರಾದ ಗೆಜ್ಜಗಳ್ಳಿ ಲೋಕೇಶ್, ಕೃಷ್ಣ ಸಿಂಧುವಳ್ಳಿ, ಚಿಕ್ಕಕಾನ್ಯ ಮಹದೇವಸ್ವಾಮಿ, ಹಾರೋಹಳ್ಳಿ ಸುರೇಶ್ ಮತ್ತಿತರರಿದ್ದರು.

ಒಂದನೇ ಪುಟದಿಂದ

ಎರಡು ಸಾವಿರ ಬೆಳೆ ಪರಿಹಾರ

ಬರ ಸಮೀಕ್ಷೆ ನಡೆಸಿ, ವರದಿ ನೀಡಿದೆ. ನಾವೆಲ್ಲಾ ಕೇಂದ್ರ ತಂಡವನ್ನು ಭೇಟಿ ಮಾಡಿ ಚರ್ಚಿಸಿ ಬರದ ಸ್ಥಿತಿ ವಿವರಿಸಿದ್ದೇವೆ. ದೇಶದ 12 ರಾಜ್ಯಗಳಲ್ಲಿ ಬರಗಾಲ ಸ್ಥಿತಿ ಇದೆ. 4663 ಕೋಟಿ ರೂ. ಬೆಳೆ ನಷ್ಟ ಪರಿಹಾರವನ್ನು ಕೇಂದ್ರಕ್ಕೆ ಕೇಳಿದ್ದೆವು. ಕೇಂದ್ರ ಸಚಿವರಿಗೂ ಮನವಿ ಮಾಡಿದ್ದೇವೆ. ಇವತ್ತಿನವರೆಗೂ ಕೇಂದ್ರ ಸಭೆಯನ್ನೇ ನಡೆಸಿಲ್ಲ. ಸಮಯ ಕೇಳಿದರೂ ಭೇಟಿಗೆ ಅವಕಾಶ ಕೊಟ್ಟಿಲ್ಲ ಎಂದು ಮುಖ್ಯಮಂತ್ರಿ ಆರೋಪಿಸಿದರು.

ಅಧಿಕಾರಿಗಳನ್ನಾದರೂ ಭೇಟಿ ಮಾಡಿ ಎಂದು ಹೇಳಿ ನಾನು ಮೂವರು ಸಚಿವರನ್ನು ದೆಹಲಿಗೆ ತೆರಳಲು ಹೇಳಿದ್ದೆ. 3 ಜನ ದೆಹಲಿಗೆ ಹೋಗಿ ಅಧಿಕಾರಿಗಳಿಗೆ ವಿವರಿಸಿದ್ದಾರೆ. ಕೇಂದ್ರ ಹಣಕಾಸು ಸಚಿವರನ್ನು ನಮ್ಮ ಸಚಿವರು ಭೇಟಿ ಮಾಡಿದ್ದಾರೆ.

ಆದರೂ ಕೇಂದ್ರ ಇವತ್ತಿನವರೆಗೆ ಸಭೆ ನಡೆಸಿಲ್ಲ. ಪರಿಹಾರ ನೀಡುವ ಪ್ರಕ್ರಿಯೆಯನ್ನೇ ಶುರು ಮಾಡಿಲ್ಲ. ರಾಜ್ಯದ 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ಆಗಿದೆ. ಕೇಂದ್ರ ಕೃಷಿ ಮತ್ತು ಗೃಹ ಸಚಿವರನ್ನು ನಾನೇ ಭೇಟಿ ಮಾಡಲು ಸಮಯ ಕೊಡಿ ಎಂದು ಪತ್ರ ಬರೆದಿದ್ದರೂ ಇವತ್ತಿನವರೆಗೂ ಸಮಯ ಕೊಟ್ಟಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಬಿತ್ತನೆ ವೈಫಲ್ಯ ಮತ್ತು ಮಧ್ಯಂತರ ವಿಮೆ ಪರಿಹಾರಕ್ಕೆ ರಾಜ್ಯ ಸರ್ಕಾರ ಈಗಾಗಲೇ 6.5 ಲಕ್ಷ ರೈತರಿಗೆ 460 ಕೋಟಿ ರೂ. ಬಿಡುಗಡೆ ಮಾಡಿದೆ. ಕುಡಿಯುವ ನೀರು, ಮೇವಿಗೆ 327 ಕೋಟಿ ರೂ. ಬಿಡುಗಡೆ, 780 ಕೋಟಿ ರೂ. ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿದೆ. ಅವರೂ ತಹಶೀಲ್ದಾರ್‌ಗಳಿಗೆ ಬಿಡುಗಡೆ ಮಾಡಿದ್ದಾರೆ. ಯಾವ ತಾಲೂಕುಗಳಲ್ಲೂ ಕುಡಿಯುವ ನೀರಿಗೆ ಸಮಸ್ಯೆ ಇಲ್ಲದಂತೆ ನಿರ್ವಹಿಸಿದ್ದೇವೆ. ಹಲವು ತಾಲೂಕುಗಳ 60 ಹಳ್ಳಿಗಳಲ್ಲಿ ಟ್ಯಾಂಕರ್ ಮೂಲಕ ನೀರಿನ ವ್ಯವಸ್ಥೆ ಮಾಡಿದ್ದೇವೆ. ಹೊರ ರಾಜ್ಯಕ್ಕೆ ಮೇವು ಹೋಗದಂತೆ ತಡೆದಿದ್ದೇವೆ. ಮೇವಿನ ಬೀಜ ವಿತರಣೆ ಮಾಡಿದ್ದೇವೆ. ಈಗ ಮೊದಲ ಕಂತಿನಲ್ಲಿ ಅರ್ಹ ರೈತರಿಗೆ ತಲಾ 2000 ರೂ.ವರೆಗೆ ಬೆಳೆ ಪರಿಹಾರ ಹಣ ನೀಡಲು ನಿರ್ಧರಿಸಿದ್ದೇವೆ. ಕೇಂದ್ರದಿಂದ ಹಣ ಬರುವವರೆಗೂ ಕಾಯಲು ಸಾಧ್ಯವಿಲ್ಲ ಎನ್ನುವ ಕಾರಣದಿಂದ ರಾಜ್ಯ ಸರ್ಕಾರ ಮೊದಲ ಕಂತು ಬಿಡುಗಡೆ ಮಾಡಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಸಿಬಿಐ ತನಿಖೆ

ಜಾಲ ಕಾರ್ಯ ನಿರ್ವಹಿಸಿರಬಹುದು ಎಂಬ ಕಾರಣದಿಂದ ಸಮಗ್ರ ತನಿಖೆಗೆ ಅನುಕೂಲ ವಾಗುವಂತೆ ಪ್ರಕರಣವನ್ನು ಸರ್ಕಾರ ಸಿಐಡಿಗೆ ವಹಿಸಿದೆ. ಇದಕ್ಕೂ ಮುನ್ನ ಇಂದು ಸಂಜೆ ಮಂಡ್ಯದಲ್ಲಿ ಭ್ರೂಣ ಲಿಂಗ ಪತ್ತೆ ನಡೆದ ಹಾಡ್ಯ ಗ್ರಾಮದ ಆಲೆಮನೆ ಹಾಗೂ ಭ್ರೂಣ ಹತ್ಯೆ ನಡೆದ ಮೈಸೂರಿನ ಉದಯಗಿರಿಯ ಮಾತಾ ಆಸ್ಪತ್ರೆಗೆ ಭೇಟಿ ನೀಡಿದ ನಂತರ ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಮಾತನಾಡಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಹೆಣ್ಣು ಭ್ರೂಣ ಹತ್ಯೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ದೊಡ್ಡ ಮಟ್ಟದ ತನಿಖೆಯ ಅಗತ್ಯವಿದೆ. ಈ ಪ್ರಕರಣ ಕೇವಲ ಒಂದು ಜಿಲ್ಲೆಗೆ ಸೀಮಿತವಾಗದೇ ರಾಜ್ಯವ್ಯಾಪ್ತಿ ನಡೆದಿರುವುದರಿಂದ ಎಸ್‌ಐಟಿ ಅಥವಾ ಸಿಐಡಿ ತನಿಖೆಯ ಅಗತ್ಯವಿದೆ. ಇದರ ಬಗ್ಗೆ ಈಗಾಗಲೇ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದೇನೆ. ಮುಖ್ಯಮಂತ್ರಿಗಳು ಗೃಹ ಸಚಿವರೊಂದಿಗೆ ಸಮಾಲೋಚನೆ ನಡೆಸಿ ತೀರ್ಮಾನ ಕೈಗೊಳ್ಳುತ್ತಾರೆ ಎಂದಿದ್ದರು.

ಗಡಿಯಲ್ಲಿ ಹುಲಿರಾಯ ಪ್ರತ್ಯಕ್ಷ

ಬ್ಯಾತಹಳ್ಳಿ, ಸಿಂಧುವಳ್ಳಿ ಪ್ರದೇಶದಲ್ಲಿ ಹುಲಿಯೊಂದು ಸಂಚರಿಸುತ್ತಿರುವುದನ್ನು ಜನ ಗಮನಿಸಿದ್ದರು. ಅರಣ್ಯ ಸಿಬ್ಬಂದಿ ಸ್ಥಳ ಪರಿಶೀಲನೆಗೆ ತೆರಳಿದ್ದಾಗ ಹುಲಿ ಹೆಜ್ಜೆ ಗುರುತು ಪತ್ತೆಯಾಗಿತ್ತು. ಮರು ದಿನ ಹುಲಿ ಕಬ್ಬಿನ ಗದ್ದೆಗೆ ಹೋಗುವುದನ್ನು ಅರಣ್ಯ ಸಿಬ್ಬಂದಿ ಗಮನಿಸಿದ್ದರು. ಈ ಹಿನ್ನೆಲೆಯಲ್ಲಿ ಹುಲಿ ಸೆರೆಗೆ 60 ಸಿಬ್ಬಂದಿ, 7 ಅಧಿಕಾರಿಗಳು, 30 ಥರ್ಮಲ್ ಸೆನ್ಸರ್ ಕ್ಯಾಮರಾ, 8 ಜಿಎಸ್‌ಎಂ ಕ್ಯಾಮರಾ, 2 ಪಿಟಿಝಡ್ ಕ್ಯಾಮರಾ, 4 ಐಆರ್ ಸಿಸಿ ಕ್ಯಾಮರಾ ಹಾಗೂ 3 ದೊಡ್ಡ ಬೋನ್ ಬಳಸಿಕೊಂಡು ಕಾರ್ಯಾಚರಣೆ ಮುಂದುವರೆಸಿದ್ದಾರೆ. ಹುಲಿ ಚಲನವಲನ ಪತ್ತೆಗೆ ದೊಡ್ಡಕಾನ್ಯ ಬಳಿ ಅಳವಡಿಸಿದ್ದ ಕ್ಯಾಮರಾ ಟ್ರಾಪ್‌ನಲ್ಲಿ ಕಳೆದ ರಾತ್ರಿ 10.41ರಲ್ಲಿ, ಹುಲಿ ಸುಳಿದಾಡಿರುವುದು ಪತ್ತೆಯಾಗಿದೆ. ಅಲ್ಲದೆ, ಮುಂಜಾನೆ 1.28 ಗಂಟೆಯಲ್ಲಿ ಟಿವಿಎಸ್ ಫ್ಯಾಕ್ಟರಿ ಕಾಂಪೌಂಡ್ ಬಳಿ ಅಳವಡಿಸಿದ್ದ ಕ್ಯಾಮರಾ ಟ್ರ್ಯಾಪ್‌ನಲ್ಲಿ ಹುಲಿ ಸಂಚರಿಸುತ್ತಿರುವ ದೃಶ್ಯ ಸೆರೆಯಾಗಿದೆ. ಕ್ಯಾಮರಾ ಟ್ರಾಪ್‌ನಲ್ಲಿ ಹುಲಿ ದೃಶ್ಯ ಸೆರೆಯಾಗಿರುವ ಜಾಡು ಹಿಡಿದು ಗುರುವಾರ ಬೆಳಗ್ಗೆ ಕಾರ್ಯಾಚರಣೆ ಆರಂಭಿಸಿದ ಅರಣ್ಯ ಸಿಬ್ಬಂದಿಗೆ ದೊಡ್ಡಕಾನ್ಯ ಬಳಿ ಕಬ್ಬಿನ ಗದ್ದೆಯೊಳಗೆ ಹುಲಿ ಹೋಗುತ್ತಿರುವುದು ಕಂಡು ಬಂದಿದೆ. ಅಲ್ಲದೆ ಸುತ್ತಮುತ್ತಲಿನ ಸ್ಥಳ ಪರಿಶೀಲಿಸಿದಾಗ ಸಮೀಪದಲ್ಲೇ ಜಾನುವಾರುವೊಂದನ್ನು ಬೇಟೆಯಾಡಿರುವುದು ಕಂಡು ಬಂದಿದೆ.

ಹುಲಿ ಸೆರೆಗೆ ದೊಡ್ಡ ಬೋನೊಂದನ್ನು(ಕ್ಯಾಟಲ್ ಪೆನ್ ಕೇಜ್) ತಂದು ಜಾನುವಾರು ಹತ್ಯೆ ಮಾಡಿರುವ ಸ್ಥಳದಲ್ಲಿರಿಸಲಾಗಿದೆ. ಅಲ್ಲದೆ, ಹುಲಿ ಕೊಂದಿರುವ ಜಾನುವಾರು ಕಳೇಬರವನ್ನು ದೊಡ್ಡ ಬೋನ್‌ನಲ್ಲಿರಿಸಲಾಗಿದೆ. ಹುಲಿ ಹಾದು ಹೋಗಿರುವ ಜಾಡಿನಲ್ಲಿ ಮತ್ತೊಂದು ಬೋನ್ ಇಡಲಾಗಿದ್ದು, ಅದರೊಳಗೆ ಬಂಡೀಪುರದ ಪಶುವೈದ್ಯ ಡಾ.ವಾಸಿಂ ಮಿರ್ಜಾ ಅವರನ್ನು ಅರವಳಿಕೆ ಮದ್ದಿನೊಂದಿಗೆ ಇರಿಸಲಾಗಿದೆ. ರಾತ್ರಿ ಹುಲಿ ಜಾನುವಾರುವಿನ ಮಾಂಸ ಭಕ್ಷಣೆಗೆ ಬರುವ ಸಾಧ್ಯತೆ ಇದ್ದು, ಆಗ ಬೋನಿಗೆ ಬೀಳುವ ಸಂಭವವಿದೆ. ಒಂದು ವೇಳೆ ಹುಲಿ ಬೋನ್ ಒಳಗೆ ಹೋಗದಿದ್ದರೆ, ಅದಕ್ಕೆ ಅರವಳಿಗೆ ಮದ್ದು ನೀಡಿ ಸೆರೆ ಹಿಡಿಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಆತಂಕ ಮೂಡಿಸಿರುವ ಹುಲಿರಾಯ: ದೊಡ್ಡಕಾನ್ಯ ಬಳಿ ಕಾಣಿಸಿಕೊಂಡು ಸುತ್ತಮುತ್ತಲಿನ ಗ್ರಾಮಗಳ ಜನರಲ್ಲಿ ಆತಂಕ ಮೂಡಿಸಿದೆ. ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯದಿಂದ ಭಾರಿ ಅಂತರದಲ್ಲಿರುವ ದೊಡ್ಡಕಾನ್ಯ, ಚಿಕ್ಕಕಾನ್ಯ ಗ್ರಾಮದ ಬಳಿ ಅರಣ್ಯ ಪ್ರದೇಶ ಇಲ್ಲದಿದ್ದರೂ ಹುಲಿ ಸಂಚಾರ ಕುತೂಹಲ ಮೂಡಿಸಿದೆ. ಈ ಹುಲಿಗೆ ಒಂದೂವರೆಯಿಂದ ಎರಡು ವರ್ಷ. ಬಂಡೀಪುರ ಅಥವಾ ನಾಗರಹೊಳೆ ಅಭಯಾರಣ್ಯದಲ್ಲಿ ತಾಯಿಯಿಂದ ಬೇರ್ಪಟ್ಟು ಸರಹದ್ದು ಗುರುತಿಸಿಕೊಳ್ಳಲು ವಲಸೆ ಬಂದಿರುವ ಸಾಧ್ಯತೆ ಇದೆ. ಅಲ್ಲದೆ, ಸರಹದ್ದಿಗಾಗಿ ವಲಸೆ ಹೋಗುವ ಮಾರ್ಗದಲ್ಲಿ ದೊಡ್ಡಕಾನ್ಯ ಸುತ್ತಮುತ್ತಲಿನ ಗ್ರಾಮಗಳ ಕಬ್ಬಿನ ಗದ್ದೆಯಲ್ಲಿ ಆಶ್ರಯ ಪಡೆದು ಜಾನುವಾರುಗಳನ್ನು ಬೇಟೆಯಾಡುತ್ತಿರಬಹುದು ಎಂದು ಅಂದಾಜಿಸಲಾಗಿದೆ.

ಅದನ್ನು ಸುರಕ್ಷಿತವಾಗಿ ಸೆರೆ ಹಿಡಿಯಲು ವಿವಿಧ ವಲಯಗಳ 60 ಸಿಬ್ಬಂದಿ, 7 ಅಧಿಕಾರಿಗಳು, 30 ಥರ್ಮಲ್ ಸೆನ್ಸರ್ ಕ್ಯಾಮರಾ, 8 ಜಿಎಸ್‌ಎಂ ಕ್ಯಾಮರಾ, 2 ಪಿಟಿಝಡ್ ಕ್ಯಾಮರಾ, ಐಆರ್ ಸಿಸಿ ಕ್ಯಾಮರಾ 4, 3 ಬೋನ್ ಬಳಸಿಕೊಳ್ಳಲಾಗಿದೆ. ಹುಲಿ ಸಂಚರಿಸುತ್ತಿದೆ ಎಂಬ ಮಾಹಿತಿ ಆಧರಿಸಿ ಚಿಕ್ಕಕಾನ್ಯ, ದೊಡ್ಡಕಾನ್ಯ, ಬ್ಯಾತಹಳ್ಳಿ, ಸಿಂಧುವಳ್ಳಿ ಗ್ರಾಮಗಳಲ್ಲಿ ಕ್ಯಾಮರಾ ಟ್ರಾಪ್ ಅಳವಡಿಸಿ, ಹುಲಿ ಜಾಡು ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಕಾರ್ಯಾಚರಣೆ ಸ್ಥಳಕ್ಕೆ ಹುಲಿ ಯೋಜನೆಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮಾನವ–ವನ್ಯಜೀವಿ ತಡೆಗೆ ಮೈಸೂರು ಜಿಲ್ಲೆಯ ನೋಡಲ್ ಅಧಿಕಾರಿಯಾಗಿರುವ ಶಾಶ್ವತಿ ಮಿಶ್ರ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಹಾಗೂ ಡಿಸಿಎಫ್ ಡಾ.ಕೆ.ಎನ್.ಬಸವರಾಜು, ಎಸಿಎಫ್ ಎನ್.ಲಕ್ಷ್ಮೀಕಾಂತ, ಆರ್‌ಎಫ್‌ಓ ಕೆ.ಸುರೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರ ದಟ್ಟಣೆ: ಹಾಲಿ ಇರುವ 52ರ ಜೊತೆಗೆ ಮೈಸೂರು ನಗರದ

ಇನ್ನೂ 10 ಸರ್ಕಲ್‌ಗಳಿಗೆ ಸಿಗ್ನಲ್ ಲೈಟ್ ಅಳವಡಿಕೆ



ಮೈಸೂರು, ನ.30(ಆರ್‌ಕೆ)– ಮೈಸೂರು ನಗರ ಬೆಳೆದಂತೆ ಜನಸಂಖ್ಯೆಗೆ ಅನುಗುಣವಾಗಿ ವಾಹನಗಳ ಸಂಖ್ಯೆಯೂ ಹೆಚ್ಚಾಗುತ್ತಿವೆ. ಕೆಎಸ್‌ಆರ್‌ಟಿಸಿ ನಗರ ಮತ್ತು ಗ್ರಾಮಾಂತರ ಸಾರಿಗೆ ಬಸ್ಸುಗಳು ಶಕ್ತಿ ಯೋಜನೆ ಜಾರಿಗೆ ಬಂದ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಾಚರಣೆ ಮಾಡುತ್ತಿರುವುದರಿಂದ ಪ್ರಯಾಣಿಕರು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ.

ಜೊತೆಗೆ ಆಟೋ, ಟ್ಯಾಕ್ಸಿ, ಓಲಾ, ಊಬರ್, ಖಾಸಗಿ ಬಸ್ಸು, ಕಾರು, ದ್ವಿಚಕ್ರ ವಾಹನಗಳು, ಮನೆ–ಮನೆಗೆ ಆಹಾರ, ಗೃಹೋಪಯೋಗಿ ವಸ್ತುಗಳನ್ನು ತಲುಪಿಸುವ ವಾಹನಗಳ ಸಂಚಾರವೂ ಹೆಚ್ಚಾಗಿರುವುದರಿಂದ ಮೈಸೂರಿನ ಎಲ್ಲಾ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಅಧಿಕಗೊಳ್ಳುತ್ತಿದೆ. ವಾಹನ ಸಂಚಾರ ನಿರ್ವಹಣೆಗಾಗಿ ಹಲವು ವರ್ಷಗಳ ಹಿಂದೆ ಮೈಸೂರಿನ ಬಹುತೇಕ ಪ್ರಮುಖ ರಸ್ತೆಗಳಲ್ಲಿನ ಸರ್ಕಲ್, ಜಂಕ್ಷನ್‌ಗಳಿಗೆ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದ್ದು, ಪ್ರಸ್ತುತ 52

ವಾರದೊಳಗೆ ಹೆಚ್ಚುವರಿ ಸಿಗ್ನಲ್ ಲೈಟ್‌ಗಳು ಕಾರ್ಯಾರಂಭ

ಸಿಗ್ನಲ್ ಲೈಟ್‌ಗಳು ಕಾರ್ಯ ನಿರ್ವಹಿಸುತ್ತಿವೆ. ನಗರದ ಹೃದಯ ಭಾಗದ ಕೆಆರ್. ಸರ್ಕಲ್, ಸಂಸ್ಕೃತ ಪಾಠಶಾಲೆ ಸರ್ಕಲ್, ರಾಮಸ್ವಾಮಿ ಸರ್ಕಲ್, ಮುಡಾ ಸರ್ಕಲ್, ಮೆಟ್ರೋಪೋಲ್ ಸರ್ಕಲ್, ದಾಸಪ್ಪ ವೃತ್ತ, ನೆಹರು ಸರ್ಕಲ್, ಕಲಾ ಮಂದಿರ ಜಂಕ್ಷನ್, ವಾಲ್ಮೀಕಿ ರಸ್ತೆ ಜಂಕ್ಷನ್, ಪಡುವಾರಹಳ್ಳಿ ಜಂಕ್ಷನ್, ಒಂಟಿಕೊಪ್ಪಲು ಸರ್ಕಲ್, ಆಕಾಶವಾಣಿ ಸರ್ಕಲ್, ಓಲ್ಡ್ ಆರ್‌ಎಂಸಿ ಸರ್ಕಲ್, ಕುಕ್ಕರಹಳ್ಳಿ ಕೆರೆ ಜಂಕ್ಷನ್, ಬೋಗಾದಿ ಜಂಕ್ಷನ್ ಸೇರಿದಂತೆ ಮೈಸೂರು ನಗರದಾದ್ಯಂತ 52 ಕಡೆ ಸಿಗ್ನಲ್ ಲೈಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಸಂಚಾರ ನಿಯಂತ್ರಿಸುತ್ತಿವೆ.

ಆದರೆ, ಇದೀಗ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಸುಗಮ ಸಂಚಾರಕ್ಕಾಗಿ ಮತ್ತೆ 10 ಹೆಚ್ಚುವರಿ ಸರ್ಕಲ್‌ಗಳಿಗೆ ಹೊಸದಾಗಿ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಲು ಸಂಚಾರ ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಹೆಚ್ಚುವರಿ ಸರ್ಕಲ್‌ಗಳ ಬಳಿ ಕಬ್ಬಿಣದ ಕಂಬಗಳನ್ನು ಅಳವಡಿಸುವ ಕಾರ್ಯ ಆರಂಭವಾಗಿದ್ದು, ವಾರದೊಳಗೆ ಇಲ್ಲಿಯ ಸಿಗ್ನಲ್ ಲೈಟ್‌ಗಳು ಚಾಲನೆಗೊಳ್ಳಲಿವೆ ಎಂದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಜೆಎಲ್‌ಬಿ ರಸ್ತೆಯ ಆರ್‌ಟಿಓ ವೃತ್ತ, ಅಗ್ರಹಾರ ವೃತ್ತ ಕ್ರಾಫರ್ಡ್ ಹಾಲ್ ಬಳಿಯ ಕೌಟಿಲ್ಯ ವೃತ್ತ, ರಿಂಗ್ ರೋಡ್‌ನ ರಾಜರಾಜೇಶ್ವರಿ ನಗರ ಸರ್ಕಲ್, ಜೆ.ಪಿ.ನಗರದ ಅಕ್ಕಮಹಾದೇವಿ ರಸ್ತೆ ಜಂಕ್ಷನ್, ಬನ್ನೂರು ರಸ್ತೆಯ ದೇವೇಗೌಡ ಸರ್ಕಲ್, ಸಾತಗಳ್ಳಿ ಡಿಪೋ ಜಂಕ್ಷನ್, ವಿಜಯನಗರ 4ನೇ ಹಂತದ ರಿಂಗ್ ರಸ್ತೆ–ಬಸವನಹಳ್ಳಿ ಜಂಕ್ಷನ್, ಹಿನಕಲ್ ರಿಂಗ್ ರೋಡ್ ಜಂಕ್ಷನ್ ಹಾಗೂ ನಜರ್‌ಬಾದ್ ಸರ್ಕಲ್‌ಗಳಲ್ಲಿ ಹೊಸದಾಗಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಒಂದು ವಾರದೊಳಗೆ ಅವು ಕಾರ್ಯಾರಂಭ ಮಾಡಲಿದ್ದು, ಮೈಸೂರಲ್ಲಿ ಒಟ್ಟು 62 ಕಡೆ ಸಿಗ್ನಲ್ ಲೈಟ್ ಕಾರ್ಯ ನಿರ್ವಹಿಸಿದಂತಾಗುತ್ತದೆ. ವಾಹನ ಸವಾರರು ಸಂಚಾರ ನಿಯಮ ಪಾಲಿಸುವ ಮೂಲಕ ಅಪಘಾತ ನಿಯಂತ್ರಿಸಿ ಸಂಚಾರ ಸುಗಮಗೊಳಿಸಲು ಸಹಕರಿಸಬೇಕೆಂದು ಪರಶುರಾಮಪ್ಪ ತಿಳಿಸಿದ್ದಾರೆ.



ಮೈಸೂರಿನ ಚಾಮುಂಡಿ ಬೆಟ್ಟ ಗ್ರಾಮಪಂಚಾಯಿತಿ ಕಚೇರಿಯಲ್ಲಿ ದಾಸ ಶ್ರೇಷ್ಠ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ನಾಗಮ್ಮ, ಮಾಜಿ ಅಧ್ಯಕ್ಷ ಭರತ್.ಕೆ, ಮಂಜುನಾಥ್, ಪಿಡಿಓ ರೂಪೇಶ್ ಕುಮಾರ್, ಸದಸ್ಯರಾದ ಶಂಭುಲಿಂಗ,ಮುಖಂಡ ವೆಂಕಟೇಶ್, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಮೈಸೂರಿನ ಸಮಾನ ಮನಸ್ಕರ ಬಳಗದ ವತಿಯಿಂದ ದಾಸ ಶ್ರೇಷ್ಠ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷೆ ಪಿ.ರಾಜೇಶ್ವರಿ, ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ, ಕೆ.ಸೋಮಶೇಖರರಾಜು, ಸಚಿನ್ ಆರ್. ಗೌಡ, ಸಿ.ಡಿ.ಕುಮಾರ್, ಬಿ.ಕುಮಾರ್, ರಾಜಣ್ಣ, ಸುರೇಂದ್ರ, ಲೋಹಿತ್, ಶ್ರೀನಿವಾಸ್ ಮತ್ತಿತರರು ಭಾಗವಹಿಸಿದ್ದರು.



ಮೈಸೂರಿನ ಪ್ರಭಾ ಚಿತ್ರಮಂದಿರದ ಬಳಿ ಆಚರಿಸಲಾದ ಕನ್ನಡ ರಾಜ್ಯೋತ್ಸವದಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಎಂ.ಸತೀಶ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಅರವಿಂದ, ಹರೀಶ್, ನಾರಾಯಣಸ್ವಾಮಿ, ಪಂಕಜ್ ಮತ್ತಿತರರಿದ್ದರು.

ಅತೀಯಾದ ತಂತ್ರಜ್ಞಾನ ಅವಲಂಬನೆ ಮಕ್ಕಳಲ್ಲಿ ಕನ್ನಡ ಪ್ರೀತಿ ಕ್ಷೀಣಿಸಲು ಕಾರಣ

ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಗಂಗಾನಾಯಕ್ ವಿಷಾದ



ಮೈಸೂರು, ನ.30(ಎಸ್‌ಬಿಡಿ)– ಮೊಬೈಲ್ ಇನ್ನಿತರ ತಂತ್ರಜ್ಞಾನದ ಅವಲಂಬನೆ ಹೆಚ್ಚುತ್ತಿರುವ ಪರಿಣಾಮ ಮಕ್ಕಳಲ್ಲಿ ಕನ್ನಡದ ಮೇಲಿನ ಪ್ರೀತಿ ಕ್ಷೀಣಿಸುತ್ತಿದೆ ಎಂದು ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಗಂಗಾನಾಯಕ್ ಕಳವಳ ವ್ಯಕ್ತಪಡಿಸಿದರು.

ಮೈಸೂರು ಮಂಚೇಗೌಡನಕೊಪ್ಪಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ನಡೆದ ಕನ್ನಡ ರಾಜ್ಯೋತ್ಸವ ಹಾಗೂ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ತಂತ್ರಜ್ಞಾನ ಬಳಕೆ ವಿಪರೀತವಾಗುತ್ತಿದೆ. ಇದರಿಂದ ಇಂಗ್ಲಿಷ್ ಬಳಕೆಯೂ ಹೆಚ್ಚಾಗುತ್ತಿದೆ. ಪರಿಣಾಮವಾಗಿ ಮಕ್ಕಳಲ್ಲಿ ಕನ್ನಡ ಪ್ರೀತಿ ಕ್ಷೀಣಿಸುತ್ತಿದೆ. ಇದು ಮುಂದುವರೆಯದಂತೆ ಜಾಗ್ರತೆ ವಹಿಸಿ, ಮಕ್ಕಳಿಗೆ ಅರಿವು ಮೂಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ವ್ಯಾಮೋಹ ಬಿಡಿ: ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ಪಡೆದು ಶ್ರೇಷ್ಠ ವಿಜ್ಞಾನಿಗಳಾಗಿದ್ದಾರೆ. ಕನ್ನಡದಲ್ಲೇ ಪರೀಕ್ಷೆ ಬರೆದು ಐಎಎಸ್ ಅಧಿಕಾರಿಗಳಾಗಿರುವ ನಿದರ್ಶನಗಳಿವೆ. ಎಂಟು ಜ್ಞಾನಪೀಠ ಪುರಸ್ಕಾರ ಸೇರಿದಂತೆ ಕನ್ನಡಕ್ಕೆ ಸಂದಿರುವಷ್ಟು ಮೇರು ಪ್ರಶಸ್ತಿಗಳು ಇತರ ಭಾಷೆಗಳಿಗೆ ದಕ್ಕಿಲ್ಲ. ಕನ್ನಡ ಭಾಷೆಯ ಪರಂಪರೆ ಬಗ್ಗೆ ಹೆಮ್ಮೆ ಪಡಬೇಕು. ಆದರೆ ಇತ್ತೀಚೆಗೆ ಕನ್ನಡಿಗರಲ್ಲಿ ಇಂಗ್ಲಿಷ್ ವ್ಯಾಮೋಹ ಹೆಚ್ಚಾಗಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ ಕನ್ನಡಿಗರೆಲ್ಲರೂ ಕಟಿಬದ್ಧರಾಗಬೇಕು. ಇತರೆ ಭಾಷೆಗಳ ಮೇಲಿನ ವ್ಯಾಮೋಹದಿಂದ ಕನ್ನಡದ ಅಸ್ಮಿತೆಗೆ ಧಕ್ಕೆಯಾಗಬಾರದು. ಕನ್ನಡವನ್ನು ಕೇವಲ ಕೊರಳ ಭಾಷೆಯಾಗಿ ಬಳಸದೆ ಕರುಳ ಭಾಷೆಯಾಗಿಸಿಕೊಳ್ಳಬೇಕು ಎಂದು ಆಶಿಸಿದರು.

ವಿಶ್ವಶ್ರೇಷ್ಠ ಸಂವಿಧಾನ: ವಿಭಜಿತ ಮಹಾರಾಜ ಕಾಲೇಜಿನ ಉಪನ್ಯಾಸಕ ಎಂ.ಸಿ.ಪ್ರಶಾಂತ್ ಮಾತನಾಡಿ, ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಸಂಕೇತವಾಗಿರುವ ಭಾರತದ ಸಂವಿಧಾನ ವಿಶ್ವ ಶ್ರೇಷ್ಠತೆಯನ್ನು ಪಡೆದಿದೆ. ಇದರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿಶ್ರಮ ಅಡಗಿದೆ. ಸಂವಿಧಾನದಡಿಯಲ್ಲಿ ಎಲ್ಲರೂ ಸಮಾನರು. ಕಡುಬಡವನಾಗಲೀ, ಭಾರಿ ಶ್ರೀಮಂತನಾಗಲೀ ಎಲ್ಲರೂ ಒಂದೇ. ಸಮಾಜದಲ್ಲಿ ಎಲ್ಲರೂ ಸಮಾನರೆಂಬ ಸಾರ್ವಭೌಮತ್ವ ಸಾರುವ ಶ್ರೇಷ್ಠ ಸಂವಿಧಾನ ನಮ್ಮದು ಎಂದು ಬಣ್ಣಿಸಿದರು.

ಅಭಿವೃದ್ಧಿ ಭರವಸೆ: ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ರವಿ ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಅಮೂಲ್ಯ ಮಾಹಿತಿಗಳನ್ನು ಒದಗಿಸುತ್ತವೆ. ಜೊತೆಗೆ ದೇಶ, ನಾಡು–ನುಡಿಯ ಮಹತ್ವ ಮನದಟ್ಟಾಗುತ್ತದೆ. ಕಲಿಕೆ ಜೊತೆಗೆ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವವಿರಬೇಕು. ಆಸಕ್ತಿ, ಪರಿಶ್ರಮದಿಂದ ಅಧ್ಯಯನ ಮಾಡಿ, ನಿಖರ ಗುರಿಯತ್ತ ಮುನ್ನಡೆಯಬೇಕು ಎಂದು ಕಿವಿಮಾತು ಹೇಳಿದರಲ್ಲದೆ ಕಾಲೇಜಿನ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಬಿ.ಸಿ.ಶಿವಮಲ್ಲು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕರಾದ ಎಂ.ಶ್ರೀಕಂಠಯ್ಯ, ವಿಶಾಲಾಕ್ಷಿ, ಜಿ.ಜೆ. ರೇವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಸ್ನೇಕ್ ಶ್ಯಾಂ ಮನೆಯಲ್ಲಿದ್ದ ಕೋತಿ, ಆಮೆಗಳ ವಶಕ್ಕೆ ಪಡೆದ ಅರಣ್ಯ ಸಂಚಾರ ದಳದ ಸಿಬ್ಬಂದಿ

ವನ್ಯಜೀವಿ ಸಂರಕ್ಷಣಾ ಕಾಯ್ದೆ ಅರಿವಿಲ್ಲದೆ ಈ ಪ್ರಾಣಿಗಳ ಆರೈಕೆ ಮಾಡುತ್ತಿದ್ದುದಾಗಿ ತಪ್ಪೊಪ್ಪಿಗೆ; ಪ್ರಕರಣ ದಾಖಲು

ಮೈಸೂರು, ನ.30(ಎಂಟಿವೈ)–ಅರಣ್ಯ ಸಂಚಾರ ದಳದ ಪೊಲೀಸರು ಉರಗ ತಜ್ಞ ಸ್ನೇಕ್ ಶ್ಯಾಂ ಅವರ ಮನೆಯಿಂದ ಎರಡು ಕೋತಿ ಹಾಗೂ ಮೂರು ಆಮೆಗಳನ್ನು ವಶಪಡಿಸಿಕೊಂಡು ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

ವನ್ಯಜೀವಿಗಳನ್ನು ಮನೆಯಲ್ಲಿ ಸಾಕುವುದು ಕಾಯ್ದೆ ಪ್ರಕಾರ ಅಪರಾಧ. ಆದರೆ ಸ್ನೇಕ್ ಶ್ಯಾಂ ಅವರು ಗಾಯಗೊಂಡಿದ್ದ ಎರಡು ಕೋತಿಗಳು ಹಾಗೂ ಅನಾರೋಗ್ಯಕ್ಕೊಳಗಾಗಿದ್ದ ಮೂರು ಆಮೆಗಳನ್ನು ಆರೈಕೆ ಮಾಡಿ ಅವು ಗುಣಮುಖವಾದ ನಂತರ ಸ್ವಸ್ಥಾನಕ್ಕೆ ಬಿಡುವ ಉದ್ದೇಶ ಹೊಂದಿದ್ದರು. ಆದರೆ ತಾವು ಈ ಪ್ರಾಣಿಗಳನ್ನು ಆರೈಕೆ ಮಾಡುತ್ತಿರುವ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡದೇ ಇರುವುದಕ್ಕೆ ಅವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ.

ಸ್ನೇಕ್ ಶ್ಯಾಂ ಕೇವಲ ಹಾವುಗಳ ಸಂರಕ್ಷಣೆ ಮಾಡುವುದೇ ಅಲ್ಲದೆ ಪ್ರಾಣಿಪ್ರಿಯರೂ ಆಗಿದ್ದು, ಯಾವುದೇ ಗಾಯಗೊಂಡ, ಇಲ್ಲವೇ ಅನಾರೋಗ್ಯಕ್ಕೀಡಾಗಿದ್ದ ಪ್ರಾಣಿ–ಪಕ್ಷಿಯನ್ನು ಮನೆಗೆ ತಂದು ತಮ್ಮದೇ ವೆಚ್ಚದಲ್ಲಿ ಆರೈಕೆ ಮಾಡಿ ಅವು ಚೇತರಿಸಿಕೊಂಡ ನಂತರ ಅವುಗಳನ್ನು ಸ್ವಸ್ಥಾನಕ್ಕೆ ಬಿಡುವುದನ್ನು ಹವ್ಯಾಸವಾಗಿಸಿಕೊಂಡಿದ್ದಾರೆ. ಅದರಂತೆ ಕಳೆದ ಎರಡ್ಮೂರು ತಿಂಗಳ ಹಿಂದೆ ಆಲನಹಳ್ಳಿಯಲ್ಲಿ ಗಾಯಗೊಂಡಿದ್ದ ಹಾಗೂ ಶ್ರೀರಾಂಪುರದಲ್ಲಿ ವಿದ್ಯುತ್ ಸ್ಪರ್ಶಕ್ಕೊಳಗಾಗಿದ್ದ ಕೋತಿಗಳು ಮತ್ತು ಕುಕ್ಕರಹಳ್ಳಿ ಕೆರೆ ಹಾಗೂ ಹೆಬ್ಬಾಳ ಕೆರೆ ಬಳಿ ನರಳುತ್ತಿದ್ದ ಮೂರು ಆಮೆಗಳನ್ನು ತಮ್ಮ ಮನೆಗೆ ತಂದು ಆರೈಕೆ ಮಾಡುತ್ತಿದ್ದರು. ಆದರೆ ಶ್ಯಾಂ ಅವರ ಹವ್ಯಾಸದ ಬಗೆಗೆ ತಿಳುವಳಿಕೆ ಇಲ್ಲದವರು ಈ ಸಂಬಂಧ ಅರಣ್ಯ ಸಂಚಾರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ಮಾಹಿತಿಯನ್ವಯ ಶ್ರೀರಂಗಪಟ್ಟಣ ತಾಲೂಕು ಮೊಗರಹಳ್ಳಿ ಮಂಟಿ ಗ್ರಾಮದಲ್ಲಿರುವ ಸ್ನೇಕ್ ಶ್ಯಾಂ ಅವರ ಮನೆಗೆ ಭೇಟಿ ನೀಡಿದ ಅರಣ್ಯ ಸಂಚಾರ ದಳದ ಪೊಲೀಸರು, ಕೋತಿ ಹಾಗೂ ಆಮೆಯನ್ನು ವಶಪಡಿಸಿಕೊಂಡು ಕೋತಿಗಳನ್ನು ಪೀಪಲ್ ಫಾರ್ ಅನಿಮಲ್ ಸಂಸ್ಥೆಗೆ ಹಾಗೂ ಆಮೆಗಳನ್ನು ಶ್ರೀರಂಗಪಟ್ಟಣ ಆರ್‌ಎಫ್‌ಓ ವಶಕ್ಕೆ ನೀಡುವುದರ ಜೊತೆಗೆ ಸ್ನೇಕ್ ಶ್ಯಾಂ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಅವರ ಹೇಳಿಕೆ ಪಡೆದು ನೋಟಿಸ್ ನೀಡಿದ್ದಾರೆ.

ತಾವು ಈ ಪ್ರಾಣಿಗಳನ್ನು ಮಾನವೀಯತೆ ದೃಷ್ಟಿಯಿಂದ ಆರೈಕೆ ಮಾಡುತ್ತಿರುವ ಬಗ್ಗೆ ಅರಣ್ಯ ಇಲಾಖೆಯ ಗಮನಕ್ಕೆ ತಾರದೇ ಸ್ನೇಕ್ ಶ್ಯಾಂ ಸಣ್ಣ ಪ್ರಮಾದ ಎಸಗಿದ್ದಾರೆ ಎಂದು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ಮನೆಗೆ ಬಂದ ಅರಣ್ಯ ಸಂಚಾರಿ ಪೊಲೀಸರಿಗೆ ಸ್ನೇಕ್ ಶ್ಯಾಂ ಅವರು ಕೋತಿ ಹಾಗೂ ಆಮೆಗಳನ್ನು ಅವರಿಗೆ ತೋರಿಸಿ, ಅದು ಹೇಗೆ ತಮ್ಮ ಬಳಿ ಬಂದವು ಎಂಬುದರ ಬಗ್ಗೆ ವಿವರಣೆ ನೀಡಿದ್ದಾರೆ.

ಎರಡು ಆಮೆಗಳ ಮೇಲೆ ವಾಹನ ಹರಿದು ಗಾಯಗೊಂಡಿದ್ದರೆ, ಮತ್ತೊಂದು ಆಮೆ ಅನಾರೋಗ್ಯಕ್ಕೆ ಒಳಗಾಗಿತ್ತು. ಕೋತಿಗಳೂ ಗಾಯಗೊಂಡು ಆರೈಕೆಯಲ್ಲಿದ್ದವು ಎಂಬುದನ್ನು ಅವರು ಮನವರಿಕೆ ಮಾಡಿಕೊಟ್ಟಿದ್ದಾರೆ. ಅಲ್ಲದೆ ಅನುಮತಿ ಪಡೆಯಬೇಕೆಂಬ ತಿಳುವಳಿಕೆ ತಮಗಿರಲಿಲ್ಲ ಎಂದು ತಿಳಿಸಿದ ಅವರು, ಅಧಿಕಾರಿಗಳಲ್ಲಿ ಕ್ಷಮೆಯನ್ನೂ ಕೋರಿದ್ದಾರೆ. ಆದರೂ ಕಾನೂನು ದೃಷ್ಟಿಯಲ್ಲಿ ವನ್ಯಜೀವಿಗಳನ್ನು ಅನುಮತಿ ಇಲ್ಲದೇ ಮನೆಯಲ್ಲಿ ಸಾಕುವುದು ಅಪರಾಧವಾದ ಕಾರಣ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ.

ಪ್ರೀತಿಸಿ ಮದುವೆಯಾಗಿದ್ದ! ಆದರೆ ಅನುಮಾನ ಭೂತ ಹೊಕ್ಕಿ ಪತ್ನಿಗೆ ಇರಿದು ಆಕೆ ಸತ್ತಳೆಂದು ಭಾವಿಸಿ ನೇಣಿಗೆ ಶರಣಾದ!

● ಅನುಮಾನದಿಂದ ಅನಾಹುತವೇ ನಡೆದೋಯ್ತು! ● ಬೈಲುಕುಪ್ಪೆ ಬಳಿ ದುರಂತ

ಬೈಲುಕುಪ್ಪೆ, ನ.30–ಯುವಕನೋರ್ವ ಪ್ರೀತಿಸಿ ವಿವಾಹವಾಗಿದ್ದು, ಆದರೆ ನಂತರ ಆತನಲ್ಲಿ ಅನುಮಾನದ ಹುಳ ಹೊಕ್ಕಿ, ಕೊನೆಗೆ ಆಕೆಯನ್ನು ಮುಗಿಸಲು ನಿರ್ಧರಿಸಿದ. ಅಂತೂ ಚಾಕುವಿನಿಂದ ಇರಿದು, ಅವಳು ಸತ್ತೇ ಹೋದಳೆಂದು ಭೀತಿಗೊಳಗಾಗಿ ತಾನೂ ನೇಣು ಬಿಗಿದುಕೊಂಡು ಜೀವನ ಕೊನೆಗಾಣಿಸಿಕೊಂಡ. ಈ ಒಂದು ವಿಚಿತ್ರ ಹಾಗೂ ಆಘಾತಕಾರಿ ಘಟನೆ ಪಿರಿಯಾಪಟ್ಟಣ ತಾಲೂಕು ಮುತ್ತಿನ ಮುಳ್ಳುಸೋಗೆ ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.

ಗ್ರಾಮದ ಯುವಕ ಪ್ರಸನ್ನ(26) ನೇಣಿಗೆ ಶರಣಾದವನಾಗಿದ್ದು, ಈತನಿಂದ ಇರಿತಕ್ಕೊಳಗಾದ ಪತ್ನಿ ಶ್ವೇತಾ(22) ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಈಗ ಚಿಕಿತ್ಸೆ ಪಡೆಯುತ್ತಿದ್ದಾರೆ. ಶ್ವೇತಾ ಕುಶಾಲನಗರದ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ಪ್ರಸನ್ನ ಖಾಸಗಿ ಫೈನಾನ್ಸ್‌ವೊಂದರಲ್ಲಿ



ನೇಣಿಗೆ ಶರಣಾದ ಪ್ರಸನ್ನ

ಕೆಲಸ ಮಾಡುತ್ತಿದ್ದ. ಇಬ್ಬರೂ ಗ್ರಾಮದ ಎದುರು–ಬದುರು ಮನೆಯಲ್ಲಿ ವಾಸಿಸುತ್ತಿದ್ದರು. ಹಾಗೂ ಒಬ್ಬರನ್ನೊಬ್ಬರು ಗಾಢವಾಗಿ ಪ್ರೀತಿಸುತ್ತಿದ್ದರು. ನಂತರ ಎರಡು ಕುಟುಂಬದವರ ಸಮ್ಮತಿ ಮೇರೆಗೆ 2022ರ ಮೇ ತಿಂಗಳಲ್ಲಿ ವಿವಾಹವಾದರು. ಆದರೆ ಪ್ರಸನ್ನ ನಂತರದ ದಿನಗಳಲ್ಲಿ ತನ್ನ ಪತ್ನಿ ಮೇಲೆ ಸಂಶಯಗೊಂಡು ಪದೇ ಪದೆ ಜಗಳ ಮಾಡುತ್ತಿದ್ದ.


ಇವರ ಕಲಹ ಪೊಲೀಸ್ ಠಾಣೆ ಮೆಟ್ಟಲೇರಿ ಪೊಲೀಸರು ಮತ್ತು ಗ್ರಾಮಸ್ಥರು ಇಬ್ಬರಿಗೂ ಬುದ್ಧಿ ವಾದ ಹೇಳಿ ಒಂದಾಗಿ ಬಾಳುವಂತೆ ತಿಳಿಹೇಳಿದ್ದರು. ಸಂಶಯ ಪಿಶಾಚಿ ಹೊಕ್ಕಿದ್ದ ಪತಿ, ಪತ್ನಿ ಕೆಲಸ ಮಾಡುತ್ತಿದ್ದ ಕುಶಾಲನಗರದ ಬಟ್ಟೆ ಅಂಗಡಿಗೂ ಹೋಗಿ ಅಲ್ಲೂ ಗಲಾಟೆ ಮಾಡಿದ್ದ. ಆಗ ಕುಶಾಲನಗರ ಪೊಲೀಸರು ಇಬ್ಬರಿಗೂ ತಿಳುವಳಿಕೆ ಹೇಳಿ ಕಳುಹಿಸಿದ್ದರು. ಈ ನಡುವೆ ಕೆಲಸಕ್ಕೆ ಹೋಗುವುದನ್ನೂ ಬಿಟ್ಟಿದ್ದ ಪ್ರಸನ್ನ, ಪತ್ನಿ ಮೇಲೆ ಪದೇ ಪದೆ ಗಲಾಟೆ ಮಾಡಿದ್ದರಿಂದ ಬೈಲುಕುಪ್ಪೆ ಠಾಣೆ



ಇರಿತಕ್ಕೊಳಗಾದ ಪತ್ನಿ ಶ್ವೇತಾ

ಪೊಲೀಸರು ಶ್ವೇತಾಳಿಗೆ ಮೂರು ತಿಂಗಳು ತಾಯಿ ಮನೆಯಲ್ಲಿ ಇರುವಂತೆ ಸೂಚಿಸಿ, ಆಕೆಯ ತಂಟೆಗೆ ಹೋಗದಂತೆ ಪ್ರಸನ್ನನಿಗೆ ಸಲಹೆ ನೀಡಿದ್ದರು ಎನ್ನಲಾಗಿದೆ. ಆದರೂ ಪತ್ನಿ ವಿರುದ್ಧ ಕುದಿಯುತ್ತಿದ್ದ ಪ್ರಸನ್ನ, ಬುಧವಾರ ರಾತ್ರಿ ಪತ್ನಿ ಶ್ವೇತಾಳ ತವರು ಮನೆಗೆ ಹೋಗಿ ತನ್ನ ಜೊತೆ ಬರುವಂತೆ ಕರೆದಿದ್ದಾನೆ. ಆಕೆ ಒಪ್ಪದಿದ್ದಾಗ, ಚಾಕುವಿನಿಂದ ಹಲವಾರು ಬಾರಿ ಆಕೆಗೆ ಇರಿದು ಪರಾರಿಯಾಗಿದ್ದಾನೆ. ತನ್ನ ಇರಿತದಿಂದ ಪತ್ನಿ ಸಾವನ್ನಪ್ಪಿದ್ದಾಳೆ ಎಂದು ಭೀತಿಗೊಳಗಾದ ಪ್ರಸನ್ನ, ಮನೆಗೆ ಬಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅತ್ತ ಇರಿತದಿಂದ ಗಾಯಗೊಂಡಿದ್ದ ಶ್ವೇತಾಳನ್ನು ಮನೆಯವರು ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆ ಮೇರೆಗೆ ಮಡಿಕೇರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬೈಲುಕುಪ್ಪೆ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮಾಲಿಂಗಯ್ಯ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರಲ್ಲದೆ, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.



ಕಾಂತಾರ-1

ಟೀಸರ್ ಬಿಡುಗಡೆ

ಹೊಂಬಾಳೆ ಫಿಲಂಸ್ ನಿರ್ಮಾಣದ ಕಾಂತಾರ-ಅಧ್ಯಾಯ 1ರ ಮೊದಲ ನೋಟ ಬಿಡುಗಡೆಯಾಗಿದೆ. ಕಾಂತಾರದ ಜಗತ್ತನ್ನು ಪರಿಚಯಿಸುವ ಟೀಸರ್‌ನಲ್ಲಿ ರಿಷಬ್ ಶೆಟ್ಟಿ ಅವರ ಪಾತ್ರ ಮತ್ತು ರಗಡ್‌ಗೆಟಪ್ ಗಮನ ಸೆಳೆಯುತ್ತದೆ. ಮೊದಲ ಭಾಗದ ಆ ಆರ್ಭಟ ಇಲ್ಲೂ ಮರುಕಳಿಸಿದ್ದು, ಈ ಮೂಲಕ ಹೊಸದೊಂದು ದಂತಕಥೆಯ ಸೃಷ್ಟಿಗೆ ಮುನ್ನುಡಿ ಬರೆದಿದೆ. ಅಷ್ಟೇ ಅಲ್ಲ, ರಿಷಬ್ ಶೆಟ್ಟಿ ಅವರ ಪಾತ್ರ ವೀಕ್ಷಕರಲ್ಲಿ ಹೊಸ ಕೌತುಕವನ್ನು ಹುಟ್ಟುಹಾಕಿದೆ. ಈ ಟೀಸರ್ ವೈಶಿಷ್ಟ್ಯವೆಂದರೆ, ಏಳು ಭಾಷೆಗಳಲ್ಲಿ ಮೂಡಿಬರುತ್ತಿರುವ ಚಿತ್ರದ ಪ್ರತಿಯೊಂದು ಭಾಷೆಯ ಟೀಸರ್ ಒಂದೊಂದು ರಾಗದ ಮೂಲಕ ಅಂತ್ಯವಾಗಲಿದೆ. ಕಾಂತಾರ ಕಳೆದ ವರ್ಷವಷ್ಟೇ ಬಿಡುಗಡೆಯಾಗಿ ಯಶಸ್ವಿ ಪ್ರದರ್ಶನ ಕಂಡಿತ್ತು. ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಬಂಧವನ್ನು, ಜನಪದ ಅಂಶಗಳನ್ನು ಬೆರೆಸಿ ಹೇಳಿದ ರೀತಿ ಪ್ರೇಕ್ಷಕರನ್ನು ಆಕರ್ಷಿಸಿತ್ತು. ಪ್ರತಿ ಕಥೆಯನ್ನೂ ವಿಶಿಷ್ಟ ರೀತಿಯಲ್ಲಿ ಕಟ್ಟಿಕೊಡಬೇಕು ಎಂಬ ಹೊಂಬಾಳೆ ಫಿಲಂಸ್‌ನ ಬದ್ಧತೆ 'ಕಾಂತಾರ - ಅಧ್ಯಾಯ 1'ರಲ್ಲೂ ಮುಂದುವರೆದಿದ್ದು, ದೈವತ್ವದ ಹೊಸ ವ್ಯಾಖ್ಯಾನ ಈ ಚಿತ್ರದಲ್ಲಾಗಲಿದೆ. ಡಿಸೆಂಬರ್ ಅಂತ್ಯಕ್ಕೆ ಚಿತ್ರೀಕರಣ ಪ್ರಾರಂಭವಾಗಲಿದ್ದು, ತಾರಾಬಳಗದ ಬಗ್ಗೆ ಸದ್ಯದಲ್ಲೇ ಹೆಚ್ಚಿನ ಮಾಹಿತಿ ಹೊರಬೀಳಲಿದೆ.



ಸೂಟ್ ಹಾಕೋರ ಹಾಡು ಪಾಡು!

ಅನಾದಿ ಕಾಲದಿಂದಲೂ ಸೂಟ್‌ಗೆ ಅದರದೇ ಆದ ಗಾಂಭೀರ್ಯವಿದೆ. ಅಪರೂಪಕ್ಕೊಮ್ಮೆ ಸೂಟ್ ಹಾಕಿದವರ ಠೀವಿಯೇ ಬೇರೆ. ಆದರೆ ಅಂಬೇಡ್ಕರ್, ವಿಶ್ವೇಶ್ವರಯ್ಯ, ನೆಹರು ಸೇರಿದಂತೆ ಇನ್ನಿತರೆ ಮಹನೀಯರು ಹಾಕುತ್ತಿದ್ದ ಸೂಟ್‌ಗೆ ಅದರದೇ ಆದ ಮಹತ್ವವಿದೆ. ಈ ಸೂಟ್ ಬಗ್ಗೆಯೇ ಕನ್ನಡದಲ್ಲಿ ಚಲನಚಿತ್ರವೊಂದು ತಯಾರಾಗಿದ್ದು, ಅದೀಗ ತೆರೆಗೆ ಬರಲು ಸಿದ್ಧವಾಗಿದೆ. ಬಿ.ರಾಮಸ್ವಾಮಿ ನಿರ್ಮಾಣದ ಈ ಚಿತ್ರಕ್ಕೆ ಭಗತ್‌ರಾಜ್ ಆಕ್ಷನ್ ಕಟ್ ಹೇಳಿದ್ದಾರೆ. ಚಿತ್ರದ ಫಸ್ಟ್‌ಲುಕ್ ಹಾಗೂ ಲಿರಿಕಲ್‌ಸಾಂಗ್ ಇತ್ತೀಚೆಗೆ ಬಿಡುಗಡೆಯಾಯಿತು. ಚಿತ್ರ ಕುರಿತಂತೆ ಮಾತನಾಡಿದ ನಿರ್ದೇಶಕರು ಮೊದಲಿಂದಲೂ ಸೂಟ್‌ಗೆ ಅದರದೇ ಆದ ವಿಶೇಷತೆ ಇದೆ. ಯಾವುದೇ ಶುಭ ಸಮಾರಂಭದಲ್ಲಿ ಸೂಟ್ ಹಾಕುವುದು ವಾಡಿಕೆ. ಅಂತಹ ಸೂಟ್ ನಮ್ಮ ಚಿತ್ರದ ಕಥಾನಾಯಕ. ಚಿತ್ರದಲ್ಲಿ ಸೂಟನ್ನು ಬರೀ ಬಟ್ಟೆಯಂತೆ ತೋರಿಸಿಲ್ಲ. ಮನುಷ್ಯನ ಒಳಗಿನ ಮನಸನ್ನು ಸೂಟ್ ಮೂಲಕ ತೋರಿಸುವ ಪ್ರಯತ್ನ ಮಾಡಿದ್ದೇನೆ. ಪ್ರತಿಯೊಬ್ಬ ಮನುಷ್ಯನೂ ಸೂಟ್ ಎಂಬ ಮುಖವಾಡ ಹಾಕಿಕೊಂಡೇ ಬದುಕುತ್ತಿದ್ದಾನೆ, ಅದನ್ನು ಕಳಚಿಟ್ಟಾಗಲೇ ಆತನ ನಿಜರೂಪ ಬಯಲಾಗುವುದು. ವಿ.ನಾಗೇಂದ್ರಪ್ರಸಾದ್, ಉಮೇಶ್ ಬಣಕಾರ್, ಗಡ್ಡಾವಿಜಿ ಸೇರಿದಂತೆ 60ಕ್ಕೂ ಹೆಚ್ಚು ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ ಎಂದು ಹೇಳಿದರು. ಚಿತ್ರದಲ್ಲಿ ನಾಯಕಿಯಾಗಿ ನಟಿಸಿರುವ ದಿಪ್ತಿ ತಾಪ್ಸೆ ಮಾತನಾಡುತ್ತಾ, ನಾನು ಐವರು ಗೆಳೆಯರಲ್ಲಿ ಒಬ್ಬಳಾಗಿ ನಟಿಸಿದ್ದೇನೆ ಎಂದರು. ಛಾಯಾಗ್ರಾಹಕ ಕಿರಣ್ ಹಂಪಾಪುರ ಅಲ್ಲದೆ ವಿ.ನಾಗೇಂದ್ರಪ್ರಸಾದ್ ಮಾತನಾಡಿ ತಾವೂ ಚಿತ್ರದ ಪಾತ್ರವೊಂದರಲ್ಲಿ ನಟಿಸಿರುವುದಾಗಿ ತಿಳಿಸಿ, ಸೂಟ್ ಬಗ್ಗೆ ಬರೆದಿರುವ ಹಾಡನ್ನು ಹೇಳಿದರು. ಉಮೇಶ್ ಬಣಕಾರ್ ಮಾತನಾಡಿ, ಭಗತ್ ಕಾಲ್‌ಮಾಡಿ ಒಂದು ಟಿಪಿಕಲ್ ಪಾತ್ರವಿದೆ ಅದನ್ನು ನೀವೇ ಮಾಡಬೇಕು ಎಂದರು. ಒಬ್ಬ ಮನೋತಜ್ಞನಾಗಿ ನಾನು ಕಾಣಿಸಿಕೊಂಡಿದ್ದೇನೆ ಎಂದರು. ನಟ ಸುಜಯ್ ಆರ್ಯ ಮಾತನಾಡಿ, ಚಿತ್ರದಲ್ಲಿ ನೆಗೆಟಿವ್ ಪಾತ್ರ ಮಾಡಿದ್ದೇನೆ. ವಿಭಿನ್ನ ಶೀರ್ಷಿಕೆ ಇದಾಗಿದೆ. 50 ದಿನಗಳ ಕಾಲ ಇಷ್ಟಪಟ್ಟು ಚಿತ್ರೀಕರಣ ಮಾಡಿದ್ದೇವೆ ಎಂದರು. ಈ ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು ಕಿರಣ್‌ಶಂಕರ್ ಸಂಗೀತ ನಿರ್ದೇಶನ ಮಾಡಿದ್ದಾರೆ. ಅನುಪಮಭಟ್, ಅನನ್ಯಭಟ್, ಜಾನಪದ ಗಾಯಕ ಸ್ವಾಮಿ ಗಾಮನಹಳ್ಳಿ ಮುಂತಾದವರು ಹಾಡಿದ್ದಾರೆ.


'ಸೂಟ್' ಚಿತ್ರದಲ್ಲಿ ದಿಪ್ತಿ ತಾಪ್ಸೆ

ಮರ್ಡರ್ ಮಿಸ್ಟ್ರಿ 'ಅಲೆಕ್ಸಾ' ಟ್ರೈಲರ್

ಅದಿತಿ ಪ್ರಭುದೇವ ಒಬ್ಬ ಇನ್‌ವೆಸ್ಟಿಗೇಶನ್ ಆಫೀಸರ್ ಆಗಿ ಕಾಣಿಸಿಕೊಂಡಿರುವ ಅಲೆಕ್ಸಾ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಅದಿತಿ, ಪವನ್‌ತೇಜ್ ನಾಯಕನಾಗಿರುವ ಈ ಚಿತ್ರವನ್ನು ವಿ.ಚಂದ್ರು ಅವರು ನಿರ್ಮಿಸಿದ್ದಾರೆ. ಭಾ.ಮಾ. ಹರೀಶ್, ಸುಂದರರಾಜ್, ಪ್ರಮೀಳಾ ಜೋಷಾಯ್, ಐಫ್ಲೆಕ್ಸ್ ಆಡಿಯೋ ಮೋಹನ್ ಸೇರಿದಂತೆ ಹಲವಾರು ಗಣ್ಯರು 'ಅಲೆಕ್ಸಾ' ಚಿತ್ರದ ಟ್ರೈಲರ್ ಹಾಗೂ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ಚಿತ್ರ ಕುರಿತು ಮಾತನಾಡಿದ ನಿರ್ದೇಶಕ ಜೀವ ಮರ್ಡರ್ ಮಿಸ್ಟರಿ ಜೊತೆಗೆ ಥ್ರಿಲ್ಲರ್ ಕಥಾಹಂದರ ಚಿತ್ರದಲ್ಲಿದ್ದು, ಕ್ಲೈಮ್ಯಾಕ್ಸ್ ಭಾಗದಲ್ಲಿ ಫಾರ್ಮಾಸೂಟಿಕಲ್ ಮಾಫಿಯಾ ಬಗ್ಗೆಯೂ ತೋರಿಸಿದ್ದೇವೆ. ಮೈಸೂರು, ಮಡಿಕೇರಿಯಂತಹ ಸುಂದರ ಲೊಕೇಶನ್‌ಗಳಲ್ಲಿ ಹಾಡುಗಳನ್ನು ಸೆರೆಹಿಡಿದಿದ್ದೇವೆ. ನಾಲ್ಕು ಸಾಹಸ ಸನ್ನಿವೇಶಗಳು ಚಿತ್ರದಲ್ಲಿದ್ದು, ಡಿ.29ಕ್ಕೆ ಬಿಡುಗಡೆ ಮಾಡುವ ಯೋಜನೆಯಿದೆ ಎಂದರು.

ನಾಯಕಿ ಅದಿತಿ ಪ್ರಭುದೇವ ಮಾತನಾಡಿ, ಮೊದಲ ಬಾರಿಗೆ ನಾನೊಬ್ಬ ಪೊಲೀಸ್ ಆಫೀಸರ್ ಆಗಿ ಕಾಣಿಸಿಕೊಂಡಿದ್ದೇನೆ. ನನ್ನ ಪಾತ್ರದ ಹೆಸರೇ ಅಲೆಕ್ಸಾ. ನಿಜ ಜೀವನದಲ್ಲಿ ನಾನೊಬ್ಬ ಪೊಲೀಸ್ ಆಗಬೇಕೆಂದು ಕನಸು ಕಂಡಿದ್ದೆ. ಅದು ಈ ಚಿತ್ರದಲ್ಲಿ ಈಡೇರಿದೆ. ನಿರ್ದೇಶಕರು ನಿಮ್ಮದು ಪೊಲೀಸ್ ಪಾತ್ರ ಎಂದ ತಕ್ಷಣವೇ ಬೇರೇನೂ ಕೇಳದೆ ಅಭಿನಯಿಸಲು ಒಪ್ಪಿದೆ. ವಿಶೇಷವಾಗಿ ಈ ಚಿತ್ರದಲ್ಲಿ ನಾನು ಆಕ್ಷನ್ ಕೂಡ ಮಾಡಿದ್ದೇನೆ ಎಂದರು.

ಪವನ್‌ತೇಜ್ ಮಾತನಾಡುತ್ತಾ, ಮರ್ಡರ್ ಮಿಸ್ಟರಿ ಜೊತೆಗೆ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು. ಈಗಾಗಲೇ ಕನ್ನಡದಲ್ಲಿ ಸಾಕಷ್ಟು ಸಸ್ಪೆನ್ಸ್, ಥ್ರಿಲ್ಲರ್ ಚಿತ್ರಗಳು ಬಂದಿದ್ದರೂ ನಮ್ಮ ಚಿತ್ರದ ಕಥೆ ಅದೆಲ್ಲಕ್ಕಿಂತಲೂ ವಿಭಿನ್ನವಾಗಿದೆ ಎಂದರು. ಛಾಯಾಗ್ರಾಹಕ ಸತೀಶ್‌ಚಂದ್ರ ಹಾಗೂ ಸಂಕಲನಕಾರ ಉಮೇಶ್ ಆರ್.ಬಿ, ಸೇರಿದಂತೆ ಚಿತ್ರ ತಂಡದ ಅನೇಕ ಸದಸ್ಯರು ಅಲೆಕ್ಸಾ ಚಿತ್ರ ಕುರಿತಂತೆ ವೇದಿಕೆಯಲ್ಲಿ ಮಾತನಾಡಿದರು. ಈಗಾಗಲೇ ಬಿಡುಗಡೆಯಾಗಿರುವ ಈ ಚಿತ್ರದ ಟೀಸರ್ ಅತಿಹೆಚ್ಚು ವೀಕ್ಷಣೆ ಪಡೆದುಕೊಂಡಿದೆ. ಪವನ್ ತೇಜ್, ಅದಿತಿ ಪ್ರಭುದೇವ, ನಾಗಾರ್ಜುನ್, ಮೇಘಶ್ರೀ, ಮಿಮಿಕ್ರಿ ಗೋಪಿ, ಚಂದ್ರಕಲಾ ಮೋಹನ್ ಸೇರಿ ಹಲವಾರು ಕಲಾವಿದರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಎಪಿಓ ಅವರ ಸಂಗೀತ ಸಂಯೋಜನೆಯಲ್ಲಿ ಮೂರು ಸುಂದರ ಹಾಡುಗಳು ಚಿತ್ರದಲ್ಲಿವೆ.


'ಅಲೆಕ್ಸಾ' ಚಿತ್ರದಲ್ಲಿ ಅದಿತಿ, ಪವನ್‌ತೇಜ್

'ಫಸ್ಟ್‌ನೈಟ್ ವಿತ್ ದೆವ್ವ' ಹಾರರ್ ಕಾಮಿಡಿ ಚಿತ್ರದಲ್ಲಿ ಪ್ರಥಮ್




ಬಿಗ್‌ಬಾಸ್ ಖ್ಯಾತಿಯ ಪ್ರಥಮ್ ನಾಯಕನಾಗಿ ಅಭಿನಯಿಸುತ್ತಿರುವ, ಪಿ.ವಿ.ಆರ್.ಸ್ವಾಮಿ ಗೂಗಾರದೊಡ್ಡಿ ಅವರ ನಿರ್ದೇಶನದ ಹಾರರ್, ಕಾಮಿಡಿ ಚಿತ್ರ 'ಫಸ್ಟ್‌ನೈಟ್ ವಿತ್ ದೆವ್ವ'. ಈ ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು. ಹಿರಿಯನಟ ಶ್ರೀನಿವಾಸಮೂರ್ತಿ ಮೊದಲ ದೃಶ್ಯಕ್ಕೆ ಚಾಲನೆ ನೀಡಿದರು.

'ಫಸ್ಟ್‌ನೈಟ್ ವಿತ್ ದೆವ್ವ' ಒಂದು ಹಾರರ್ ಕಾಮಿಡಿ ಜಾನರ್ ಚಿತ್ರ ಎಂದು ಮಾತನಾಡಿದ ನಾಯಕ ಪ್ರಥಮ್, ಈ ಚಿತ್ರಕ್ಕೆ ನಾನೇ ಕಥೆ ಬರೆದಿದ್ದೇನೆ. ನಾನು ಈ ಕಥೆ ಬರೆಯಲು ವಿಕ್ರಮ್ ಮತ್ತು ಬೇತಾಳದ ಕಥೆಯೇ ಸ್ಫೂರ್ತಿ. ಕನ್ನಡದಲ್ಲಿ ಈವರೆಗೆ ಸಾಕಷ್ಟು ಹಾರರ್ ಚಿತ್ರಗಳು ಬಂದಿವೆ. ಆದರೆ ನಾವು ಅದನ್ನು ಸ್ವಲ್ಪ ವಿಭಿನ್ನವಾಗಿ ತೋರಿಸುತ್ತಿದ್ದೇವೆ. ನಿಖಿತಾ ಅವರು ನನ್ನ ಪತ್ನಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಿರಿಯ ನಟರಾದ ಶ್ರೀನಿವಾಸಮೂರ್ತಿ, ಸಂಗೀತಾ, ಹರೀಶ್‌ರಾಜ್, ತನುಜಾ ಪ್ರಮುಖ ತಾರಾಬಳಗದಲ್ಲಿದ್ದಾರೆ. ನಟಿ ಮಾನ್ಯಸಿಂಗ್ ದೆವ್ವದ ಪಾತ್ರ ಮಾಡುತ್ತಿದ್ದಾರೆ. ನನ್ನ ಸ್ನೇಹಿತ ನವೀನ್ ಈ ಚಿತ್ರಕ್ಕೆ ಬಂಡವಾಳ ಹಾಕುತ್ತಿದ್ದಾರೆ ಎಂದು ಹೇಳಿದರು. ನಂತರ ನಿರ್ದೇಶಕ ಪಿ.ವಿ.ಆರ್. ಸ್ವಾಮಿ ಮಾತನಾಡುತ್ತಾ, ಪ್ರಥಮ್ ಅವರು ಬರೆದಿರುವ ಕಥೆ ತುಂಬಾ ಚೆನ್ನಾಗಿದೆ. ನಾನು ಛಾಯಾಗ್ರಹಣದೊಂದಿಗೆ ನಿರ್ದೇಶನ ಸಹ ಮಾಡುತ್ತಿದ್ದೇನೆ. ಇಂದಿನಿಂದಲೇ ಬೆಂಗಳೂರಿನಲ್ಲಿ ಚಿತ್ರೀಕರಣ ಆರಂಭವಾಗಿದ್ದು, ಹಾಡಿನ ಚಿತ್ರೀಕರಣವನ್ನು ಹೊರದೇಶದಲ್ಲಿ ನಡೆಸುವ ಪ್ಲಾನಿದೆ ಎಂದು ಹೇಳಿದರು.

ನಂತರ ನಾಯಕಿರಾದ ನಿಖಿತಾ ಹಾಗೂ ಮಾನ್ಯಸಿಂಗ್ ತಮ್ಮ ಪಾತ್ರಗಳ ಬಗ್ಗೆ ಹೇಳಿಕೊಂಡರು. ಅಲ್ಲದೆ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿರುವ ಹಿರಿಯ ನಟ ಶ್ರೀನಿವಾಸ ಮೂರ್ತಿ, ಸಂಗೀತ, ಹರೀಶ್‌ರಾಜ್ ಇವರೆಲ್ಲ ತಮ್ಮ ಪಾತ್ರದ ಕುರಿತಂತೆ ಮಾಹಿತಿ ನೀಡಿದರು. ಸಂಗೀತ ನಿರ್ದೇಶಕ ಅದ್ವಿಕ್ ವರ್ಮ ಹಾಗೂ ಸಂಭಾಷಣೆಯ ಜೊತೆ ಸಂಕಲನ ಮಾಡುತ್ತಿರುವ ನಾಗೇಶ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಸಿನಿಪದಬಂಧ-502



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______



ವಿಜೇತರು: ಜಿ.ಆರ್.ವಿರಾಟ್, 10ನೇ ತರಗತಿ, ನಿರ್ಮಲಾ ಕಾನ್ವೆಂಟ್, ವಿವಿ ಪುರಂ, ಮೈಸೂರು.

ಎಡದಿಂದ ಬಲಕ್ಕೆ

1."ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ...", ಎಂದ ಸಂತ 7
4. ರವಿಚಂದ್ರನ್ ವಿಲಾಸ ಪ್ರಿಯ 3
7. ನಾಗರಹಾವು ಚಿತ್ರದ ರಾಮಾಚಾರಿಯ ಮಾರ್ಗರೇಟ್ 2
8. ಜಯಂತಿ ಹತ್ತುನೂರು ಹಂತಗಳ ಏರಿಳಿತ ಕಂಡವಳು 6
9. ದಿಗಂತ್ – ಐಂದ್ರಿತಾ ರೈ ಅವರ ದೇವಲೋಕದ ಪುಷ್ಪ 4
10. ಡಾ.ರಾಜ್‌ಕುಮಾರ್ ಬೀರಿದ ನೇರ ದೃಷ್ಟಿ 2
11. ಪಟ್ಟಣಕ್ಕೆ ಬಂದ ' ಜಗ್ಗೇಶ್' 2
14.ಶ್ರೀನಗರ ಕಿಟ್ಟಿಯ ಐದು ಪದಾರ್ಥಗಳ ಮಿಶ್ರಣ 4
15."ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು....", ಕೀರ್ತನೆಯ ರಚನೆಕಾರ 6
16.ಅನುಮಾನ ಬರದಿರಲು ಶಿವಣ್ಣ ತೊಟ್ಟ ವೇಷ 2
18.ಲಾಕಪ್ ಡೆತ್ ಚಿತ್ರದ ನಾಯಕಿ ಇಲ್ಲಿ ತಿರುಗಿದ್ದಾಳೆ 3
19.ವಿಷ್ಣುವರ್ಧನ್ – ಗೀತಾ ಅಭಿನಯಕ್ಕೆ ವಿಜಯ್ ನಿರ್ದೇಶಕರು 3



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 501ರ ಉತ್ತರ

ಮ	ನೆ	ಯೇ	ಮಂ	ತ್ರಾ	ಲ	ಯ		ಅಂ	ಬ	ರ
ಲ್ಲಿ			ಜಿ		ಕ್ಷ್ಮಿ		ಅಂ			ಹ
ಗೆ		ಮ	ನ		ನಿ	ಗೂ	ಢ	ರ	ಹ	ಸ್ಯ
			ತೆ		ವಾ		ಮಾ			ರಾ
ನ	ವ	ತಾ	ರೆ		ಸ		ನ್		ಅ	ತ್ರಿ
ಅ	ಜ		ಮ		ಮೈ		ಆ	ರಾ	ಧ	ನೆ
ನಂ			ಹಾ		ಸೂ		ನಂ			
ತ	ವ	ರಿ	ನ	ತೇ	ರು		ದ	ತ್ತ		ಸ
ಪ್ರೇ			ದಿ		ಟಾಂ		ಕಂ			ತ್ಕಾ
ಮ	ತ್ಸ	ರ		ಬಂ	ಗಾ	ರ	ದ	ಪಂ	ಜ	ರ

ಮೇಲಿನಿಂದ ಕೆಳಕ್ಕೆ

1. ಶ್ರೀಮುರಳಿಯ ಚಟುವಟಿಕೆಯ ತೀವ್ರತೆಯಲ್ಲಿ ಗಾಲಿಯಿದೆ 3
2. ಅಂಬರೀಶ್ ಅಭಿನಯದ ನಮ್ಮ ದೇಶ ನೂತನವಾಗಿದೆ 5
3. _ _ _ _ _ ಘಾಲ್ಕೆ ಪ್ರಶಸ್ತಿ 5
5. ಹೇಮಂತ್ ರಾವ್ ನಿರ್ದೇಶನದಲ್ಲಿ ಮಾರ್ಗದ ಆಯ್ಕೆ ಸ್ಥಿತಿ ಕಷ್ಟ ಸಾಧ್ಯ 5
6. ಗೆಂಡೆತಿಮ್ಮನ ಬೇರೆಯವರ ಸಹವಾಸ 4
11. ರಾಜೇಶ್ ಒಳ್ಳೆಯ ಮನುಷ್ಯನಾಗಿರಲು ಕೆ. ಜಾನಕಿರಾಮ್ ನಿರ್ದೇಶಕ 5
12. ಅಂಬರೀಷ್ – ಅಂಬಿಕಾ ಅಭಿನಯದಲ್ಲಿ ರುಧಿರವಿದೆ 4
13. ಕಲ್ಯಾಣ್ ಕುಮಾರನ ಘನರೂಪ ವಸ್ತು ಸಿಹಿಯಾಗಿದೆ 5
14. ರಮೇಶ್ – ಸುಧಾರಾಣಿಯ ಪ್ರೇಮಕಾವ್ಯ 5
17. ವಿಷ್ಣುವರ್ಧನ್ ವಕೀಲನಾಗಿ ಬುದ್ಧಿವಂತಿಕೆ ತೋರಿದ್ದಾನೆ 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಈ ವಾರ ಶಾಲಾ ದಿನಗಳನ್ನು ನೆನಪಿಸುವ 'ಸ್ಕೂಲ್ ಡೇಸ್'

ನಮ್ಮ ಶಾಲಾ ದಿನಗಳ ಆಟ, ತುಂಟಾಟ, ಪ್ರೀತಿ, ಪ್ರೇಮದ ಕಥೆಗಳನ್ನು ನೆನಪಿಸುವ ಚಿತ್ರ 'ಸ್ಕೂಲ್ ಡೇಸ್' ಈ ವಾರ ಬಿಡುಗಡೆಯಾಗುತ್ತಿದೆ. ಉತ್ತರ ಕರ್ನಾಟಕದ ಪ್ರತಿಭೆಗಳೇ ಸೇರಿ ಮಾಡಿರುವ ಈ ಚಿತ್ರಕ್ಕೆ ಸಂಜಯ್ ಆಕ್ಷನ್ ಕಟ್ ಹೇಳಿದ್ದಾರೆ. ಶ್ರೀಗುರು ಮಹಾಂತ ಕ್ರಿಯೇಶನ್ಸ್ ಮೂಲಕ ಉಮೇಶ್ ಎಸ್.ಹಿರೇಮಠ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಚಿತ್ರದ ಆಡಿಯೋ ಇತ್ತೀಚೆಗೆ ಬಿಡುಗಡೆಯಾಯಿತು. ಚಿತ್ರ ಕುರಿತು ಮಾತನಾಡಿದ ನಿರ್ದೇಶಕ ಸಂಜಯ್ 'ಸ್ಕೂಲ್ ಡೇಸ್' ಚಿತ್ರವನ್ನು 2021ರಲ್ಲಿ ಪ್ರಾರಂಭಿಸಿ, ಸಂಪೂರ್ಣ ಉತ್ತರ ಕರ್ನಾಟಕದಲ್ಲೇ ಚಿತ್ರೀಕರಿಸಿದ್ದೇವೆ. ನಾವೆಲ್ಲಾ ಚಿಕ್ಕವರಿದ್ದಾಗ ಶಾಲಾ ದಿನಗಳನ್ನು ದಾಟಿಯೇ ಬಂದವರು. ನಮ್ಮ ಆ ಹಿಂದಿನ ದಿನಗಳನ್ನು ನೆನಪಿಸುವ ಚಿತ್ರವಿದು. ಗೋಪ್ಯ, ಮಂಜು, ಬಸ್ಯ, ಬಿಕ್ಕ ಎಂಬ ನಾಲ್ಕು ಪಾತ್ರಗಳ ಸುತ್ತ ನಡೆಯುವ ಕಥೆಯಿದು. ಸಂಪೂರ್ಣ ಉತ್ತರ ಕರ್ನಾಟಕ ಭಾಷೆಯಲ್ಲೇ ಚಿತ್ರ ಮೂಡಿಬಂದಿದೆ ಎಂದು ಹೇಳಿದರು.

ನಾನು ಮೂಲತಃ ಉದ್ಯಮಿ ಎಂದು ಮಾತನಾಡಿದ ನಿರ್ಮಾಪಕ ಉಮೇಶ್ ಎಸ್.ಹಿರೇಮಠ, ಪ್ರೆಸ್ ಮೀಟ್‌ವೊಂದರಲ್ಲಿ ನಿರ್ದೇಶಕರು ನನಗೆ ಪರಿಚಯವಾದರು. ಅವರು ಹೇಳಿದ ಕಥೆ ಚೆನ್ನಾಗಿದೆ ಅನಿಸಿತು. ನನಗೆ ಮ್ಯೂಸಿಕ್ ಬಗ್ಗೆ ಬಹಳ ಆಸಕ್ತಿ. ಹಾಗಾಗಿ ಚಿತ್ರದಲ್ಲಿ ಹಾಡುಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದೇವೆ. ಎಲ್ಲರ ಜೀವನದಲ್ಲಿ ಆದಂತಹ ಘಟನೆಗಳೇ ನಮ್ಮ ಚಿತ್ರದ ಕಥಾವಸ್ತು.

ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದರು ಕನಕದಾಸರು



ನಂಜನಗೂಡಲ್ಲಿ ಭಕ್ತ ಕನಕದಾಸರ ಜಯಂತಿ ಆಚರಣೆ

ನಂಜನಗೂಡು, ನ.30– ಭಕ್ತ ಕನಕದಾಸರು ಕುಲಕ್ಕಿಂತ ಗುಣ ಮುಖ್ಯ, ಮಾನವೀಯತೆ ಎಲ್ಲಕ್ಕಿಂತಲೂ ಮುಖ್ಯವಾದದ್ದು ಎಂದು ಸಾಮಾಜಿಕ ಸಂದೇಶವನ್ನು ಸಾರುವ ಮೂಲಕ ಸಮಾಜದಲ್ಲಿರುವ ಮೌಢ್ಯತೆ, ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದರು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ನಗರದ ತಾಲೂಕು ಕಚೇರಿಯ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಏರ್ಪಡಿಸಿದ್ದ 536ನೇ ಭಕ್ತಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉಧ್ಘಾಟಿಸಿ ಮಾತನಾಡಿದ ಅವರು, ಬುದ್ಧ, ಬಸವ, ಡಾ.ಬಿ.ಆರ್.ಅಂಬೇಡ್ಕರ್, ವಾಲ್ಮೀಕಿ ಸೇರಿದಂತೆ ಮನುಕುಲದ ಒಳಿತಿಗಾಗಿ ಶ್ರಮಿಸಿದ ಮಹಾಪುರುಷರನ್ನು ಕೇವಲ ಒಂದೇ ಜಾತಿಗೆ ಸೀಮಿತಗೊಳಿಸಬಾರದು. ಅವರ ಸಾಮಾಜಿಕ ಆಶಯಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪರಿಪಾಲಿಸುವ ಮೂಲಕ ಉತ್ತಮ ಸಮ ಸಮಾಜ ಕಟ್ಟಲು ಮುಂದಾಗಬೇಕು ಎಂದು ಕರೆ ನೀಡಿದರು.

ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಭಕ್ತಕನಕದಾಸರು ಸಮಾಜದಲ್ಲಿ ಹಾಸು ಹೊಕ್ಕಾಗಿರುವ ಜಾತೀಯತೆ, ಅಸ್ಪೃಶ್ಯತೆ, ಶೋಷಣೆ ವಿರುದ್ಧ ಹೋರಾಟ ನಡೆಸಿದರಲ್ಲದೆ ಧೈರ್ಯದಿಂದ ಎಲ್ಲಾ ಧರ್ಮಗಳ ಕಂದಾಚಾರ, ಮೌಢ್ಯತೆಗಳನ್ನು ಟೀಕಿಸಿ ಜನರಲ್ಲಿ ವೈಚಾರಿಕತೆಯನ್ನು ಮೂಡಿಸಲು ಶ್ರಮಿಸಿದವರು ಎಂದರು.

ಮುಖ್ಯಭಾಷಣಕಾರರಾಗಿದ್ದ ನಿವೃತ್ತ ಪ್ರೊ ರಾಮೇಗೌಡ ಮಾತನಾಡಿ, ಭಕ್ತ ಕನಕದಾಸರು ಜನ ಭಾಷೆಯಲ್ಲಿ ತಮ್ಮ ಕೀರ್ತನೆಗಳನ್ನು ರಚಿಸಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು. ಅವರ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಮ್ಮಲ್ಲಿರುವ ಮೇಲು ಕೀಳು ಎಂಬ ಕೀಳರಿಮೆ ಬಿಟ್ಟು ಸಾಧನೆಗೆ ಮುಂದಾಗಬೇಕು ಎಂದರು.

ಸಮಾರಂಭದಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ಸಾಧಕರನ್ನು ಮತ್ತು ವಿವಿಧ ರಂಗದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ರಂಗಸ್ವಾಮಿ, ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ಪ್ರಸನ್ನಕುಮಾರ್, ಮುಖಂಡರಾದ ಮುದ್ದುಮಾದೇಗೌಡ, ಕುರಿಹುಂಡಿ ರಾಜು, ಬಸವರಾಜು, ದೊರೆಸ್ವಾಮಿನಾಯಕ, ದಕ್ಷಿಣಮೂರ್ತಿ, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ಇಮ್ಮಾವು ರಘು, ನಗರ್ಲೆ ವಿಜಯ್‌ಕುಮಾರ್, ಸುರೇಶ್, ನಗರಸಭಾ ಸದಸ್ಯರಾದ ಗಂಗಾಧರ್, ಎಸ್.ಪಿ.ಮಹೇಶ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ವಿಜೃಂಭಣೆಯ ತೆಪ್ಪೋತ್ಸವ



ನಂಜನಗೂಡು, ನ.30– ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಚಿಕ್ಕ ಜಾತ್ರಾ ಮಹೋತ್ಸವದ ಪ್ರಯುಕ್ತ ಗುರುವಾರ ಕಪಿಲಾನದಿಯ ತೇಲುವ ದೇವಾಲಯದಲ್ಲಿ ಶ್ರೀಯವರ ತೆಪ್ಪೋತ್ಸವವು ವಿಜೃಂಭಣೆಯಿಂದ ನಡೆಯಿತು.

ರಾತ್ರಿ 7.20ರ ವೇಳೆಯಲ್ಲಿ ದೇವಾಲಯದಿಂದ ಉತ್ಸವ ಮೂರ್ತಿಯನ್ನು ಮಂಗಳ ವಾದ್ಯದೊಡನೆ ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ಕಪಿಲಾ ನದಿಯ ದಡದಲ್ಲಿನ ಶಾಸ್ತ ಮಂಟಪಕ್ಕೆ ಕರೆತರಲಾಯಿತು. ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಹಾಗೂ ಅರ್ಚಕ ವೃಂದದವರು ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿಯನ್ನು ಶಾಸ್ತ ಮಂಟಪದಲ್ಲಿ ಇರಿಸಿ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸಿದ ನಂತರ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಯವರನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿಯನ್ನು ವಿಶೇಷವಾಗಿ ವಜ್ರ–ವೈಡೂರ್ಯ, ಮುತ್ತು ಹವಳ, ನವರತ್ನಗಳಿಂದ ಶೃಂಗರಿಸಲಾಗಿತ್ತು. ಅಲ್ಲದೆ ನಾನಾ ಬಗೆಯ ವಿಶೇಷ ಹೂಗಳಿಂದ ತೇಲುವ ದೇವಾಲಯವನ್ನು ಅಲಂಕೃತಗೊಳಿಸಲಾಗಿತ್ತು. ಉತ್ಸವ ಮೂರ್ತಿಯನ್ನು ಹೊತ್ತ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಯವರನ್ನು 3 ಪ್ರದಕ್ಷಿಣೆ ಹಾಕಿಸಲಾಯಿತು. ನದಿಯ ಎರಡೂ ದಡಯಲ್ಲಿ ನೆರೆದಿದ್ದ ಭಕ್ತರು ಈ ಮನಮೋಹಕ ದೃಶ್ಯವನ್ನು ಕಣ್ತುಂಬಿಕೊಂಡು ಕರತಾಡನ, ಜೈಕಾರಗಳನ್ನು ಹಾಕಿ ಉತ್ಸವ ಮೂರ್ತಿಯನ್ನು ಕಣ್ತುಂಬಿಕೊಂಡು ಭಾವ ಪರವಶರಾಗಿ ಪುಳಕಿತರಾದರು.

ಇದೇ ಸಂದರ್ಭದಲ್ಲಿ ದೇವಾಲಯದ ಇಓ ಜಗದೀಶ್ ಕುಮಾರ್, ಪ್ರಧಾನ ಅರ್ಚಕರಾದ ನಾಗಚಂದ್ರ ದೀಕ್ಷಿತ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಅಭಿವೃದ್ಧಿ ಕಾರ್ಯಗಳಿಗೆ ಶೀಘ್ರ ಸಿಎಂ ಚಾಲನೆ



ಸರಗೂರು, ನ.30– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶೀಘ್ರ ತಾಲೂಕಿಗೆ ಆಹ್ವಾನಿಸಿ ಸರಗೂರು ತಾಲೂಕಿನ ಹಲವು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದ್ದಾರೆ.

ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಕನಕದಾಸರ 536ನೇ ಜಯಂತಿ ಕಾರ್ಯಕ್ರಮದಲ್ಲಿ ಕನಕದಾಸರ ಭಾವಚಿತ್ರಕ್ಕೆ ಉದ್ಘಾಟಿಸಿ ಮಾತನಾಡಿದ ಅವರು, ಅಸಮಾನತೆ ಮತ್ತು ಮೂಢನಂಬಿಕೆಗಳ ವಿರುದ್ಧವಾಗಿ ಅಂದಿನ ಕಾಲದಲ್ಲಿಯೇ ಕೀರ್ತನೆಗಳ ಮೂಲಕ ಜನರಲ್ಲಿ ಅರಿವು ಮೂಡಿಸುತ್ತಿದ್ದರು. ಅಂತಹ ಆದರ್ಶ ಪ್ರಿಯರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ತಾಲೂಕಿನ ಜನರು ನನ್ನನ್ನು ಶಾಸಕನಾಗಿ ಎರಡನೇ ಬಾರಿಗೆ ಆಯ್ಕೆ ಮಾಡಿದ್ದಾರೆ ತಾಲೂಕಿನ ಜನತೆಗೆ ಚಿರಋಣಿಯಾಗಿದ್ದೇನೆ. ಈಗಾಗಲೇ ತಾಲೂಕಿನ ಅಭಿವೃದ್ಧಿಗೆ ಅಗತ್ಯವಿರುವ ಅಧಿಕಾರಿಗಳನ್ನು ನೇಮಕ ಮಾಡಿಸುತ್ತಿದ್ದು, ಮಿನಿ ವಿಧಾನಸೌಧ, ಅಗ್ನಿಶಾಮಕ ಠಾಣೆಯನ್ನು ಮಂಜೂರು ಮಾಡಿಸಿದ್ದು ಜಾಗ ಗುರುತಿಸಲಾಗಿದೆ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರನ್ನು ತಾಲೂಕಿಗೆ ಆಹ್ವಾನಿಸಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಶಿಕ್ಷಕರಾದ ಸಿದ್ದಲಿಂಗಸ್ವಾಮಿ ಮಾತನಾಡಿ, ಕನಕದಾಸರು ಒಬ್ಬ ಮಹಾನ್ ವ್ಯಕ್ತಿ. ಬಹಳಷ್ಟು ಶ್ರೇಷ್ಠ ಕೀರ್ತನೆಗಳನ್ನು ರಚಿಸಿದ್ದಾರೆ. ಅಂತಹ ದಾಸಶ್ರೇಷ್ಠರ ಜಯಂತಿಯನ್ನು ಆಚರಿಸುವ ಮೂಲಕ ಅವರ ಆಲೋಚನೆ ಮತ್ತು ಆದರ್ಶಗಳನ್ನು ಸಾರ್ವಜನಿಕರಿಗೆ ತಲುಪುವಂತೆ ಮಾಡಬೇಕು ಎಂದರು.

ತಹಸೀಲ್ದಾರ್ ರುಕಿಯಬೇಗಂ ಮಾತನಾಡಿ, ಕನಕದಾಸರು ಮನುಕುಲಕ್ಕೆ ಕೊಟ್ಟ ಜ್ಞಾನ ಅಮೋಘವಾದುದು. ಅವರ ಸಾಹಿತ್ಯ ಮನುಕುಲದ ಆಸ್ತಿ, ದಾಸವರೇಣ್ಯ ಕನಕದಾಸರ ಜಯಂತಿಯನ್ನು ಪ್ರತಿಯೊಬ್ಬರು ಆಚರಣೆ ಮಾಡುವ ಮೂಲಕ ಅವರ ಆದರ್ಶವನ್ನು ಪಾಲಿಸೋಣ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಕುರುಬ ಸಮಾಜದ ಅಧ್ಯಕ್ಷ ಆನಂದ್. ಉಪಾಧ್ಯಕ್ಷ ವೀರೇಗೌಡ, ಎಂ.ಚಿಕ್ಕಣ್ಣ, ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಿವಾಸ್, ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ ವೀರೇಶ್, ಗ್ರಾಪಂ ಅಧ್ಯಕ್ಷರಾದ ಚೆನ್ನೆಗೌಡ, ಮುಖಂಡರಾದ ಬಿ.ಮಟಕೆರೆ ಭೀಮರಾಜ್. ಎಂ.ಕೆಂಡಗಣ್ಣಸ್ವಾಮಿ, ಸಂತೋಷ್, ರಾಜೇಗೌಡ, ಗೋವಿಂದರಾಜು, ಪುಟ್ಟೇಗೌಡ, ಕೊಮಾರೇಗೌಡ, ಮಹದೇವು, ಶಿವರಾಜು ಕಂದೇಗಾಲ. ಶಿವಲಿಂಗಯ್ಯ ಯಶವಂತಪುರ, ದೊಡ್ಡಬರಗಿ ಪ್ರಭು, ಪ್ರದೀಪ್ ನಾಗನಹಳ್ಳಿ, ಕ್ಯಾತನಹಳ್ಳಿ ನಾಗರಾಜು, ಬಾಲಯ್ಯ, ತಾಲೂಕು ಆಡಳಿತಾಧಿಕಾರಿಗಳು ಇತರರು ಹಾಜರಿದ್ದರು.

50 ಲಕ್ಷ ರೂ. ಅನುದಾನದಿಂದ ಅಭಿವೃದ್ಧಿ ಸಾಧ್ಯವೆ?

330 ಗ್ರಾಮಗಳಿಗೆ ಹಂಚಿದರೆ ತಲಾ ಗ್ರಾಮಕ್ಕೆ 15 ಸಾವಿರ ರೂ. ಬರುತ್ತೆ



ಹಿರೀಕ್ಯಾತನಹಳ್ಳಿ, ನ.30– ರಾಜ್ಯ ಸರ್ಕಾರ ಅಭಿವೃದ್ಧಿ ಕೆಲಸಗಳಿಗೆ ಸರಿಯಾಗಿ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಅನುದಾನವಿಲ್ಲದೆ ಅಭಿವೃದ್ಧಿ ಹೇಗೆ ಸಾಧ್ಯ ಎಂದು ತಿಳಿಸಿದ ಶಾಸಕ ಜಿ.ಡಿ. ಹರೀಶ್‌ಗೌಡ, ಪ್ರತಿ ಕ್ಷೇತ್ರಕ್ಕೆ ಬಿಡುಗಡೆ ಮಾಡಿರುವ 50 ಲಕ್ಷ ರೂ. ಹಣದಿಂದ ಹೇಗೆ ಅಭಿವೃದ್ಧಿ ಮಾಡಬಹುದು ಎಂದು ಪ್ರಶ್ನಿಸಿದ್ದಾರೆ.

ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹರವೆ ಗ್ರಾಮದಲ್ಲಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು, ನನ್ನ ಕ್ಷೇತ್ರಕ್ಕೆ 50 ಲಕ್ಷ ರೂ. ಬಿಡುಗಡೆಯಾಗಿದ್ದು, ತಾಲೂಕಿನಲ್ಲಿರುವ 330 ಹಳ್ಳಿಗಳಿಗೆ ಅನುದಾನ ಹಂಚಿದರೆ ಪ್ರತಿ ಹಳ್ಳಿಗೆ 15 ಸಾವಿರ ರೂ. ಬರುತ್ತದೆ. ಆದ್ದರಿಂದ ಯಾವ ಅಭಿವೃದ್ಧಿ ಮಾಡಲು ಸಾಧ್ಯ ಎಂದರು.

ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ 70 ಸಾವಿರ ಕೋಟಿ ಖರ್ಚು ಮಾಡಿದೆ ಆದ್ದರಿಂದ ರಾಜ್ಯದ ಅಭಿವೃದ್ಧಿಗೆ ಹಣವಿಲ್ಲ. ಇನ್ನೇನಿದ್ದರೂ ಮಾರ್ಚ್ ಬಜೆಟ್ ನಂತರ ಅನುದಾನ ಬಿಡುಗಡೆಯಾಗಬಹುದು. ಅಲ್ಲಿಯವರೆಗೂ ಅಭಿವೃದ್ಧಿ ಕಷ್ಟ ಎಂದು ಅವರು ತಿಳಿಸಿದರು.

ಪ್ರತಿ ಹೋಬಳಿ ಕೇಂದ್ರದಲ್ಲಿ ತಾಲೂಕು ಆಡಳಿತದಿಂದ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ನಂತರ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತಾಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳೊಂದಿಗೆ ಜನಸ್ಪಂದನಾ ಕಾರ್ಯಕ್ರಮ ಹಮ್ಮಿಕೊಂಡು ಸ್ಥಳದಲ್ಲಿ ಜನರ ಸಮಸ್ಯೆ ಬಗೆಹರಿಸಲಾಗುವುದು ಎಂದರು.

ಹರವೆ ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸ್ಥಾಪನೆ, ಗ್ರಾಮಕ್ಕೆ ಪಶು ಆಸ್ಪತ್ರೆ ಕೇಂದ್ರ, ಗ್ರಂಥಾಲಯ ಡಿಜಿಟಲೀಕರಣ, ಮುಂತಾದ ಸಮಸ್ಯೆಗಳನ್ನು ಗಮನಕ್ಕೆ ತಂದಿದ್ದು ಮುಂದಿನ ದಿನಗಳಲ್ಲಿ ಮಂಜೂರು ಮಾಡಿಸಿಕೊಡಲಾಗುವುದು. ಜೊತೆಗೆ ಗ್ರಾಮದ ಲಕ್ಷ್ಮಿದೇವಿ ದೇವಸ್ಥಾನದ ಅಭಿವೃದ್ಧಿಗೆ ಸಂಸದ ಪ್ರತಾಪ್ ಸಿಂಹರವರಿಗೆ 10 ಲಕ್ಷ ಅನುದಾನ ನೀಡುವಂತೆ ಈಗಾಗಲೇ ಕೇಳಿಕೊಂಡಿದ್ದೇನೆ ಎಂದು ಅವರು ತಿಳಿಸಿದರು.

ಗ್ರಾಪಂ ಅಧ್ಯಕ್ಷ ಧನಂಜಯ, ಸದಸ್ಯರಾದ ಸ್ವಾಮಿಗೌಡ, ಎಚ್.ಆರ್.ಮಹೇಶ್, ಪಂಚಾಕ್ಷರಿ, ಆಶಾ, ಮಹೇಶ್, ಬಸಮ್ಮಣಿ, ತಾಪಂ ಮಾಜಿ ಸದಸ್ಯ ಶಿವಣ್ಣ, ಕಾಡಾ ಅಧ್ಯಕ್ಷ ಸುರೇಶ್, ಸಮಾಜ ಸೇವಕ ತಾಲೂಕು ಜೆಡಿಎಸ್ ಮುಖಂಡ ಹರವೆ ಶ್ರೀಧರ್, ಗ್ರಾಮದ ಯಜಮಾನರಾದ ಚಂದ್ರಹಾಸ, ಹುಚ್ಚನಾಯಕ, ರಾಮೇಗೌಡ, ಜೆಡಿಎಸ್ ಪಕ್ಷದ ಮುಖಂಡರಾದ ವಿಜಯ್ ಪುಟ್ಟರಾಜ್, ಕೃಷ್ಣನಾಯ್ಕ, ಧರ್ಮ, ಕೊತ್ತೇಗಾಲ ಜಯರಾಮೇಗೌಡ, ಪಿಡಿಓ ಕವಿತಾ. ಜಿ. ಹಾಗೂ ಹಲವಾರು ಮುಖಂಡರು, ಸಾರ್ವಜನಿಕರು ಹಾಜರಿದ್ದರು.

ರಸ್ತೆ ಬದಿ ಅಂಗಡಿಯಲ್ಲಿ ಟೀ ಕುಡಿದು ಸಂಧ್ಯಾ ಸುರಕ್ಷಾ ಆದೇಶ ಪತ್ರ ನೀಡಿದ ಶಾಸಕರು



ಹುಣಸೂರು, ನ.30– ನಗರದ ಬೈಪಾಸ್ ರಸ್ತೆಯ ಕೋರ್ಟ್ ಮುಂಭಾಗ ರಸ್ತೆ ಬದಿ ಟೀ ಸ್ಟಾಲ್ ನಡೆಸುತ್ತಿರುವ ವಯೋವೃದ್ಧ ನಾಗಣ್ಣ ದೇವಾಡಿಗ ಅವರ ಟೀ ಸ್ಟಾಲ್‌ಗೆ ಶಾಸಕ ಜಿ.ಟಿ. ಹರೀಶ್‌ಗೌಡರು ಭೇಟಿ ನೀಡಿ, ಟೀ ಕುಡಿದು ದಸಂಸದ ನಿಂಗರಾಜ್ ಮಲ್ಲಾಡಿ, ಕೆಂಪರಾಜ ಬಲ್ಲೇನಹಳ್ಳಿ, ದೇವೇಂದ್ರ ಕುಳವಾಡಿ ಇವರುಗಳು ಮಂಜೂರು ಮಾಡಿಸಿದ್ದ ಸಂಧ್ಯಾಸುರಕ್ಷ ಯೋಜನೆಯ ಆದೇಶ ಪತ್ರವನ್ನು ನೀಡಿದರು.

ನನಗೆ ಯಾರೂ ಇಲ್ಲ ಎಂದುಕೊಳ್ಳುವವರಿಗೆ ನಾನಿದ್ದೇನೆ ಎನ್ನುವ ಶಾಸಕರ ಹೃದಯವಂತಿಕೆಯ ಮಾತು ಭರವಸೆಯ ಬೆಳಕನ್ನು ಮೂಡಿಸಿದೆ.

ಈ ಸಂದರ್ಭದಲ್ಲಿ ಶಾಸಕರು ಮಾತನಾಡಿ, ಶಾಸಕರ ಮನೆಗೆ ಬಡವ ಬರುವುದಲ್ಲ, ಬದಲಾಗಿ ಶಾಸಕರೇ ಬಡವನ ಮನೆಗೆ ಬಂದು ಅವರ ನೋವುಗಳಿಗೆ ಸ್ಪಂದಿಸಬೇಕು ಎಂಬುದೇ ನನ್ನ ಭಾವನೆ ಎಂದರು. ದಸಂಸದ ಇಂತಹ ಸಾಮಾಜಿಕ ಕಾರ್ಯವನ್ನು ಶಾಸಕರು ಇದೇ ವೇಳೆ ಪ್ರಶಂಸಿಸಿದರು.

ಶತಮಾನ ಕಳೆದರೂ ಮಹನೀಯರ ತತ್ವಗಳು ಜೀವಂತ

ಕಂಪಲಾಪುರ: ದಾಸಶ್ರೇಷ್ಠ ಭಕ್ತ ಕನಕದಾಸರ ತತ್ವಗಳು, ಕೀರ್ತನೆಗಳು ಎಷ್ಟು ಶತಮಾನ ಕಳೆದರೂ ಜೀವಂತ ಎಂದು ಸರ್ಕಾರಿ ಪ್ರೌಢಶಾಲೆ ಹಿರಿಯ ಶಿಕ್ಷಕಿ ಶಾರದಮ್ಮ ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಾರ ಆಯೋಜಿಸಿದ್ದ ಕನಕದಾಸರ 536ನೇ ಜಯಂತಿಯಲ್ಲಿ ಮಾತನಾಡಿ, ಸಹಸ್ರ ವರ್ಷಗಳು ಕಳೆದರೂ ಭಾರತದ ಹಿರಿಮೆಯನ್ನು ಅಳಿಸಲು ಸಾಧ್ಯವಿಲ್ಲ. ಯಾಕೆಂದರೆ ಈ ಮಣ್ಣಿನಲ್ಲಿ ಅಂತದೊಂದು ಶಕ್ತಿ ಇದೆ. ಭಕ್ತಿಯ ನೆಲೆಗಟ್ಟಿನಲ್ಲಿ ದೇಶನಿಂತಿದೆ ಎಂದರು.

ಕನ್ನಡ ಸಾಹಿತ್ಯದಲ್ಲಿ ಮೂರು ವಿಭಾಗಗಳಿದ್ದು ಜೈನ ಸಾಹಿತ್ಯ, ಶರಣಸಾಹಿತ್ಯ, ದಾಸ ಸಾಹಿತ್ಯವಿದ್ದು ಕನಕದಾಸರು ಷಟ್ಪದಿ, ದಾಸ ಸಾಹಿತ್ಯದಲ್ಲಿ ಕೀರ್ತನೆಗಳನ್ನು ಬರೆದಿದ್ದಾರೆ ಎಂದರು. ಮುಖ್ಯಶಿಕ್ಷಕ ಮಹದೇವಯ್ಯ, ಶಿಕ್ಷಕ ಸಂಜಯ್, ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ ಕನಕ ಜಯಂತಿ ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಿಕ್ಷಕಿ ಪೂರ್ಣಿಮ ಹಾಗೂ 10ನೇ ತರಗತಿ ವಿದ್ಯಾರ್ಥಿಗಳು ಕನಕದಾಸರ ಕೀರ್ತನೆಗಳನ್ನು ಹಾಡಿದರು. ಎಸ್‌ಡಿಎಂಸಿ ಸದಸ್ಯ ರಾಜೇಶ್, ಶಹಜಾನ್, ಶಿಕ್ಷಕರಾದ ಪ್ರಸನ್ನ, ಮಹೇಶ್, ಗೀತಾ, ಸುಜಾತ, ಭಾಗ್ಯ, ಭಾವನ, ಗಿರಿಜ, ಶಾಲಿನಿ ಹಾಜರಿದ್ದರು.

ನಂಬಿಕೆ ಇರುವ ಕಡೆ, ಭಗವಂತ ಇರುತ್ತಾನೆ: ಸುತ್ತೂರು ಶ್ರೀಗಳು

ಯಡಹಳ್ಳಿ ಗ್ರಾಮದಲ್ಲಿ ಸಿದ್ದೇಶ್ವರಸ್ವಾಮಿ ಸಮುದಾಯ ಭವನ ಉದ್ಘಾಟನೆ



ಬನ್ನೂರು/ತಿ.ನರಸೀಪುರ, ನ.30– ಮನುಷ್ಯ ನಂಬಿಕೆ, ವಿಶ್ವಾಸ ಇಟ್ಟು ಪೂಜಿಸಿದರೆ, ಭಗವಂತ ತನ್ನಷ್ಟಕ್ಕೆ ತಾನೇ ಭಕ್ತಾದಿಗಳಿಗೆ ಕಾರುಣ್ಯವಾದ ಕಿರಣಗಳನ್ನು ಹರಿಸುತ್ತಾನೆ. ನಂಬಿಕೆ ಎಲ್ಲಿರುತ್ತದೋ ಅಲ್ಲಿ ಭಗವಂತ ಇರುತ್ತಾನೆ ಎಂದು ಸುತ್ತೂರು ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ಹೇಳಿದರು.

ತಾಲೂಕಿನ ಯಡಹಳ್ಳಿ–ದಾಸೇಗೌಡನ ಕೊಪ್ಪಲು ಗ್ರಾಮದಲ್ಲಿ ಯಡಹಳ್ಳಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಕ್ತಾದಿಗಳ ವಂತಿಗೆ ಹಣದಲ್ಲಿ ಅಂದಾಜು 2.5 ಕೋಟಿ ರೂ.ಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಿದ್ದೇಶ್ವರಸ್ವಾಮಿ ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಮನುಷ್ಯ ಭೌತಿಕ ಬಯಕೆಗಳನ್ನು ಈಡೇರಿಸುವ ದೇವರ ಕಡೆಗೆ ಮಾತ್ರ ಆಕರ್ಷಿತನಾಗಿರುವುದಿಲ್ಲ, ಆತನ ಮನಸ್ಸಿಗೆ ಯಾವುದು ಸಾಂತ್ವನ ನೀಡುತ್ತದೋ ಆ ದೇವರಲ್ಲಿ ಆತ ಶ್ರದ್ಧೆಯಿಂದ ನಡೆದುಕೊಳ್ಳುತ್ತಾನೆ. ಇದು ಭಾರತೀಯ ಸಂಸ್ಕೃತಿಯ ಪದ್ಧತಿ ಹಾಗೂ ಪರಂಪರೆಯಾಗಿದೆ. ಕುಲದೇವರಿರಬಹುದು, ಮನೆ ದೇವರಿರಬಹುದು ಯಾರು ಯಾವ ದೇವರಲ್ಲಿ ನಂಬಿಕೆ ಇಟ್ಟಿರುತ್ತಾರೋ ಆ ದೇವರು ನಮ್ಮ ಶ್ರೇಯಸ್ಸನ್ನೇ ಯಾವತ್ತೂ ಬಯಸುತ್ತಾನೆ ಎಂಬುದು ಆಯಾಯ ಮನೆಗಳ, ಕುಲಗಳ ನಂಬಿಕೆಯಾಗಿರುತ್ತದೆ ಎಂದರು.

ಜನರು ಮೆಚ್ಚುವುದು ಮುಖ್ಯವಲ್ಲ!: ದೇವರ ಸನ್ನಿಧಿಯಲ್ಲಿ ನಿಂತಾಗ ಹೇಗೆ ನಾವು ಒಳ್ಳೆಯದನ್ನೇ ಮಾಡಬೇಕು, ಕೆಟ್ಟದ್ದನ್ನು ಮಾಡಬಾರದು ಎಂಬ ಭಾವನೆ ಬರುತ್ತದೋ, ಆ ಭಗವಂತ ನಮ್ಮೊಳಗೂ ಇದ್ದಾನೆ ಎಂದಾಗ ನಾವೂ ಕೂಡ ಜೀವನದಲ್ಲಿ ಒಳ್ಳೆಯದೇ ಮಾಡಬೇಕು ಎಂಬ ಭಾವನೆ ಮೂಡಲು ಸಾಧ್ಯವಾಗುತ್ತದೆ. ಜನಮೆಚ್ಚುವ ಹಾಗೆ ಬದುಕಬಾರದು ಎಂದ ಅವರು, ಆತ್ಮ ಸಾಕ್ಷಿಗೆ ಪೂರಕವಾಗಿ ಬದುಕಬೇಕು ಎಂದು ತಿಳಿಸಿದರು.

ಸಿದ್ದೇಶ್ವರ ದೇವಸ್ಥಾನ ಜಾಗೃತ ಸ್ಥಳ!

ಯಡಹಳ್ಳಿ ಗ್ರಾಮದಲ್ಲಿ ನೆಲೆಗೊಂಡಿರುವ ಸಿದ್ದೇಶ್ವರ ಸ್ವಾಮಿ ದೇವಸ್ಥಾನ ಒಂದು ಜಾಗೃತವಾದ ನೆಲೆಯಾಗಿದ್ದು, ಭಕ್ತರ ಅಧೀಷ್ಟೆಗಳನ್ನು ಪೂರೈಸುವ ಕರುಣಾಮೂರ್ತಿ ನೆಲೆಸಿರುವ ಸ್ಥಳ ಇದಾಗಿದೆ. 140ಕ್ಕೂ ಹೆಚ್ಚು ಗ್ರಾಮಗಳ ಗ್ರಾಮಸ್ಥರು ಸಿದ್ದೇಶ್ವರಸ್ವಾಮಿಯನ್ನು ಮನೆತನದ ದೇವರಾಗಿ ಭಾವಿಸಿ ಶ್ರದ್ಧಾಭಕ್ತಿಗಳಿಂದ ನಡೆದುಕೊಳ್ಳುತ್ತಾರೆ. ಅವರಷ್ಟೇ ಅಲ್ಲದೇ ಇತರೆ ಭಕ್ತಾದಿಗಳು ಕೂಡ ಈ ಕ್ಷೇತ್ರಕ್ಕೆ ಭಕ್ತಿಯನ್ನು ಸಮರ್ಪಣೆ ಮಾಡುವಂತಹ ಒಳ್ಳೆಯ ಪರಂಪರೆಯನ್ನು ರೂಢಿಸಿಕೊಂಡಿದ್ದಾರೆ ಎಂದು ಶ್ರೀಗಳು ಹೇಳಿದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಮುಡುಕನಪುರ ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.

ಇದಕ್ಕೂ ಮೊದಲು ಸಮುದಾಯ ಭವನ ಉದ್ಘಾಟನೆಗೆ ಆಗಮಿಸಿದ ಶ್ರೀಗಳನ್ನು ಗ್ರಾಮದ ಮುಖ್ಯ ದ್ವಾರದ ಬಳಿ ಅದ್ದೂರಿಯಾಗಿ, ಸ್ವಾಗತಿಸಲಾಯಿತು. ನೂರಾರು ಮಂದಿ ಮಹಿಳೆಯರು ಪೂರ್ಣ ಕುಂಭ ಸ್ವಾಗತ ನೀಡಿ ಸ್ವಾಮೀಜಿಗಳನ್ನು ಬರಮಾಡಿಕೊಂಡರು. ಬೆಳ್ಳಿ ರಥದಲ್ಲಿ ವಿರಾಜಮಾನರಾದ ಶ್ರೀಗಳು ಮೆರವಣಿಗೆಯ ಮೂಲಕ ದೇವಸ್ಥಾನ ತಲುಪಿ ಸಮುದಾಯ ಭವನ ಉದ್ಘಾಟಿಸಿ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಭಕ್ತಾದಿಗಳಿಗೆ ಆಶೀರ್ವಚನ ನೀಡಿದರು.

ಈ ವೇಳೆ ಮದ್ದಾಗ್ರಲಿಂಗಯ್ಯನ ಹುಂಡಿ ವಿರಕ್ತ ಮಠದ ಪೀಠಾಧ್ಯಕ್ಷರಾದ ಶ್ರೀ ಗೌರಿಶಂಕರ ಸ್ವಾಮೀಜಿ.ಚಿದರವಳ್ಳಿ ಬೊಮ್ಮನಹಳ್ಳಿಯ ಪಾರಮಾರ್ಥಿಕ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿ, ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ಎ.ಬಿ.ರಮೇಶ್ ಬಾಬು ಬಂಡಿ ಸಿದ್ದೇಗೌಡ,ಮಾಜಿ ಶಾಸಕ ಎಸ್. ಕೃಷ್ಣಪ್ಪ, ಮೈಮೂಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್, ಹಾಲಿ ಸದಸ್ಯ ಆರ್.ಚೆಲುವರಾಜು, ಪ್ರಥಮ ದರ್ಜೆ ಗುತ್ತಿಗೆದಾರ ಎ.ಎನ್.ಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಚಾಮೇಗೌಡ, ಎಇಇ ಸತೀಶ್ ಚಂದ್ರ ಹೆಚ್.ಕೆ.ಪುಟ್ಟಸ್ವಾಮಿಗೌಡ, ಸಿದ್ದೇಶ್ವರ ಚಾರಿಟಬಲ್ ಟ್ರಸ್ಟ್ ಗೌರವಾಧ್ಯಕ್ಷ ಬೋರಯ್ಯ, ಅಧ್ಯಕ್ಷ ದೇವರಾಜು, ಉಪಾಧ್ಯಕ್ಷ ಬಿ.ಸಿ.ಸಿದ್ದೇಗೌಡ, ಕಾರ್ಯದಲ್ಲಿ ಎಂ.ಸಿದ್ದೇಗೌಡ, ಜಿ.ಬಿ.ಲಲಿತಮ್ಮ, ಸಹ ಕಾರ್ಯದರ್ಶಿ ಜಿ.ಎಸ್.ರಾಮು, ಖಜಾಂಚಿ ನಾಗೇಗೌಡ, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್. ಯಾಚನಹಳ್ಳಿ ಅಶೋಕ್ ದಯಾನಂದ್ ಪಟೇಲ್ ಮರಿಗೌಡ ಹಾಜರಿದ್ದರು

> ಮದ್ದಾಗ್ರಲಿಂಗಯ್ಯನ ಹುಂಡಿ ವಿರಕ್ತ ಮಠದ ಪೀಠಾಧ್ಯಕ್ಷರಾದ ಶ್ರೀ ಗೌರಿಶಂಕರ ಸ್ವಾಮೀಜಿ ಮಾತನಾಡಿ, ಬಡವರು, ದೀನ ದಲಿತರ ಕಲ್ಯಾಣಕ್ಕಾಗಿ ಯಡಹಳ್ಳಿ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣವಾಗಿದೆ. ಟ್ರಸ್ಟ್‌ನವರು ಬಡವರಿಗೆ ಕಡಿಮೆ ವೆಚ್ಚದಲ್ಲಿ ಬಾಡಿಗೆ ನೀಡುವ ಉದ್ದೇಶ ಹೊಂದಿದ್ದಾರೆ. ಪ್ರಸ್ತುತ ದಿನಗಳಲ್ಲಿ ಬಡವರಿಗೆ ಮದುವೆ ಮಾಡುವುದು ಕಷ್ಟಕರವಾಗಿ ಒಡವೆ,ಜಮೀನು ಮಾರಿ ಮದುವೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಟ್ರಸ್ಟ್ ವತಿಯಿಂದ ಬಡವರಿಗೆ ಸಮುದಾಯ ಭವನವನ್ನು ಉಚಿತವಾಗಿ ನೀಡಿದಲ್ಲಿ ಎಷ್ಟೋ ಸಹಾಯವಾಗುತ್ತದೆ. ಹಾಗಾಗಿ ಟ್ರಸ್ಟ್‌ನವರು ನಮ್ಮ ಮನವಿಯನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅನಾವರಣ (ಕ) 2 ಪ್ರದರ್ಶನಗಳು; ಗಾರುಡಿಗ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಅನಿಮಲ್ (ಹಿಂ)	2 ಪ್ರದರ್ಶನಗಳು
ರಾಜಕಮಲ್	
ಅನ್ನಪೂರ್ಣೆ (ತ)	4 ಪ್ರದರ್ಶನಗಳು
ಸಂಗಂ	
ಗರಡಿ (ಕ)	4 ಪ್ರದರ್ಶನಗಳು
ಲಿಡೋ	
ಸ್ಯಾಮ್ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ಪ್ರಭಾ	
ರಾಖಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶುಗರ್ ಫ್ಯಾಕ್ಟರಿ (ಕ): ಮ.1.25ಕ್ಕೆ, ಸಂ.4.15ಕ್ಕೆ, ನೆಪೋಲಿಯನ್ (ಇಂ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಬ್ಯಾಡ್ ಮ್ಯಾನರ್ಸ್ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಕಾಥಲ್ ದಿ ಕೋರ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಕಾಥಲ್ ದಿ ಕೋರ್ (ಮ): ಬೆ.10.45ಕ್ಕೆ, ಫೆರ್ರಿ (ಹಿಂ): ಮ.1.05ಕ್ಕೆ, ವಿಶ್ (3ಡಿ) (ಇಂ): ಮ.3.20ಕ್ಕೆ, ಸಂ.5.25ಕ್ಕೆ, ಸ್ವಾತಿ ಮುತ್ತಿನ ಮಳೆ ಹನಿಯೇ (ಕ): ರಾ.7.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.3.55ಕ್ಕೆ.
ಸ್ಕ್ರೀನ್ 4	ಅನಿಮಲ್ (ಹಿಂ): ಬೆ.8.05ಕ್ಕೆ, ಮ.12.10ಕ್ಕೆ, ಅರ್ಧಂ ಬರ್ಧ ಪ್ರೇಮ ಕಥೆ (ಕ): ಸಂ.4.15ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ರಾ.7.10ಕ್ಕೆ, ಪಾರ್ಕಿಂಗ್ (ತ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೆ.ಆರ್.ನಗರದಲಿ ಕನಕದಾಸರ ಜಯಂತಿ ಆಚರಣೆ



ಕೆ.ಆರ್.ನಗರ, ನ.30– ಸರ್ವ ಜಾತಿಯವರು ಸಹ ಸಾಮರಸ್ಯದಿಂದ ವಿಶ್ವಾಸ ಹಾಗೂ ನಂಬಿಕೆಯಿಂದ ಬದುಕುವಂತೆ ತಮ್ಮ ಕೀರ್ತನೆಗಳ ಮೂಲಕ ಸಮಾಜಕ್ಕೆ ಸಂದೇಶವನ್ನು ನೀಡಿದಂಥ ಮಹಾನ್ ಸಂತ ಕನಕದಾಸರು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ಮಿನಿ ಆಡಳಿತ ಸೌಧದ ಹೊರಾಂಗಣದಲ್ಲಿ ನಡೆದ ಭಕ್ತ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕುಲ ಕುಲವೆಂದು ಏಕೆ ಒಡೆದಾಡುವಿರಿ ಎಂದ ಶಾಸಕರು, ಇರುವುದೊಂದೇ ಪುರುಷರು ಮತ್ತು ಮಹಿಳೆಯರು. ಅದಕ್ಕಾಗಿಯೇ ಇರುವುದೊಂದೇ ಮನುಜ ಕುಲವೆಂದು ಭಕ್ತ ಕನಕದಾಸರು ಹೇಳಿದ್ದಾರೆ ಎಂದು ತಿಳಿಸಿದರು.

ಶಾಸಕನಾದ ನನ್ನಿಂದ ಸಮಾಜ ಪರಿವರ್ತನೆ ಮತ್ತು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಸರ್ವರು ಸಹಕಾರ ನೀಡಿ ನನ್ನ ಜೊತೆಯಲ್ಲಿ ನಿಂತರೆ ನಾಲ್ಕೂವರೆ ವರ್ಷಗಳಲ್ಲಿ ಸಮಗ್ರಅಭಿವೃದ್ಧಿ ಮಾಡುವ ಭರವಸೆ ನೀಡಿದರು.

ಪ್ರಧಾನ ಭಾಷಣಕಾರ ಪುರಸಭೆ ಮುಖ್ಯಾಧಿಕಾರಿ ಡಾ. ಜಯಣ್ಣ ಮಾತನಾಡಿ, ಕನಕದಾಸ ಕವಿಯಾಗಿ ದಂಡನಾಯಕನಾಗಿ ಧ್ವನಿ ಇಲ್ಲದವರ ಧ್ವನಿಯಾಗಿ ಸಮಾಜದ ಕಟ್ಟಕಡೆಯ ಜನರ ಪರವಾಗಿ ತಮ್ಮದೇ ಆದ ಕೀರ್ತನೆಗಳ ಮೂಲಕ ಪ್ರಚಾರ ಮಾಡಿದ ಮಹಾನ್ ಸಂತ ಕನಕದಾಸರು ಎಂದರು.

ಕಾರ್ಯಕ್ರಮವನ್ನು ಉದ್ದೇಶಿಸಿ ತಹಸಿಲ್ದಾರ್ ಪೂರ್ಣಿಮಾ, ಇಓ ಎಚ್.ಕೆ.ಹರೀಶ್, ಕುರುಬರ ಸಂಘದ ತಾಲೂಕು ಅಧ್ಯಕ್ಷ ಚಿರನಹಳ್ಳಿ ಶಿವಣ್ಣ, ಮುಖಂಡ ಕುಪ್ಪೆ ಪ್ರಕಾಶ್ ಮಾತನಾಡಿದರು. ವೇದಿಕೆಯಲ್ಲಿ ಪುರಸಭಾ ಸದಸ್ಯರಾದ ನಟರಾಜ್, ಶಿವುನಾಯಕ್, ಶಂಕರ್, ಮುಖಂಡರಾದ ಮೂಡಲ್‌ಕೊಪ್ಪಲು ಕೃಷ್ಣೇಗೌಡ, ಶ್ರೀನಿವಾಸ್, ವೀರಭದ್ರ ಆಚಾರ್, ಎಂ.ಜೆ.ರಮೇಶ್, ಗರುಡಗಂಬದ ಸೋಮಣ್ಣ, ಸಮಾಜ ಕಲ್ಯಾಣಾಧಿಕಾರಿ ಅಶೋಕ್ ಕುಮಾರ್, ಬಿಇಓ ಕೃಷ್ಣಪ್ಪ, ತಾಲೂಕು ಆರೋಗ್ಯ ಆಡಳಿತ ಅಧಿಕಾರಿ ಡಾ.ನಟರಾಜ್, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ಮಹೇಶ್ ಹಾಜರಿದ್ದರು.

ತಮ್ಮೇಗೌಡ ನಿಧನ



ಹಿರೀಕ್ಯಾತನಹಳ್ಳಿ, ನ.30– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ನಂಜಾಪುರ ಬಡಾವಣೆಯ ತಮ್ಮೇಗೌಡ(71) ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂಕಣಕಾರ ತ್ರಿಪುರಾಂತಕರಿಗೆ ರಾಯಭಾರಿ ಕನ್ನಡ ಲೇಖಕ; ಲಕ್ಷ್ಮೀ ಸತೀಶ್‌ಗೆ ರಾಯಭಾರಿ ಪ್ರಾಣಿ ದಯಾ ಪ್ರಶಸ್ತಿ ಪ್ರದಾನ



ಮೈಸೂರು, ನ.30(ಎಂಕೆ)– ಮೈಸೂರು ಅಂಬಾಸಿಡರ್ಸ್ ಲಯನ್ಸ್ ಸಂಸ್ಥೆ ವತಿಯಿಂದ ಖ್ಯಾತ ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಅವರಿಗೆ 'ರಾಯಭಾರಿ ಕನ್ನಡ ಲೇಖಕ' ಹಾಗೂ ಲಕ್ಷ್ಮೀ ಸತೀಶ್ ಅವರಿಗೆ 'ರಾಯಭಾರಿ ಪ್ರಾಣಿ ದಯಾ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮೈಸೂರು ಅಂಬಾಸಿಡರ್ಸ್ ಲಯನ್ಸ್ ಸಂಸ್ಥೆ ಅಧ್ಯಕ್ಷ ಹೆಚ್.ಸಿ.ಕಾಂತರಾಜು ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಸ್ವೀಕರಿಸುವುದಕ್ಕೂ ಮುನ್ನ ಕನ್ನಡ ಭಾಷೆ ಕುರಿತು ಮಾತನಾಡಿದ ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಅವರು, ಹೊಟ್ಟೆಪಾಡಿಗಾಗಿ ಹತ್ತು ಭಾಷೆ ಕಲಿತರೂ, ಕನ್ನಡವೇ ನಮ್ಮ ಹೃದಯ ಭಾಷೆಯಾಗಿರಲಿ. ಅಂತರರಾಷ್ಟ್ರೀಯ ಭಾಷಾ ವ್ಯಾಮೋಹದಿಂದ ನಮ್ಮ ಮಾತೃಭಾಷೆಯನ್ನು ಮರೆಯುವಂತಾಗಿದೆ. ಮಕ್ಕಳ ಬಾಲ್ಯದಲ್ಲಿ ತಾಯಿ ಭಾಷೆ, ಮಾತೃ ಭಾಷೆ ಹಾಗೂ ಅಮ್ಮನ ಭಾಷೆ ಅರ್ಥವಾಗುವಷ್ಟು ಯಾವ ಭಾಷೆಯೂ ಅರ್ಥವಾಗುವುದಿಲ್ಲ ಎಂದರು.

ನಿತ್ಯೋತ್ಸವವಾಗಬೇಕು: ಕನ್ನಡ ಭಾಷೆಯಲ್ಲಿ ಅಧ್ಯಯನ ಮಾಡಿದವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಆದ್ದರಿಂದ ನಮ್ಮ ಮಕ್ಕಳಿಗೆ ಕನಿಷ್ಟ ಪ್ರಾಥಮಿಕ ಶಿಕ್ಷಣವಾದರೂ ಕನ್ನಡ ಭಾಷೆಯಲ್ಲಿರಬೇಕು. ಮಾತೃ ಭಾಷೆಯಲ್ಲಿ ಯಾರು ಪ್ರಾಥಮಿಕ ಶಿಕ್ಷಣ ಪಡೆಯುತ್ತಾರೋ ಅವರು 10 ಭಾಷೆಗಳನ್ನು ಕಲಿಯುವ ಪ್ರವೀಣರಾಗಿರುತ್ತಾರೆ. ಆದ್ದರಿಂದ ಕನ್ನಡವೆಂಬುದು ನವೆಂಬರ್ ತಿಂಗಳಿಗೆ ಸೀಮಿತವಾಗದೆ ನಿತ್ಯೋತ್ಸವವಾಗಬೇಕು ಎಂದು ಹೇಳಿದರು.

ದೇವರ ಹೆಸರಲ್ಲಿ ಕೊಳಕು: ಯೂರೋಪ್ ದೇಶಗಳಲ್ಲಿ ನದಿಗಳನ್ನು ಪೂಜಿಸುವುದಿಲ್ಲ. ಆದರೆ ಅವರು ಪೂಜಿಸದಿದ್ದರೂ ನದಿಗೆ ಯಾವುದೇ ಪದಾರ್ಥವನ್ನು ಬಿಸಾಡುವುದಿಲ್ಲ. ನಾವುಗಳು ಗಂಗೆ, ತುಂಗೆ, ಕಾವೇರಿ, ಕಪಿಲಾ ಎಂದು ಪೂಜಿಸುತ್ತಲೇ ಎಲ್ಲಾ ಬಗೆಯ ತ್ಯಾಜ್ಯಗಳನ್ನು ನದಿಗೆ ಎಸೆಯುತ್ತಾ ದೇವರ ಹೆಸರಿನಲ್ಲಿ ಕೊಳಕು ಮಾಡುತ್ತಿದ್ದೇವೆ. ಕೆಲ ಜೋತಿಷಿಗಳ ಮಾತು ಕೇಳಿ ಇನ್ನರ್‌ವೇರ್(ಒಳ ಉಡುಪು)ಗಳನ್ನು ಸಹ ನದಿಗೆ ಬಿಸಾಡುವ ಕೊಳಕು ಕೆಲಸ ಮಾಡುತ್ತಿದ್ದೇವೆ ಎಂದು ವಿಷಾದಿಸಿದರಲ್ಲದೆ, ಈ ನೆಲದ ಸಂಸ್ಕೃತಿ ಮೇಲೆ ಬೇರೆ ಸಂಸ್ಕೃತಿಗಳ ಅವಲಂಬನೆ ಹೆಚ್ಚಾಗುತ್ತಿದೆ. ಇದೆಲ್ಲದರ ಪರಿಣಾಮದಿಂದಾಗಿ ಮಾತೃಭಾಷೆ, ಮಾತೃ ಭೂಮಿಯ ಶ್ರೀಮಂತಿಕೆ ನಮಗೆ ತಿಳಿಯುತ್ತಿಲ್ಲ ಎಂದರು. ಮೈಸೂರು ಅಂಬಾಸಿಡರ್ಸ್ ಲಯನ್ಸ್ ಸಂಸ್ಥೆ ಕಾರ್ಯದರ್ಶಿ ಸಿ.ಆರ್.ದಿನೇಶ್, ಖಜಾಂಚಿ ಕೆ.ಟಿ.ವಿಷ್ಣು, ಪಿ.ಬಿ.ಕರುಣಾಕರ್, ಪಿ.ಪುಟ್ಟಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ವಾರ್ಡ್ ನಂ.44ರ ವ್ಯಾಪ್ತಿಯ ಜನತಾನಗರ ಮತ್ತು ಬೋಗಾದಿ 2ನೇ ಹಂತದಲ್ಲಿ 45 ಲಕ್ಷ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಡಾಂಬರೀಕರಣಕ್ಕೆ ಶಾಸಕರಾದ ಜಿ.ಟಿ.ದೇವೇಗೌಡರು ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಪಾಲಿಕೆ ನಿಕಟಪೂರ್ವ ಸದಸ್ಯೆ ಸವಿತಾ ಸುರೇಶ್, ನಿವಾಸಿಗಳ ಸಂಘದ ಅಧ್ಯಕ್ಷ ಸುರೇಶ್, ಟೆಂಟ್ ಕುಮಾರ್, ಶಶಿಧರ್, ಶಿವರಾಮೇಗೌಡ, ಸೊಸೈಟಿ ಕುಮಾರ್, ಲೋಕೇಶ್, ಪ್ರಸಾದ್, ರಮೇಶ್, ಮಂಜು, ಶಿವಲಿಂಗು ಇತರರಿದ್ದಾರೆ.

ಸಿದ್ದಪ್ಪಾಜಿ, ಸುಬ್ರಹ್ಮಣ್ಯಸ್ವಾಮಿ 13ನೇ ವರ್ಷದ ಕುಂಭಾಭಿಷೇಕ





ಮೈಸೂರು, ನ30 (ಎಸ್‌ಬಿಡಿ)– ಮೈಸೂರಿನ ಕನ್ನೇಗೌಡನ ಕೊಪ್ಪಲು ಪೈಲ್ವಾನ್ ಬಸವಯ್ಯನವರ ವೃತ್ತದ ಬಳಿಯಿರುವ ಅಶ್ವಥ ಕಟ್ಟೆ ಶ್ರೀ ಮಹಾ ಗಣಪತಿ, ಶ್ರೀ ಸಿದ್ದಪ್ಪಾಜಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ 13ನೇ ವರ್ಷದ ಕುಂಭಾಭಿಷೇಕ ಮಹೋತ್ಸವ ಡಿಸೆಂಬರ್ 1 ಮತ್ತು 2ರಂದು ಜರುಗಲಿದೆ.

ಶುಕ್ರವಾರ ಗೋಧೂಳಿ ಲಗ್ನದಲ್ಲಿ ಅನುಜ್ಞೆ, ಅಗ್ರ ತೀರ್ಥ ಸಂಗ್ರಹ, ಯಾಗಶಾಲಾಪ್ರವೇಶ, ಗಣಪತಿ ಪೂಜಾ ಪೂರ್ವಕ, ಪುಣ್ಯಾಹ, ಪಂಚ ಗವ್ಯ ಸಾಧನ, ಸಂಪ್ರೋಕ್ಷಣೇ, ಗಣಹೋಮ, ನವಗ್ರಹ ಪೂಜೆ ಮೃತ್ಯುಂಜಯ ಪೂಜೆಹೋಮ ಪ್ರಧಾನ ಕಳಸ ಸ್ಥಾಪನೆ, ಶನಿವಾರ ಬೆಳಗ್ಗೆ 8.50ಕ್ಕೆ ಪೂರ್ಣಾಹುತಿ, 9.10ಕ್ಕೆ ಧನಸ್ಸು ಲಗ್ನದಲ್ಲಿ ಕುಂಭಾಭಿಷೇಕ ಅಲಂಕಾರ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ತೀರ್ಥಪ್ರಸಾದ ವಿನಿಯೋಗ ಮತ್ತು ಅನ್ನಸಂತರ್ಪಣೆ ನೆರವೇರಲಿದೆ.

ಶ್ರೀ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾಮಠದ ಶ್ರೀ ಸೋಮನಾಥ ಸ್ವಾಮೀಜಿ, ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್‌ಗಳಾದ ಶಿವಕುಮಾರ್, ಆರ್. ಲಿಂಗಪ್ಪ ಮಾಜಿ ಕಾರ್ಪೊರೇಟರ್‌ಗಳಾದ ಎಂ.ಶಿವಕುಮಾರ್, ಲಕ್ಷ್ಮಿ ಮಾದೇಗೌಡ, ಗೋಪಿ, ಕೆ.ಎಂ. ಶಂಕರ್, ಕೆಂಪಣ್ಣ, ಚನ್ನಪ್ಪ, ನಿಂಗಣ್ಣ, ಎಸ್.ಬಾಲು ಮತ್ತಿತರರ ಗಣ್ಯರು ಭಾಗವಹಿಸಲಿದ್ದಾರೆ ಎಂದು ದೇವಸ್ಥಾನದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಕ್ತ ಕನಕದಾಸರ ಜಯಂತಿ ಆಚರಣೆ



ಮೈಸೂರು, ನ.30(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿನ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ದಾಸಶ್ರೇಷ್ಠ ಭಕ್ತ ಕನಕದಾಸರ 536ನೇ ಜಯಂತಿ ಆಚರಿಸಲಾಯಿತು.

ಭಕ್ತ ಕನಕದಾಸರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಜಯಂತಿ ಆಚರಣೆ ಕಾರ್ಯಕ್ರಮ ಉದ್ಘಾಟಿಸಿದ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ ಮಾತನಾಡಿ, ದಾಸಶ್ರೇಷ್ಠ ಭಕ್ತ ಕನಕದಾಸರು ಸಮ ಸಮಾಜದ ನಿರ್ಮಾತೃಗಳಲ್ಲಿ ಅಗ್ರಗಣ್ಯರಾಗಿದ್ದಾರೆ. ಕನ್ನಡ ಸಾಹಿತ್ಯ ಕಂಡ ಅಪ್ರತಿಮ ಶ್ರೇಷ್ಠ ಕೀರ್ತನಾಕಾರರಾದ ಕನಕ ದಾಸರು, ತಮ್ಮ ಕೃತಿಗಳ ಮೂಲಕವೂ ಸಮಾಜಕ್ಕೆ ಕೊಡುಗೆಯನ್ನು ನೀಡುವ ಕೆಲಸವನ್ನು ಮಾಡಿದ್ದಾರೆ ಎಂದು ಸ್ಮರಿಸಿದರು. ಬಳಿಕ ವಿದುಷಿ ಸಿ.ಆರ್.ರಾಜಲಕ್ಷ್ಮಿ, ಸುಶ್ಮಿತಾ ಹಾಗೂ ಶಾರದ ಅಯ್ಯರ್ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು. ತಬಲವಾದನ ದಲ್ಲಿ ಎಂ.ಆರ್.ಉದಯ್‌ಕುಮಾರ್, ಕೀಬೋರ್ಡ್‌ನಲ್ಲಿ ಜಿ.ಎಸ್.ಉದಯ ರಾಜು ಉತ್ತಮ ಸಹಕಾರ ನೀಡಿದರು. ನಿರೂಪಕ ಅಜಯ್ ಶಾಸ್ತ್ರಿ ನಂದ ಕುಮಾರ್, ಶ್ರೀನಿಧಿ, ಒಂಟಿಕೊಪ್ಪಲು ಗುರುರಾಜ್ ಮತ್ತಿತರರಿದ್ದರು.

ಸಾರ್ವಜನಿಕರ ಪ್ರಕಟಣೆ

ಬೆಂಗಳೂರು, ಬೆಂಗಳೂರು ದಕ್ಷಿಣ, ಗಿರಿನಗರ, ಮುನೇಶ್ವರ ಬ್ಲಾಕ್, ವಿವೇಕಾನಂದ ಪಾರ್ಕ್ ಹತ್ತಿರ, 19ನೇ ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆ, ಮನೆ ನಂ.11 ರಲ್ಲಿ ವಾಸವಾಗಿರುವ ಶ್ರೀ.ಪುಟ್ಟರಾಜು ಎಂ. ರವರ ಧರ್ಮಪತ್ನಿ ಶ್ರೀಮತಿ. ಜಯಲಕ್ಷ್ಮೀ ರವರಿಂದ ಮೈಸೂರು–570017, ವಿಜಯನಗರ 2ನೇ ಹಂತ, 17ನೇ ಮೇನ್, 7ನೇ ಕ್ರಾಸ್, ಮನೆ ನಂ. 4296 ರಲ್ಲಿ ವಾಸವಾಗಿರುವ ಶ್ರೀ ಎನ್.ಕೃಷ್ಣ ರವರ ಮಗನಾದ ಶ್ರೀ. ಮನು ಪ್ರಸಾದ್ ಕೆ. ಆದ ನನ್ನ ಕಕ್ಷಿಗಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕು ಭಾಧ್ಯತೆ ಇದ್ದಲ್ಲಿ ಈ ದಿನದಿಂದ 07 (ಏಳು) ದಿನದೊಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 07 (ಏಳು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 07 (ಏಳು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಮೂಕನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.103 ರ ವಿಸ್ತೀರ್ಣ 1 ಎಕರೆ 30 ಗುಂಟೆ ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ. 101, 106 (102) ಎಸ್.ಬಿ. ಫ್ರಾನ್ಸಿಸ್ ರವರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 168 ಕರಪ ರವರ ಜಮೀನು ; ಉತ್ತರಕ್ಕೆ : ಸರ್ವೆ ನಂ. 102 ಎಸ್.ಬಿ.ಫ್ರಾನ್ಸಿಸ್ ರವರ ಜಮೀನು ; ದಕ್ಷಿಣಕ್ಕೆ : ಸರ್ವೆ ನಂ. 105 ರ ಜಮೀನು.

Sd/- S. PRADEEP KUMAR, M.BA, LLB Roll No KAR/1332/2012, Advocate #2917/A, 1st Floor, Opp. TTL College Kantharaja Urs Road, Saraswathipuram, Mysuru-570 009. Mob: 9740315184

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಚಿಕ್ಕಬೀಚನಹಳ್ಳಿ ಅಂಚೆ, ಚಿಕ್ಕಬೀಚನಹಳ್ಳಿ ಹುಂಡಿ ಗ್ರಾಮದಲ್ಲಿ ವಾಸವಾಗಿರುವ ಲೇಟ್.ಕೆಂಪೇಗೌಡ ರವರ ಮಗನಾದ ಶ್ರೀ. ಚಂದ್ರೇಗೌಡ ಕೆ. ರವರಿಂದ ಮೈಸೂರು–570017. ವಿಜಯನಗರ 2ನೇ ಹಂತ, 17ನೇ ಮೇನ್, 7ನೇ ಕ್ರಾಸ್, ಮನೆ ನಂ.4296 ರಲ್ಲಿ ವಾಸವಾಗಿರುವ ಶ್ರೀ. ಎನ್.ಕೃಷ್ಣ ರವರ ಮಗನಾದ ಶ್ರೀ. ಮನು ಪ್ರಸಾದ್ ಕೆ. ಆದ ನನ್ನ ಕಕ್ಷಿಗಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕು ಭಾಧ್ಯತೆ ಇದ್ದಲ್ಲಿ ಈ ದಿನದಿಂದ 07 (ಏಳು) ದಿನದೊಳಗೆ ತಮ್ಮ ಲಿಖಿತ ತಕರಾರಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 07 (ಏಳು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 07 (ಏಳು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಮೂಕನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.103 ಹಾಲಿ ರೀ ಸರ್ವೆ ನಂ.168 ರ ವಿಸ್ತೀರ್ಣ 2 ಎಕರೆ ಜಮೀನಿಗೆ ಚೆಕ್ಕುಬಂದಿ:–ಪೂರ್ವಕ್ಕೆ : ಜಯಲಕ್ಷ್ಮಿ ರವರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂ.167 ರ ಜಮೀನು, ಉತ್ತರಕ್ಕೆ : ಸರ್ವೆ ನಂ.102 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ.105 ರ ಜಮೀನು.

Sd/- S. PRADEEP KUMAR, M.BA.,LLB Roll No KAR/1332/2012 ADVOCATE #2917/A, 1st Floor, Opp. TTL College Kantharaja Urs Road, Saraswathipuram MYSURU-570 009. Mob.: 9740315184

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848 E-mail: purchamul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ವಿವಿಧ ಸರಕುಗಳನ್ನು ಖರೀದಿಸಲು ಮತ್ತು ವಿವಿಧ ಸೇವೆಗಳನ್ನು ಪಡೆಯುವ ಸಂಬಂಧ ನಿಗದಿ ಪಡಿಸಲಾದ ಷರತ್ತುಗಳನೊಳಗೊಂಡ ಅರ್ಹಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ www.kppp.karnataka.gov.in ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರಸಂ	ಸರಕು / ಸೇವೆಗಳ ವಿವರ	ಟೆಂಡರ್ ಸಂಖ್ಯೆ	ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಕೊನೆಯ ದಿನಾಂಕ
01	Supply of Firewood on Annual Rate contract basis	KMF/2023-24/IND0457	ದಿನಾಂಕ: 01.12.2023 ರಿಂದ 15.12.2023 ರವರೆಗೆ
02	Supply of Batteries on Buy-back basis	KMF/2023-24/IND0458	
03	Supply of Milk Carry Bags	KMF/2023-24/IND0459	
04	Supply of T-Shirts	KMF/2023-24/IND0460	
05	Disposable of Scrap Items on Annual Rate contract basis at CHAMUL	KMF/2023-24/IND0461	
06	Providing transportation service to carry Raw Chilled Milk, providing Car to visit societies and Emergency route on Biennial Rate contract basis	KMF/2023-24/SE1137	ದಿನಾಂಕ: 01.12.2023 ರಿಂದ 30.12.2023 ರವರೆಗೆ

ಹೆಚ್ಚಿನ ಮಾಹಿತಿಗಾಗಿ ಕ್ರಸಂ 1 ರಿಂದ 5 ರವರೆಗೆ ವ್ಯವಸ್ಥಾಪಕರು (ಆಡಳಿತ/ಖರೀದಿ–ಮೊ.ಸಂ:7760968421) ಮತ್ತು ಕ್ರಸಂ 6 ಕ್ಕೆ ವ್ಯವಸ್ಥಾಪಕರು (ಶೇ.ಪ–ಮೊ.ಸಂ:9741741046) ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು